ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ



Volume : 8 Issue : 243 Pages : 4 Price : 3.00 Friday November 03, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25







# ಗದಗ ಜಿಲ್ಲೆಯಲ್ಲಿ ಅಭಿವೃದ್ಧಿ ಪರ್ವ

ಗದಗ ನೂತನ ಜಿಲ್ಲೆಯಾಗಿ 25 ವರ್ಷಗಳನ್ನು ಪೂರ್ಣಗೊಳಿಸಿದ್ದು, ಅಭಿವೃದ್ಧಿ ವಿಷಯದಲ್ಲಿಯೂ ಸಾಕಷ್ಟು ದಿಟ್ಟ ಹೆಜ್ಜೆಗಳನ್ನೇ ಇಟ್ಟಿದೆ. ತಂತ್ರಜ್ಞಾನ ಒಳಗೊಳ್ಳುವಿಕೆ ಜೊತೆಜೊತೆಗೆ ಜಿಲ್ಲೆಯ ಮೂಲ ಸೌಲಭ್ಯ ಅಭಿವೃದ್ಧಿಗೆ ಆದ್ಯತೆ ದೊರೆತಿದೆ. ಜಿಲ್ಲೆಯು ಎಲ್ಲ ರಂಗಗಳಲ್ಲಿಯೂ ಅಭಿವೃದ್ಧಿಯನ್ನು ಕಂಡಿದ್ದು, ಜಿಲ್ಲೆಗಳೊಟ್ಟಿಗೆ ರಾಜ್ಯದಲ್ಲಿ ಇನ್ನೂ ಹಲವಾರು ಜಿಲ್ಲೆಗಳಾಗಿ ಘೋಷಣೆಯಾಗಿವೆ. ಆದರೆ, ಅಭಿವೃದ್ಧಿ ವೇಗದಲ್ಲಿ ಗದಗ ಜಿಲ್ಲೆ ಸಾಕಷ್ಟು ಮುಂಚೂಣಿಯಲ್ಲಿದೆ.



ನೂತನ ಜಿಲ್ಲೆಯಾದ ಬಳಿಕ ಹುಬ್ಬಳ್ಳಿ ರಸ್ತೆಗೆ ಹೊಂದಿಕೊಂಡು ರಾಜ್ಯದಲ್ಲಿಯೇ ಮಾದರಿಯಾದ ಭವ್ಯ ಜಿಲ್ಲಾಡಳಿತ ಭವನ ಸ್ಥಾಪನೆಗೊಂಡಿದೆ. ಜಿಲ್ಲಾಧಿಕಾರಿ ಹಾಗೂ ಜಿ.ಪಂ.ನ 43ಕ್ಕೂ ಅಧಿಕ ಇಲಾಖೆಗಳು ಒಂದೇ ಸೂರಿನಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸಾರ್ವಜನಿಕರಿಗೆ, ಅಧಿಕಾರಿಗಳಿಗೆ ಜನಸಾಮಾನ್ಯ ಕೆಲಸ ಕಾರ್ಯಗಳಿಗೆ ವೇಗ ಸಿಕ್ಕಿದೆ, ಸಾಮಾನ್ಯರಿಗೂ ಎಲ್ಲ ಇಲಾಖೆಗಳು ಒಂದೆಡೆ ಸಿಗುವಂತಾಗಿದೆ. ಇದೇ ರಸ್ತೆಯಲ್ಲಿ ಅತ್ಯಂತ ಸುಸಜ್ಜಿತ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಾಣವಾಗಿದೆ. ಹೊಸ ಬಸ್ ನಿಲ್ದಾಣ ಅದರ ಪಕ್ಕದಲ್ಲಿಯೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಾರ್ಯಾಲಯ ನಿರ್ಮಾಣವಾಗಿದೆ.




ಕ್ರೀಡಾ ಉತ್ತೇಜನಕ್ಕಾಗಿ ಅದರಲ್ಲಿಯೂ ಹಾಕಿ ಮಾಂತ್ರಿಕ ಧ್ಯಾನಚಂದ್ ಅವರೊಂದಿಗೆ ಹಾಕಿ ಆಡಿದ್ದ ಗದಗ ನಗರದ ಸೆಟ್ಲಮೆಂಟ್ ಭಾಗದ ನಿವಾಸಿಯಾಗಿದ್ದ ಬೀನು ಭಾಟ್ ಅವರಿಂದ ಪ್ರೇರಿತವಾಗಿ ನೂರಾರು ಹಾಕಿ ಪಟುಗಳಿದ್ದು ಅವರೆಲ್ಲರ ಅನುಕೂಲಕ್ಕಾಗಿ ಸೆಟ್ಲಮೆಂಟ್ ಗಾಂಧಿ ಕ್ರೀಡಾಂಗಣದಲ್ಲಿ ಅತ್ಯಾಧುನಿಕ ಸಿಂಥೆಟಿಕ್ ಹಾಕಿ ಕ್ರೀಡಾಂಗಣ ನಿರ್ಮಾಣವಾಗಿದೆ. ರಿಂಗ್ ರೋಡ್‌ನಲ್ಲಿ ಅಂಬೇಡ್ಕರ್ ಭವನ, ಕನಕದಾಸ ಭವನ, ವಾಲ್ಮೀಕಿ ಭವನಗಳು ಸೇರಿದಂತೆ ಎಲ್ಲ ಸಮುದಾಯಗಳಿಗೂ ಅತ್ಯಂತ ಅಚ್ಚುಕಟ್ಟಾದ ಭವನಗಳು ನಿರ್ಮಾಣವಾಗಿವೆ.



ಜಿಲ್ಲೆಯ ಸಾಹಿತ್ಯ ಚಟುವಟಿಕೆಗಳಿಗೆ ಪ್ರೋತ್ಸಾಹಕ್ಕೆ 5 ಕೋಟಿ ವೆಚ್ಚದಲ್ಲಿ ಸಾಹಿತ್ಯ ಭವನ, 5 ಕೋಟಿ ವೆಚ್ಚದಲ್ಲಿ ಲಿಂ. ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಸ್ಮಾರಕ ಭವನ, ಮುರಿಗೆಪ್ಪ ಚೆಟ್ಟಿ ಆರ್ಟ ಗ್ಯಾಲರಿ, ಜಿಲ್ಲಾ ರಂಗಮಂದಿರ ನಿರ್ಮಾಣವಾಗಿದ್ದು, ಜಿಲ್ಲೆಯ ಸಾಂಸ್ಕೃತಿಕ ಮೆರಗನ್ನು ಹೆಚ್ಚಿಸಿವೆ. ನರಸಾಪುರ ಸಮೀಪದಲ್ಲಿ 5 ಕೋಟಿ ವೆಚ್ಚದಲ್ಲಿ ರಾಜ್ಯ ಕ್ರಿಕೆಟ್ ಸಂಸ್ಥೆಯಿಂದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾಗುತ್ತಿದೆ. ಬೆಂಗಳೂರು ಹೊರತು ಪಡಿಸಿ ಎಲ್ಲೂ ಇಲ್ಲದ ತಾರಾಲಯ 5 ಕೋಟಿ ವೆಚ್ಚದಲ್ಲಿ ಹಾಗೂ 4 ಕೋಟಿ ವೆಚ್ಚದಲ್ಲಿ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ ನಿರ್ಮಾಣವಾಗಿದೆ. ಇಂಡಸ್ಟ್ರೀಯಲ್ ಎಸ್ಟೇಟಿನಲ್ಲಿ ವಿನೂತನವಾದ ವಸ್ತು ಪ್ರದರ್ಶನ ಕೇಂದ್ರ ಸ್ಥಾಪನೆಗೆ 8 ಕೋಟಿ ಯೋಜನೆ ಪ್ರಾರಂಭಿಕ ಹಂತದಲ್ಲಿದೆ.





ಗದಗ-ಹುಬ್ಬಳ್ಳಿ ರಸ್ತೆಗೆ ಹೊಂದಿಕೊಂಡು 13.23 ಕೋಟಿ ವೆಚ್ಚದಲ್ಲಿ ಜಿಲ್ಲಾ ನ್ಯಾಯಾಲಯ ಸಂಕೀರ್ಣ, 4 ಕೋಟಿ ವೆಚ್ಚದಲ್ಲಿ ನ್ಯಾಯಾಧೀಶರ ವಸತಿ ಗೃಹಗಳು, ಲಕ್ಷ್ಮೇಶ್ವರದಲ್ಲಿ 2.30 ಕೋಟಿ ವೆಚ್ಚದಲ್ಲಿ ಸೀನಿಯರ್ ಜಡ್ಜ್ ಕೋರ್ಟ್ ಕಟ್ಟಡ, 90 ಲಕ್ಷ ಅನುದಾನದಲ್ಲಿ ಎಪಿಪಿ ಕಟ್ಟಡ, ರೋಣ ತಾಲೂಕಿನಲ್ಲಿ 90 ಲಕ್ಷ ವೆಚ್ಚದಲ್ಲಿ ಎಪಿಪಿ ಕಟ್ಟಡ ಹಾಗೂ 3.71 ಕೋಟಿ ವೆಚ್ಚದಲ್ಲಿ 1ನೇ ನ್ಯಾಯಾಧೀಶರ ಕೋರ್ಟ್ ಹಾಲ್ ಕಟ್ಟಡ, ಮುಂಡರಗಿಯಲ್ಲಿ 14.72 ಕೋಟಿ ವೆಚ್ಚದಲ್ಲಿ ಬೃಹತ್ ನ್ಯಾಯಾಲಯ ಸಂಕೀರ್ಣ, 1.10 ಕೋಟಿ ವೆಚ್ಚದಲ್ಲಿ ನ್ಯಾಯಾಧೀಶರ ವಸತಿ ಗೃಹಗಳು ನಿರ್ಮಾಣವಾಗಿವೆ.

## ನೀರಾವರಿ ಯೋಜನೆ



ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಒಂದು ಜಿಲ್ಲೆಯ ಎಲ್ಲ ಜನವಸತಿಗಳಿಗೆ ನದಿ ಮೂಲದ ನೀರು ಪೂರೈಕೆ ಮಾಡುವ ಬೃಹತ್ತಾದ 1046 ಕೋಟಿ ವೆಚ್ಚದ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡು ಇತಿಹಾಸ ನಿರ್ಮಿಸಿದೆ. ರೈತರ 4 ದಶಕಗಳ ಕನಸಾಗಿದ್ದ ಸಿಂಗಟಾಲೂರು ಏತ ನೀರಾವರಿ ಯೋಜನೆ ಇತ್ತೀಚೆಗಷ್ಟೇ ಸಾಕಾರಗೊಂಡಿದೆ.



ಮುಂಡರಗಿ ತಾಲೂಕಿನ ಹಮ್ಮಿಗಿ ಸಮೀಪ 1488 ಕೋಟಿ ವೆಚ್ಚದ ಏತ ನೀರಾವರಿ ಯೋಜನೆ ಸಾಕಾರಗೊಂಡಿದ್ದು, ದೇಶದ ಅತೀ ದೊಡ್ಡ ಹನಿ ನೀರಾವರಿ ಯೋಜನೆಯಾಗಿ ರೂಪಿತವಾಗಿದ್ದು, ಮುಂಡರಗಿ ತಾಲೂಕಿನ 92281 ಎಕರೆ ಹಾಗೂ ಗದಗ ತಾಲೂಕಿನ 66827 ಎಕರೆ ಭೂಮಿ ಹನಿ ನೀರಾವರಿ ಮೂಲಕ ನೀರಾವರಿ ಸೌಲಭ್ಯ ದೊರೆಯುತ್ತಿದೆ.

ದೇಶದಲ್ಲಿಯೇ ರೈಲುಗಳ ಮೂಲಕ ನೀರು ಪೂರೈಕೆಯನ್ನು ಪಡೆದಿದ್ದ ನಗರ ಎನ್ನುವ ಅಪಕೀರ್ತಿಗೆ ಗುರಿಯಾಗಿದ್ದ ಗದಗ- ಬೆಟಗೇರಿ ಅವಳಿ ನಗರಕ್ಕೆ ನಿರಂತರ ನೀರು ಪೂರೈಕೆ ಮಾಡಲು 107 ಕೋಟಿ ವೆಚ್ಚದಲ್ಲಿ 24x7 ಕುಡಿಯುವ ನೀರು ಪೂರೈಕೆ ಯೋಜನೆ ಜಾರಿಯಾಗಿದ್ದು, ಒಟ್ಟು 234 ಕಿ.ಮೀ. ಪೈಪ್‌ಲೈನ್ ಅಳವಡಿಸಿ ಸಧ್ಯ ನೀರು ಪೂರೈಕೆ ಮಾಡಲಾಗುತ್ತಿದೆ. ರೋಣ, ನರೇಗಲ್, ಗಜೇಂದ್ರಗಡ, ಮುಂಡರಗಿ, ಲಕ್ಷ್ಮೇಶ್ವರ, ಶಿರಹಟ್ಟಿ, ನರಗುಂದ, ಗದಗ ತಾಲೂಕು ಕೇಂದ್ರಗಳಲ್ಲಿಯೂ ಕುಡಿಯುವ ನೀರು ಪೂರೈಕೆಗೆ ವಿಶೇಷ ಆದ್ಯತಾ ವಲಯವಾಗಿ ನೀಡಿ ನೀರು ಪೂರೈಕೆ ಮಾಡಲಾಗುತ್ತಿದೆ.



## ಗದಗ ಕಲೆ, ಸಾಹಿತ್ಯ, ಸಂಸ್ಕೃತಿಯ ಬೀಡು



ಗದಗ ಜಿಲ್ಲೆ ಕಲೆ, ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮ, ಸಂಗೀತ, ಕ್ರೀಡೆ, ಸಹಕಾರ, ರಾಜಕೀಯ, ಔದ್ಯೋಗಿಕ ರಂಗದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದ ಶಿಲ್ಪ ಕಲೆಗಳ ಬೀಡಾಗಿದೆ. ಜಿಲ್ಲೆಯ ಹೆಸರನ್ನು ಸಂತರು-ಶರಣರು-ಸೂಫಿಗಳು-ದಾರ್ಶನಿಕರು, ಕವಿ-ಕಲಾವಿದರು ಚಿರಸ್ಥಾಯಿಗೊಳಿಸಿ ಗೌರವವನ್ನು ಹೆಚ್ಚಿಸಿದ್ದಾರೆ. ಗುಡ್ಡದಿಂದ ಸುತ್ತುವರೆದು, ತುಂಗೆ, ಮಲಪ್ರಭಾ ನದಿಗಳನ್ನು ತನ್ನ ಒಡಲೊಳಗೆ ಸೇರಿಕೊಂಡಿದೆ. ನಿತ್ಯ ಹರಿದ್ವರ್ಣದ ಕಪ್ಪತ್ತಗುಡ್ಡದ ಸಾಲು ನೀರಾವರಿ ನೇಗಿಲ ಯೋಗಿಗಳಿಗೆ ಬದುಕಿನ ನೆಲೆ ಒದಗಿಸಿ ಹಸಿರುಗೊಳಿಸಿದೆ. ದೇವಾಲಯಗಳು, ಪ್ರಾಚೀನ ಸ್ಮಾರಕಗಳು, ಮಂದಿರ, ಮಸೀದಿ, ದರ್ಗಾ, ಚರ್ಚ್, ಬಸದಿಗಳು ಸಮಾಜ ಸುಧಾರಕರು, ಸಂಗೀತ ದಿಗ್ಗಜರು, ಕ್ರೀಡಾಪಟುಗಳಿಂದ ಪ್ರಖ್ಯಾತಿ ಹೊಂದಿದೆ.



**ಸಾಹಿತ್ಯ-ಸಂಗೀತ :** ಜಿಲ್ಲೆಯಲ್ಲಿ ಪ್ರಾಚೀನ ಕವಿಗಳಲ್ಲಿ ಕುಮಾರವ್ಯಾಸ, ನಯಸೇನ, ಚಾಮರಸ ಕವಿ, ಸವಡಿಯ ದುರ್ಗಸಿಂಹ, ಒಂದನೇ ನಾಗವರ್ಮ, ದಾನಚಿಂತಾಮಣಿ ಅತ್ತಿಮಬ್ಬೆ, ಪಂಡಿತ್ ಭೀಮಸೇನ ಜೋಶಿ, ಪಂಡಿತ್ ಪುಟ್ಟರಾಜ ಗವಾಯಿಗಳು ಮುಂತಾದವರು ಸಾಂಸ್ಕೃತಿಕವಾಗಿ ಸಾಹಿತ್ಯಿಕವಾಗಿ ಶ್ರೀಮಂತಗೊಳಿಸಿದ್ದಾರೆ.

ಕೋಮು ಸೌಹಾರ್ದತೆಯನ್ನು ಸಾರಿದ ಶಿರಹಟ್ಟಿ ಫಕೀರಸ್ವಾಮಿ ಮಠ, ವರವಿಯ ಮೌನೇಶ್ವರ, ಗದುಗಿನ ತೋಂಟದಾರ್ಯ ಮಠ, ಕನ್ನಡ ಮಠ ಎಂದು ಕರೆಯಲ್ಪಡುವ ಗಜೇಂದ್ರಗಡದ ಮೈಸೂರು ಮಠದ ವಿಜಯಮಹಾಂತ ಸ್ವಾಮಿಗಳು, ಬೈರನಹಟ್ಟಿ ದೊರೆಸ್ವಾಮಿ ವಿರಕ್ತ ಮಠದ ಶಾಂತಲಿಂಗ ಮಹಾಸ್ವಾಮಿಗಳು, ಗಜೇಂದ್ರಗಡದವರಾದ ಚಿಂಚಣಿ ಸಿದ್ಧ ಸಂಸ್ಥಾನ ಮಠದ ಅಲ್ಲಮಪ್ರಭು ಸ್ವಾಮೀಜಿ ಬೆಳಗಾವಿ ಭಾಗದಲ್ಲಿ ಕನ್ನಡ ಕಹಳೆ ಮೊಳಗಿಸುತ್ತಿದ್ದಾರೆ. ಮುಂಡರಗಿ ಅನ್ನದಾನ ಮಹಾಸ್ವಾಮಿಗಳು, ಹಾಲಕೆರೆಯ ಅನ್ನದಾನೇಶ್ವರ ಮಠ, ಗಜೇಂದ್ರಗಡದ ಟಕ್ಕೇದ ದರ್ಗಾ, ಲಕ್ಷ್ಮೇಶ್ವರದ ದೂದಪೀರಾ ದರ್ಗಾ, ನರೇಗಲ್ಲನ ಹಠಯೋಗಿ ಹುಚ್ಚೀರಪ್ಪಜ್ಜನವರು ಮುಂತಾದವರು ಹಿಂದೂ-ಮುಸ್ಲಿಂ ಏಕತೆಯನ್ನು ಎತ್ತಿ ಹಿಡಿಯುವ ಸೌಹಾರ್ದತೆ ಸಹಬಾಳ್ವೆ, ಸಮಾನತೆ ತೋರುವ, ಧರ್ಮ-ಧರ್ಮಗಳ ನಡುವೆ ಇರುವ ಕಂದಕವನ್ನು ತೊಲಗಿಸಿ, ಮಾನವೀಯ ಮೌಲ್ಯಗಳನ್ನು ಹಾಗೂ ರಾಮ-ರಹೀಮ ಎಂಬ ದೇವರುಗಳನ್ನು ಒಂದಾಗಿ ಕಾಣುವಂತೆ ಮಾಡಿದ್ದಾರೆ. ಶತಮಾನದ ಹಿಂದೆಯೇ ವೀರನಾರಾಯಣ, ತ್ರಿಕೂಟೇಶ್ವರ ಹಾಗೂ ಜುಮ್ಮಾ ಮಸೀದಿಗೆ ಒಂದೇ ಟ್ರಸ್ಟ್ ಹೊಂದಿದ್ದು ಕೋಮು ಸೌಹಾರ್ದತೆಗೆ ಇದಕ್ಕಿಂತ ಒಳ್ಳೆಯ ಉದಾಹರಣೆ ಬೇಕೆ?



50 ಇಲಾಖೆಗಳು ಒಂದೇ ಕಡೆ ಕಾರ್ಯನಿರ್ವಹಿಸುವ ಜಿಲ್ಲಾಡಳಿತ ಭವನ, ಸುಸಜ್ಜಿತವಾದ ಜಿಲ್ಲಾ ಆಸ್ಪತ್ರೆ, ವೈದ್ಯಕೀಯ ಕಾಲೇಜು, ಪಶು ವೈದ್ಯಕೀಯ ಮಹಾವಿದ್ಯಾಲಯ, ಕ್ರೀಡಾ ಕ್ಷೇತ್ರದಲ್ಲಿ ಫುಟ್ಬಾಲ್ ಕ್ರೀಡಾಂಗಣ, ಸುಸಜ್ಜಿತವಾದ ಒಳಾಂಗಣ ಕ್ರೀಡಾಂಗಣ, ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ಪಶುವೈದ್ಯಕೀಯ ಮಹಾವಿದ್ಯಾಲಯ, ತಾರಾಲಯ ಮತ್ತು ಈಜುಕೊಳ ಅಭಿವೃದ್ಧಿ ಹೊಂದಿದ್ದು ಹತ್ತಾರು ವೈಶಿಷ್ಟ್ಯತೆಗಳೊಂದಿಗೆ ನಾಡಿನಲ್ಲಿ ಗುರುತಿಸಿಕೊಂಡು, ಹೊಸ ಹುಮ್ಮಸ್ಸು ಶಕ್ತಿ-ಸಾಮರ್ಥ್ಯಗಳೊಂದಿಗೆ ದಾಪುಗಾಲು ಇಡುತ್ತಿದೆ.







### ಪಂಚ ಗ್ಯಾರಂಟಿಗಳ ಮೂಲಕ ಬದುಕಿನಲ್ಲಿ ಬದಲಾವಣೆ

ನಮ್ಮ ಸರ್ಕಾರದ ಮಹತ್ವದ ಯೋಜನೆಗಳಾದ ಪಂಚ ಗ್ಯಾರಂಟಿ ಯೋಜನೆಗಳಿಗೆ ಉತ್ತಮವಾದ ಸ್ಪಂದನೆ ದೊರೆತಿದ್ದು, ಜಿಲ್ಲೆಯಲ್ಲಿ ಎಲ್ಲಾ 5 ಯೋಜನೆಗಳು ಸೇರಿ ಒಟ್ಟು ಈಗಾಗಲೇ ಶೇ. 90 ಕ್ಕಿಂತಲೂ ಅಧಿಕ ಪ್ರಗತಿ ಸಾಧಿಸಲಾಗಿದೆ. ಗೃಹ ಲಕ್ಷ್ಮಿ ಯೋಜನೆಯಲ್ಲಿ ಶೇ. 94 ರಷ್ಟು ಮಹಿಳೆಯರಿಗೆ ಹಣ ವರ್ಗಾವಣೆಯಾಗುತ್ತಿದೆ. ಇನ್ನು ಅನ್ನಭಾಗ್ಯ ಯೋಜನೆಯಲ್ಲಿ ಅರ್ಹವಿರುವ ಶೇ. 97.3 ರಷ್ಟು ಜನರಿಗೂ ಡಿಬಿಟಿ ಮೂಲಕ ಪ್ರತಿ ತಿಂಗಳು ಹಣ ವರ್ಗಾವಣೆ ಮಾಡಲಾಗುತ್ತಿದೆ. ಬಹುಮುಖ್ಯವಾಗಿ ಶಕ್ತಿ ಯೋಜನೆಯಲ್ಲಿ 2 ಕೋಟಿಗೂ ಹೆಚ್ಚಿನ ಸಂಖ್ಯೆಯ ಮಹಿಳೆಯರು ಪ್ರವಾಸ ಮಾಡಿದ್ದಾರೆ. ನಮ್ಮ ಅತ್ಯಮೂಲ್ಯ ಈ ಪಂಚಗ್ಯಾರಂಟಿ ಯೋಜನೆಗಳ ಮೂಲಕ ಲಕ್ಷಾಂತರ ಬಡವರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಯು ಮೂಡಿದ್ದು, ಒಮ್ಮೆಲೇ ಕೋಟ್ಯಾಂತರ ಜನರನ್ನು ಬಡತನ ರೇಖೆಗಿಂತ ಮೇಲೆತ್ತುವ ಕಾರ್ಯ ಗದಗ ಜಿಲ್ಲೆಯ ಜನರಲ್ಲಿ ನೆಮ್ಮದಿ ಮೂಡಿಸಿದೆ.

**ಶ್ರೀ ಎಚ್.ಕೆ. ಪಾಟೀಲ.**
**ಕಾನೂನು ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರು.**













# ಕಲೆ-ವಾಸ್ತುಶಿಲ್ಪಕ್ಕೆ ಕೃತಪುರದ ಕೊಡುಗೆ ಅನನ್ಯ

ಶಾಸನಗಳಲ್ಲಿ ಕೃತಪುರ ಎಂದು ಉಲ್ಲೇಖಗೊಂಡಿರುವ ಗದಗ ಜಿಲ್ಲೆ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಲಕ್ಕುಂಡಿಯ ದೇವಾಲಯಗಳು ಸೇರಿದಂತೆ ಜಿಲ್ಲೆಯ ಹಲವು ದೇವಾಲಯಗಳು ತಮ್ಮ ತಲವಿನ್ಯಾಸ ಮತ್ತು ಸೂಕ್ಷ್ಮ ಕೆತ್ತನೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿವೆ.

ಚಾಲುಕ್ಯ ಶೈಲಿಯಿಂದ ವೈಭವಯುತವಾದ ಹೊಯ್ಸಳ ಶೈಲಿಗೆ ಸಾಗುವ ಕರ್ನಾಟಕದ ವಾಸ್ತುಶಿಲ್ಪ ಶೈಲಿಯ ಮಧ್ಯಂತರದ ಶೈಲಿಯನ್ನು ಗದಗ ಪ್ರದೇಶದಲ್ಲಿ ಕಾಣಬಹುದಾಗಿದೆ. ಈ ಪ್ರದೇಶದ ದೇವಾಲಯಗಳು ರಚನಾತ್ಮಕ ವಿನ್ಯಾಸ ಮತ್ತು ವಿಶಿಷ್ಟ ರೀತಿಯ ಮೂರ್ತಿ ಶಿಲ್ಪಗಳಿಗೆ ಹೆಸರಾಗಿವೆ.





ಜಿಲ್ಲೆಯಲ್ಲಿ 200ಕ್ಕೂ ಹೆಚ್ಚು ದೇವಾಲಯಗಳು ರಚನೆಯಾಗಿದ್ದು, ಬಹುತೇಕ ದೇವಾಲಯಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣಗೊಂಡಿವೆ.

ಗದಗ ಪ್ರಾಚೀನ ಕಾಲದಿಂದಲೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದು, ರಾಷ್ಟ್ರಕೂಟರ ಕಾಲದಿಂದ ವಿಜಯನಗರದ ಕಾಲದ ವರೆಗೆ ಇಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡು ಇಲ್ಲಿನ ವಾಸ್ತುಶಿಲ್ಪ ವೈಭವಕ್ಕೆ ಸಾಕ್ಷಿಯಾಗಿದೆ. ಇಲ್ಲಿನ ತ್ರಿಕೂಟೇಶ್ವರ ದೇವಾಲಯ ಒಂದೇ ದೇವಾಲಯವಾಗಿರದೇ ದೇವಾಲಯಗಳ ಸಂಕೀರ್ಣದಲ್ಲಿರುವ ಪ್ರಮುಖ ದೇವಾಲಯವಾಗಿದೆ. ಮೂಲತಃ ರಾಷ್ಟ್ರಕೂಟದ ಶೈಲಿಯ ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು ಅನಂತರ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನವರಂಗ ಹಾಗೂ ಸಭಾಮಂಟಪಗಳನ್ನು ಸೇರಿಸಲಾಗಿದೆ. ಗರ್ಭಗೃಹ, ಚೌಕಾಕಾರದ ತಲವಿನ್ಯಾಸವನ್ನು ಹೊಂದಿದ್ದು ಎತ್ತರವಾದ ಒಂದೇ ಪಾಣಿಪೀಠದ ಮೇಲೆ ಮೂರು ಲಿಂಗಗಳು ಕಂಡುಬರುತ್ತವೆ. ಗದುಗಿನ ತ್ರಿಕೂಟೇಶ್ವರ ದೇವಾಲಯ ಸಂಕೀರ್ಣದಲ್ಲಿರುವ ಸರಸ್ವತಿ ದೇವಾಲಯವು ಗದಗ ಜಿಲ್ಲೆಯ ದೇವಾಲಯಗಳಲ್ಲಿಯೇ ಅತ್ಯುತ್ತಮ ದೇವಾಲಯಗಳಲ್ಲೊಂದಾಗಿದೆ.

ಗದಗ ನಗರದ ವೀರನಾರಾಯಣ ದೇವಾಲಯ ಕುಮಾರವ್ಯಾಸನ ಕರ್ಮಭೂಮಿ, ಈ ದೇವಾಲಯವು ವಿಜಯನಗರ ಕಾಲದ ಭವ್ಯ ರಾಯಗೋಪುರವನ್ನು ಹೊಂದಿದೆ ಇಲ್ಲಿಯೇ ಒಂದು ಕಂಬದ ಕೆಳಗೆ ಕುಳಿತು ಮಹಾಕವಿ 'ಕುಮಾರವ್ಯಾಸ' ಕರ್ನಾಟಕ ಕಥಾ ಮಂಜರಿ ಬರೆದನೆಂದು ಪ್ರತೀತಿ ಇದೆ.

ಕರ್ನಾಟಕ ಶಿಲ್ಪಕಲಾ ಮುಕುಟಮಣಿಯಾಗಿರುವ ಲಕ್ಕುಂಡಿ ಅನೇಕ ಸುಂದರವಾದ ದೇವಾಲಯ ಹಾಗೂ ಬಾವಿಗಳಿಂದ ಕೂಡಿದ್ದು, ವಾಸ್ತುಶಿಲ್ಪಕಲಾ ವೈಭವದ ನಾಡಾಗಿದೆ. ಕ್ರಿ.ಶ. 1117ರಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆ ಈ ಜಿನಾಲಯವನ್ನು ನಿರ್ಮಿಸಿ ಹಲವಾರು ದಾನ ದತ್ತಿಗಳನ್ನು ನೀಡಿದಳು.


ಗರ್ಭಗೃಹದಲ್ಲಿ ನೇಮಿನಾಥನ ಆಕರ್ಷಕ ವಿಗ್ರಹವಿದೆ. ಈ ದೇವಾಲಯದ ಅರ್ಧ ಮಂಟಪದಲ್ಲಿರುವ ಬ್ರಹ್ಮನ ವಿಗ್ರಹವು ಕಲ್ಯಾಣ ಚಾಲುಕ್ಯರ ಕಲಾ ಕೌಶಲ್ಯದ ಪ್ರತೀಕವಾಗಿದ್ದು, ಗದುಗಿನಲ್ಲಿರುವ ಸರಸ್ವತಿ ವಿಗ್ರಹದಷ್ಟೇ ಆಕರ್ಷಕವಾಗಿದೆ. ಇದು ಸ್ಥಾನಕ ಭಂಗಿಯಲ್ಲಿದ್ದು, ಚತುರ್ಮುಖಗಳನ್ನು ಹೊಂದಿದ್ದು ತೇಜೋಮಯವಾಗಿದೆ.

ಲಕ್ಕುಂಡಿಯ ದೇವಾಲಯಗಳಲ್ಲಿಯೇ ವಾಸ್ತು ಶಿಲ್ಪಕಲಾ ದೃಷ್ಟಿಯಿಂದ ಪ್ರಮುಖವಾದುದೆಂದರೆ ಕಾಶಿ ವಿಶ್ವೇಶ್ವರ ದೇವಾಲಯ. ಈ ದೇವಾಲಯದ ದಕ್ಷಿಣದ್ವಾರದ ಬಾಗಿಲವಾಡವು ನವಶಾಖೆಗಳನ್ನು ಹೊಂದಿದ್ದು, ತನ್ನ ಸೂಕ್ಷ್ಮಕೆತ್ತನೆಗಾಗಿ ವಿಶ್ವಪ್ರಸಿದ್ಧವಾಗಿದೆ. ಪ್ರಾಚೀನ ಕಾಲದಲ್ಲಿ ಜೈನ ಕೇಂದ್ರವಾಗಿದ್ದ ಮುಳಗುಂದ ಮುನಿಗುಂದವೆಂದು ಹೆಸರಾಗಿದೆ. ಇಲ್ಲಿನ ಪಾರ್ಶ್ವನಾಥ, ಚಂದ್ರನಾಥ ಬಸದಿಗಳು ಉಲ್ಲೇಖಾರ್ಹ ಜಿನಾಲಯಗಳಾಗಿವೆ. ಶೋಭನೇಶ್ವರ, ಸಿದ್ಧೇಶ್ವರ ದೇವಾಲಯಗಳು ಪ್ರೇಕ್ಷಣೀಯವಾಗಿವೆ.

**ಜಿಲ್ಲೆಯ ದೇವಾಲಯಗಳ ತಲವಿನ್ಯಾಸ, ಸೂಕ್ಷ್ಮ ಕೆತ್ತನೆಗೆ ಅತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ**

ಶಿರಹಟ್ಟಿ ತಾಲೂಕು ಅನೇಕ ಪ್ರಮುಖ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳನ್ನು ಹೊಂದಿದೆ. ಈ ತಾಲೂಕಿನ ಪ್ರಮುಖ ಪಟ್ಟಣವಾದ ಲಕ್ಷ್ಮೇಶ್ವರವು ಪ್ರಾಚೀನ ಕಾಲದಲ್ಲಿ ಪುಲಿಗೆರೆ ಎಂದು ಹೆಸರಾಗಿತ್ತು. ಈ ಪಟ್ಟಣದ ಪುಲಿಗೆರೆ ಸೋಮನಾಥ ದೇವಾಲಯವು ಸುಮಾರು 11ನೇ ಶತಮಾನದಲ್ಲಿ ನಿರ್ಮಾಣ ವಾಗಿರಬಹುದು. ದೇವಾಲಯ ಗರ್ಭಗೃಹದಲ್ಲಿರುವ ಮೂರ್ತಿ ಗದಗ ಜಿಲ್ಲೆಯ ಮತ್ತೊಂದು ವಿಶಿಷ್ಟವಾದ ಮೂರ್ತಿಯಾಗಿದೆ. ಇಲ್ಲಿ ಲಿಂಗರೂಪಿ ಶಿವನ ಬದಲು ವೃಷಭಾರೂಢ ಶಿವ ಮತ್ತು ಪಾರ್ವತಿಯ ಅತೀ ಸುಂದರ ಶಿಲ್ಪವನ್ನು ಮೂರ್ತಿ ರೂಪದಲ್ಲಿ ಪೂಜಿಸಲಾಗುತ್ತಿದೆ. ಶಿವನು ನಂದಿಯ ವೃಷಭ ಮುಂಭಾಗದಲ್ಲಿ ಕುಳಿತಿದ್ದು, ಅವನ ಹಿಂಭಾಗದಲ್ಲಿ ಪಾರ್ವತಿಯು ಕುಳಿತಿದ್ದಾಳೆ. ಈ ಶಿಲ್ಪವು ಚಾಲುಕ್ಯ ಶೈಲಿಯದ್ದಾಗಿದೆ. ಲಕ್ಷ್ಮೇಶ್ವರದಲ್ಲಿ ಶಂಖ ಬಸದಿಯು ಸೇರಿದಂತೆ ಅನೇಕ ಜಿನಾಲಯಗಳಿವೆ.

ಶಿರಹಟ್ಟಿಯಿಂದ 18 ಕಿ.ಮೀ ದೂರವಿರುವ ದೇವಿಹಾಳ ಗುಡ್ಡದ ಮೇಲಿನ ಕೋಟೆ ಶ್ರೀಮಂತಗಡ ಎಂದೇ ಪ್ರಸಿದ್ಧಿಯಾಗಿದೆ. ಹೊಳಲಮ್ಮದೇವಿ ದೇವಸ್ಥಾನ ಇಲ್ಲಿದೆ.





ಮುಂಡರಗಿ ತಾಲೂಕಿನ ಡಂಬಳ ಗ್ರಾಮದ ದೊಡ್ಡ ಬಸಪ್ಪ ದೇವಾಲಯ ಕಲ್ಯಾಣ ಚಾಲುಕ್ಯರ ಕಾಲದ ಪ್ರಮುಖ ದೇವಾಲಯ, ಅಡಿಯಿಂದ ಮುಡಿಯ ವರೆಗೆ ನಕ್ಷತ್ರಾಕಾರದ ವಿನ್ಯಾಸ ಹೊಂದಿದೆ, ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ ಹಾಗೂ ಬೃಹದಾಕಾರದ ನಂದಿ ಶಿಲ್ಪವಿರುವ ನಂದಿ ಮಂಟಪವನ್ನು ಹೊಂದಿದೆ.

ನರಗುಂದದ ಈಗಿನ ಪುರಸಭೆ ಒಂದು ಕಾಲದಲ್ಲಿ ಬಾಬಾಸಾಹೇಬರ ಅರಮನೆಯಾಗಿದ್ದು ಇಲ್ಲಿ ಅನೇಕ ಕಥಾನಿರೂಪಕ ಭಿತ್ತಿ ಚಿತ್ರಗಳಿವೆ. ನರಗುಂದದ ಪ್ರಮುಖ ದೇವಾಲಯಗಳೆಂದರೆ, ಕಲ್ಯಾಣ ಚಾಲುಕ್ಯರ ಕಾಲದ ದಂಡೇಶ್ವರ ಮತ್ತು ಶಂಕರಲಿಂಗ ಈ ನಗರದಲ್ಲಿರುವ ವೆಂಕಟೇಶ್ವರ ದೇವಾಲಯವು ಗುಡ್ಡದ ಮೇಲಿದ್ದು ಪಂಚ ಶಿಖರಗಳನ್ನು ಹೊಂದಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಈ ತಾಲೂಕಿನ ಕೊಣ್ಣೂರು ಗ್ರಾಮದಲ್ಲಿರುವ ನಕ್ಷತ್ರಾಕಾರದ ತಲವಿನ್ಯಾಸವನ್ನು ಹೊಂದಿರುವ ಪರಮೇಶ್ವರ ಗುಡಿ ಮೊದಲಿಗೆ ಪಾರ್ಶ್ವನಾಥ ಬಸದಿಯಾಗಿದ್ದು ನಂತರ ರಾಷ್ಟ್ರಕೂಟ ಸೇನಾನಿ ಬಂಕೇಶನು ಇದನ್ನು ಶೈವ ದೇವಾಲಯವನ್ನಾಗಿ ಮಾರ್ಪಡಿಸಿದನು ಎಂದು ಹೇಳಲಾಗುತ್ತದೆ.

ಪುರಾಣ ಮತ್ತು ಶಾಸನಗಳಲ್ಲಿ ರೋಣವನ್ನು 'ದ್ರೋಣಪುರ' ಎಂದು ಕರೆಯಲಾಗಿದೆ. ಇಲ್ಲಿನ ಮಲ್ಲಿನಾಥ ದೇವಾಲಯವು ಮಹತ್ವದ ದೇವಾಲಯವಾಗಿದೆ. ಅನಂತಶಯನಗುಡಿಯು ಮತ್ತು ಪಾರ್ಶ್ವನಾಥ ಬಸದಿ, ಈ ತಾಲೂಕಿನ ಸೂಡಿ ಗ್ರಾಮದಲ್ಲಿ ಜೋಡು ಕಳಸದ ಗುಡಿ ಎರಡು ಕಳಸಗಳನ್ನು ಹೊಂದಿರುವ ದ್ವಿಕೂಟ ದೇವಾಲಯವಾಗಿದೆ. ಇದೇ ಊರಿನ ಮಧ್ಯದಲ್ಲಿ ತ್ರಿಕೂಟ ಶೈಲಿಯಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಈ ತಾಲೂಕಿನ ಇತರ ಪ್ರಮುಖ ದೇವಾಲಯಗಳೆಂದರೆ ಸವಡಿ ಬ್ರಹ್ಮೇಶ್ವರ ಮತ್ತು ಇಟಗಿಯ ಶಂಭುಲಿಂಗ ದೇವಾಲಯ.

ಗಜೇಂದ್ರಗಡವು ಕಾಳಾಮುಖ ಪಂಥದ ಪ್ರಭಾವದಿಂದಾಗಿ ಕಾಲಕಾಲೇಶ್ವರ ಕ್ಷೇತ್ರವೆಂದು ಪ್ರಸಿದ್ಧಿ ಹೊಂದಿತ್ತು. ಇಲ್ಲಿರುವ ಗಜೇಂದ್ರಗಡ ಕೋಟೆ ಮತ್ತು ಕಾಲಕಾಲೇಶ್ವರ ದೇವಾಲಯಗಳು ಇತಿಹಾಸ ಪ್ರಸಿದ್ಧವಾಗಿವೆ. ಮೆಣಸಗಿಯ ಕಲ್ಲೇಶ್ವರ, ನರೇಗಲ್ಲಿನ ತ್ರಿಪುರಾಂತಕ, ನಿಡಗುಂದಿಯ ನಾರಾಯಣ, ಅಬ್ಬಿಗೇರಿಯ ಜ್ಯೋತಿರ್ಲಿಂಗ, ಜಕ್ಕಲಿಯ ಕಲ್ಮೇಶ್ವರ ಮುಂತಾದವುಗಳು. ಶಾತವಾಹನರಿಂದ ವಿಜಯನಗರದ ಕಾಲದವರೆಗೆ ಅತ್ಯದ್ಭುತ ದೇವಾಲಯಗಳು ಮನಮೋಹಕವಾದ ಮೂರ್ತಿ ಶಿಲ್ಪಗಳನ್ನು ಮೈದುಂಬಿಕೊಂಡು ಮನೋಜ್ಞ ಕಲಾಸಾಧನೆಗಳ ನೆಲವೀಡಾಗಿದೆ. ಇಂದಿಗೂ ತನ್ನ ಶಿಲ್ಪಕಲಾ ವೈಭವಕ್ಕೆ ಸಾಕ್ಷಿಯಾಗಿ ನಿಂತ ದೇವಾಲಯಗಳು ಗದುಗಿನ ಹೆಮ್ಮೆಯ ಕೊಡುಗೆಗಳಾಗಿವೆ.



ಕಾವೇರಿಯಿಂದ ಮಾಗೋದಾ ವರಿವರಮಿರ್ದ ನಾಡದಾ ಕನ್ನಡದೊಳ್......"

ರೋಮಾಂಚನ ತರಿಸುವ ನೃಪತುಂಗನ ಈ ಸಾಲುಗಳು ಕನ್ನಡ ನಾಡಿನ ವ್ಯಾಪ್ತಿಯನ್ನು ಸಾರುತ್ತದೆ. ಚಲುವ ಕನ್ನಡ ನಾಡಿನ ಕನಸನ್ನು ಕಂಡ ನಮ್ಮ ಗದುಗಿನ ಹುಯಿಲಗೋಳ ನಾರಾಯಣರಾಯರು ಉದಯವಾಗಲಿ ನಮ್ಮ ಚಲುವಕನ್ನಡ ನಾಡು,

ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು

"ಪಾವನೆಯರ ..... ಕೃಷ್ಣೆ ಭೀಮೆಯರ ತಾಯ್ನಾಡು, ಕಾವೇರಿ ಗೋದೆಯರ ಮೈದೊಳೆವ ನಲುನಾಡು: ಅವಗಂ ಬಗೆಯ ನಗಿಸುವ ಕಬ್ಬಿಗರ ಹಾಡು,

ಕಾವ ಗದುಗಿನ ವೀರನಾರಾಯಣನ ಬೀಡು ಎಂದು ಹಾಡುವದರ ಮೂಲಕ ಕನ್ನಡಿಗರ ಕನ್ನಡದ ಕೆಚ್ಚನ್ನು ಬಿತ್ತಿದ್ದು ನಮ್ಮವರೇ ಆದ ಹುಯಿಲಗೋಳ ನಾರಾಯಣರೆಂದು ನೆನಪಿಸಿಕೊಳ್ಳುತ್ತಾ ಕರ್ನಾಟಕದ ಮರು ನಾಮಕರಣ ಹೋರಾಟಕ್ಕೆ ಗದಗ ಜಿಲ್ಲೆಯ ಕೊಡುಗೆ ಅಪಾರವಾಗಿದೆ. ಕವಿಕುಮಾರವ್ಯಾಸ 14-15ನೇ ಶತಮಾನದಲ್ಲಿಯೇ ತನ್ನ ಮಹಾ ಕಾವ್ಯಕ್ಕೆ "ಕರ್ನಾಟ ಭಾರತ ಕಥಾಮಂಜರಿ" ಎಂದು ಹೆಸರಿಸಿದ್ದಾನೆ.



**ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಅವರು ನವೆಂಬರ್ 1 ರಂದು ಕರ್ನಾಟಕ ಸಂಭ್ರಮ ಭಾಷಣದ ಪ್ರಮುಖ ಅಂಶಗಳು**

ಸವಡಿಯ 1ನೇಯ ನಾಗವರ್ಮ, ದುರ್ಗಸಿಂಹ 10ನೇ ಶತಮಾನದಲ್ಲಿ ತಮ್ಮ ಕೃತಿಗಳಲ್ಲಿ ಕರ್ನಾಟಕ ಪ್ರಸ್ತಾಪಿಸಿದ್ದಾರೆ.

1906ರಲ್ಲಿ ಆಲೂರ ವೆಂಕಟರಾಯರು "ಕರ್ನಾಟಕ ಗತವೈಭವ" ಪುಸ್ತಕ ಪ್ರಕಟಿಸಿದರು ಹಾಗೂ ವಾಗ್ಭೂಷಣ ಪತ್ರಿಕೆ ಪ್ರಾರಂಭಿಸಿದರು. 1924 ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ "ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು" ಗೀತೆ ವಾಚನವಾಯಿತು. 1920 ನಾಗಪೂರ ಕಾಂಗ್ರೆಸ್ ಅಧಿವೇಶನದ ನಂತರ ಕರ್ನಾಟಕ ಕಾಂಗ್ರೆಸ್ ಸಮಿತಿ ರಚಿಸಲಾಯಿತು ಹಾಗೂ ಗದಗ ಇದರ ಕೇಂದ್ರ ಸ್ಥಾನವಾಗಿದ್ದಿತು.

ಕರ್ನಾಟಕ ಹೆಸರಿನಿಂದ ಅನೇಕ ಸಂಸ್ಥೆಗಳು ಹುಟ್ಟಿದವು. 1961ರಲ್ಲಿ ಗದಗನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಸಾಹಿತ್ಯ ಸಮ್ಮೇಳನದಲ್ಲಿ ರಾಜ್ಯಕ್ಕೆ "ಕರ್ನಾಟಕ" ಎಂದು ನಾಮಕರಣ ಮಾಡಬೇಕೆಂದು ಒತ್ತಾಯಿಸಿ ನಿರ್ಣಯವನ್ನು ಕೆ.ಎಚ್.ಪಾಟೀಲರು ಮಂಡಿಸಿದರು ಹಾಗೂ ಅದು ಸರ್ವಾನುಮತದಿಂದ ಅಂಗೀಕಾರವಾಯಿತು.


ರಾಜ್ಯ ವಿಧಾನಸಭೆಗೆ 1972ರಲ್ಲಿ ನಡೆದ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ ಪಕ್ಷದ ಪ್ರಣಾಳಿಕೆಯಲ್ಲಿ ರಾಜ್ಯಕ್ಕೆ "ಕರ್ನಾಟಕ" ಎಂದು ನಾಮಕರಣ ಮಾಡುವ ಭರವಸೆ ನೀಡಲಾಯಿತು.1973 ರಲ್ಲಿ ರಾಜ್ಯ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ದೇವರಾಜ ಅರಸ ವಿಧಾನ ಪರಿಷತ್ತಿನಲ್ಲಿ ಕೃಷಿ ಮಂತ್ರಿ ಕೆ.ಎಚ್.ಪಾಟೀಲ "ಕರ್ನಾಟಕ" ನಾಮಕರಣ ನಿರ್ಣಯ ಮಂಡಿಸಿದರು.

ಕರ್ನಾಟಕ ನಾಮಕರಣೋತ್ಸವ ಸಮಿತಿ ಅಧ್ಯಕ್ಷರಾಗಿ ಕೆ.ಎಚ್.ಪಾಟೀಲರ ಸೇವೆ.

ಬೆಂಗಳೂರು-ಹಂಪಿ ಗದಗದಲ್ಲಿ ಅದ್ದೂರಿಯ ನಾಮಕರಣೋತ್ಸವ ಸಮಾರಂಭಗಳು ಜರುಗಿದವು.

50 ವರ್ಷಗಳ ನಂತರ ಇಂದು ಸಂಭ್ರಮದ ಪುನಾರಾವರ್ತನೆ ಸಂತಸದ ಸಂಗತಿಯಾಗಿದೆ.

ಕರ್ನಾಟಕ ನಾಮಕರಣ ಮಹೋತ್ಸವ ನಡೆದು 50 ವಸಂತಗಳು ತುಂಬಿವೆ. ಈ ಅವಧಿಯಲ್ಲಿ ಕರ್ನಾಟಕ ಅಧ್ಬುತವಾಗಿ ಅಭಿವೃದ್ಧಿ ಸಾಧಿಸಿದೆ. ಅಭಿವೃದ್ಧಿಯ ಕಲ್ಪನೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಅನೇಕ ಸವಾಲುಗಳನ್ನು ಭೀಮ ಬಲದಿಂದ ಎದುರಿಸಲಾಗಿದೆ. ಜನ ಬೆಂಬಲಗಳಿಸಿ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರ ಕೆಲವೇ ದಿನಗಳಲ್ಲಿ ಪಂಚ ಗ್ಯಾರಂಟಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಿ ಕ್ರಾಂತಿಕಾರಕ ಹೆಜ್ಜೆಗಳಿನ್ನಿಟ್ಟಿದೆ. ಗದಗ ಜಿಲ್ಲೆಯಲ್ಲಿ ಒಂದು ಲಕ್ಷಕ್ಕೂ ಅಧಿಕ ಕುಟುಂಬಗಳು ಬಡತನ ರೇಖೆಯಿಂದ ಮೇಲೆ ಬರುವಂತೆ ಮಾಡಲಾಗಿದೆ. ಸಮಾಜದ ಎಲ್ಲಾ ವರ್ಗದ ಜನರಿಗೆ ಮಾನವ ಹಕ್ಕುಗಳು ಲಭ್ಯವಾಗುವಂತೆ ಮಾಡಲಾಗಿದೆ. ಸಮಾಜದ ಬಡವರು, ಶೋಷಿತರಿಗೆ ಗೌರವಯುತವಾಗಿ ಬದುಕಲು ಅವರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಬೆಳೆಯಲು ನಮ್ಮ ಪಂಚ ಗ್ಯಾರಂಟಿ ಯೋಜನೆಗಳು ಪ್ರೇರಕವಾಗಿವೆ. ಅದರಲ್ಲೂ ಗದಗ ಜಿಲ್ಲೆಯಲ್ಲಿ ನಮ್ಮ ಪಂಚಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ವಿಶೇಷ ಪ್ರಗತಿಯನ್ನು ಸಾಧಿಸಿದೆ.




● **ಡಾ.ಎಚ್.ಕೆ.ಪಾಟೀಲ** ಕಾನೂನು, ಪ್ರವಾಸೋದ್ಯಮ ಗದಗ ಜಿಲ್ಲಾ ಉಸ್ತುವಾರಿ ಸಚಿವರು.





# ಏಕೀಕರಣ ಹಾಗೂ ಕರ್ನಾಟಕ ನಾಮಕರಣದ ಪ್ರಮುಖರು



ಶ್ರೀ ಹಯಿಲಗೋಳ ನಾರಾಯಣರಾವ್ | ಶ್ರೀ ಆಲೂರ ವೆಂಕಟರಾವ್ | ಶ್ರೀ ಅನಂತರಾವ್ ಜಾಲಿಹಾಳ | ಶ್ರೀ ಅಂದಾನಪ್ಪ ದೊಡ್ಡಮೇಟಿ | ಶ್ರೀ ಬೆಟಗೇರಿ ಕೃಷ್ಣಶರ್ಮ | ಶ್ರೀ ಕೆ. ಎಫ್. ಪಾಟೀಲ | ಶ್ರೀ ಎಸ್. ಎಸ್. ಬಸವನಾಳ | ಶ್ರೀ ಶಂರಕಗೌಡ್ರ ಪಾಟೀಲ | ಶ್ರೀ ಬಸವರಾಜ ಕಟ್ಟಿಮನಿ | ಶ್ರೀ ಟಿ. ಪಿ. ಕೈಲಾಸಂ | ಶ್ರೀ ಅ.ನ. ಕೃಷ್ಣರಾವ್



ಶ್ರೀ ಕಾರ್ನಾಡು ಸದಾಶಿವರಾವ್ | ಶ್ರೀ ಇಟಗಿ ವೇದಮೂರ್ತಿ | ರೆ॥ ಎಫ್. ಕಿಟ್ಟಲ್ | ಶ್ರೀ ಕೃಷ್ಣಕುಮಾರ ಕಲ್ಲೂರ | ಶ್ರೀ ಡಿ. ಪಿ. ಕರಮರ್‌ಕರ್ | ಶ್ರೀ ಕಯ್ಯಾರ ಕಿಂಞಣ್ಣರೈ | ಶ್ರೀ ಎಸ್. ಆರ್. ಕಂಠಿ | ಶ್ರೀಮತಿ ಆಲ್ಲಂ ಸುಮಂಗಳಮ್ಮ | ಜಯದೇವಿತಾಯಿ ಲಿಗಾಡೆ | ಶ್ರೀಮಯಿ ಶಾಂತಾದೇವಿ ಮಾಳವಾಡ | ಶ್ರೀ ಕೆ. ಹನುಮಂತಯ್ಯ




ಶ್ರೀ ಜೋಳದರಾಶಿ ದೊಡ್ಡನಗೌಡ್ರ | ಡಾ. ದೇ. ಜವರೇಗೌಡ | ಶ್ರೀ ಉತ್ತಂಗಿ ಚನ್ನಪ್ಪ | ಶ್ರೀ ಫ. ಗು. ಹಳಕಟ್ಟಿ | ಶ್ರೀ ಶಂ. ಭಾ. ಜೋಶಿ | ಶ್ರೀ ಎಸ್. ಕೆ. ಕರಿಮ್‌ಖಾನ | ಡಾ. ವಿ.ಕೆ. ಗೋಕಾಕ | ಶ್ರೀ ಬೆನಗಲ್ ರಾಮರಾಮ್ | ಶ್ರೀ ಕುವೆಂಪು | ಶ್ರೀ ದ.ರಾ.ಬೇಂದ್ರೆ | ಸರ್ ಮಿರ್ಜಾ ಇಸ್ಮಾಯಿಲ್

**ಕರ್ನಾಟಕ ನಾಮಕರಣ ಏಕೀಕರಣದ ಪ್ರಮುಖರು :** • ಅನಂತರಾವ್ ಟೀಕಾ • ಆರ್. ನಾಗನಗೌಡ • ಅಂತೂರ ಚನ್ನಪ್ಪ • ಆರ್. ನಾಗನಗೌಡ, ಗದಗಯ್ಯ ಹೊನ್ನಪ್ಪರಮನಿ • ಎಚ್. ಸಿ. ದಾಸಪ್ಪ • ಎಸ್. ಪಿ. ಗಾಂವಕರ • ಕೊಪ್ಪಳ ಜಯರಾಮಾಚಾರ್ಯ • ಮತ್ತಿಹಳ್ಳಿ ರಾಘವೇಂದ್ರರಾವ್ • ಶಿರೂರ ವೀರಭದ್ರಪ್ಪ • ಜಂಗೀನ ಮರಗಯ್ಯ • ಬಿ. ಎಸ್. ಮಾವಿನಕುರುವೆ • ವಿ. ಎಸ್. ಪ್ರಭು, ಸುಬ್ಬಾರಾವ್ • ವೆಂಕಣ್ಣ ಗೋನೆಹಳ್ಳಿ • ಶ್ರೀನಿವಾಸ ಕೊದ್ದಾರರು • ಜಿ. ಎಸ್. ಗಂಗೊಳ್ಳಿ • ಮದ್ದೂರಾವ್ ಕಬ್ಬೂರ • ಬಿ. ಎನ್. ಮನವಳ್ಳಿ • ಬೆನಗಲ್ ರಾಮರಾವ್ • ಭೀಮರಾವ್ ಪೊತದಾರ • ವೀರಪ್ಪ ಬಸರಿಗಿಡದ • ಗಳಗನಾಥ ವೆಂಕಟನಾಥ • ಅಶೋಕ ಕುಲಕರ್ಣಿ • ಎಸ್. ಎನ್. ಅಂಗಡಿ • ರಾಮರಾವ್ ಹುಕ್ಕೇರಿಕರ್ • ಸಿದ್ಧಪ್ಪ ಹೊಸಮನಿ • ತಿಪ್ಪಣ್ಣಶಾಸ್ತ್ರಿ ಕಳ್ಳಿ • ಗಂಗಾಧರರಾವ್ ದೇಶಪಾಂಡೆ • ಗುದ್ಲೆಪ್ಪ ಹಳ್ಳಿಕೇರಿ • ಜಿ. ಎಸ್. ಹಾಲಪ್ಪ • ಬಲವಂತರಾವ್ ದಾತರ • ಡೆಪ್ಯೂಟಿ ಚೆನ್ನಬಸಪ್ಪ • ಗದಿಗೆಪ್ಪ ಹುರುಳಿ • ಅರಟಾಳ ರುದ್ರಗೌಡ • ಎಲ್. ಎಸ್. ಪಾಟೀಲ • ವೆಂಕಟರಂಗೊ ಕಟ್ಟಿ • ಹೊಸಕವಿ ಅಣ್ಣಾಚಾರ್ಯ • ಎದ್. ಸಿದ್ದಯ್ಯ • ಕೆ. ಬಿ. ಮಲ್ಲಪ್ಪ • ಬಿ. ಎ. ದೇಸಾಯಿ • ಡಿ. ಎಲ್. ಪಾಟೀಲ • ಶ್ರೀನಿವಾಸರಾವ್ ಕೌಜಲಗಿ • ಸಿ. ಸಿ. ಬಸವನಾಳ • ಸಾಹುಕಾರ ಚೆನ್ನಯ್ಯ • ವೈಕುಂಠ ಬಾಳಿಗಾ • ಪಿ. ಎಚ್. ಗುಂಜಾಳ • ಗುಬ್ಬಿ ವೀರಣ್ಣ • ಹನುಮಂತರಾವ್ ಕೌಜಲಗಿ • ಹನುಮಂತರಾವ್ ಮೊಹರೆ

## ವಿಧಾನ ಪರಿಷತ್ತಿನಲ್ಲಿ ಸಚಿವ ಶ್ರೀ ಕೆ. ಎಚ್. ಪಾಟೀಲರಿಂದ ಚಾರಿತ್ರಿಕ ನಿರ್ಣಯ ಮಂಡನೆ

**ಶ್ರೀ ಕೆ. ಎಚ್. ಪಾಟೀಲ್' (ಅರಣ್ಯ ಸಚಿವರು) :–** "ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ನಾನು ಸರ್ಕಾರದ ಪರವಾಗಿ ಮುಂದೆ ಕಾಣಿಸಿರುವ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಲಿಕ್ಕೆ ಇಷ್ಟ ಪಡುತ್ತೇನೆ.

ಭಾರತದ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು 'ಕರ್ನಾಟಕ' ವೆಂಬುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಸರ್ಕಾರದವರು ಪಡೆದುಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ."



ನಮ್ಮ ರಾಜ್ಯದ ಹೆಸರನ್ನು ಕರ್ನಾಟಕ ಎಂಬುದಾಗಿ ಬದಲಾಯಿಸಬೇಕು ಅನ್ನತಕ್ಕ ವಿಚಾರದಲ್ಲಿ ಇದರಲ್ಲಿ ಯಾರಿಗೆ ಒಪ್ಪಿಗೆ ಇದೆ ಯಾರಿಗೆ ಒಪ್ಪಿಗೆ ಇಲ್ಲ ಎನ್ನತಕ್ಕ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಈಗಾಗಲೇ ಕೆಳಮನೆಯಲ್ಲಿ ಈ ಠರಾವನ್ನು ಒಮ್ಮತದಿಂದ ಅನುಮೋದಿಸಿರುವುದರಿಂದ ಇದರ ಮಹತ್ವದ ಬಗ್ಗೆ ನಾನೀಗ ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ.

ನಾವು ನಮ್ಮ ಮೈಸೂರು ಗೆಜೆಟಿಯುರನ್ನು ನೋಡುವುದಾದರೆ ಮತ್ತು ಹೊಯ್ಸಳ ಕಾಲದ ಹಾಗೂ ಚಾಲುಕ್ಯರ ಕಾಲದ ಚರಿತ್ರೆಗಳನ್ನು ನೋಡುವುದಾದರೆ, ಹೀಗೆ ಇನ್ನೂ ಅನೇಕ ಹಿಂದಿನ ಶಿಲಾಶಾಸನಗಳನ್ನು ನೋಡುವುದಾದರೆ ಈ ಕರ್ನಾಟಕ ಎಂಬ ಹೆಸರು ಬಹಳ ಕಾಲದ ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎಂಬುದು ಗೊತ್ತಾಗುತ್ತದೆ. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಹಾಡನ್ನು ಕೇಳಿದಾಗ ಈ ಕನ್ನಡ ನಾಡು–ಕರ್ನಾಟಕ ಎಂಬ ದೇಶ ಎಷ್ಟು ವಿಶಾಲವಾಗಿತ್ತು ಎಲ್ಲಿಯವರೆಗೆ ಹಬ್ಬಿತ್ತು ಅನ್ನತಕ್ಕಂಥ ಒಂದು ಚಿತ್ರ ನಮ್ಮ ಕಣ್ಣಮುಂದೆ ಬಂದು ನಿಲ್ಲುತ್ತದೆ. ಈ ಕರ್ನಾಟಕ ಎಂಬ ಹೆಸರನ್ನು ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸರು ಏಕಾಏಕಿ ಸಭೆಯ ಮುಂದೆ ತರಲಿಲ್ಲ. ಇದನ್ನು ಕ್ಯಾಬಿನೆಟ್ ಮುಂದೆ ತಂದು ಅಲ್ಲಿ ಇದಕ್ಕೆ ಎಲ್ಲರ ಒಮ್ಮತದ ಅಭಿಪ್ರಾಯವನ್ನು ಪಡೆದು, ಅನಂತರ ಈ ವಿಷಯವನ್ನು ಆಡಳಿತ ಪಕ್ಷದ ಮುಂದೆ ಅವರ ಅಭಿಪ್ರಾಯವನ್ನು ಪಡೆದು ಅನಂತರ ಇದನ್ನು ಶಾಸನ ಸಭೆಯ ಮುಂದೆ ಅವರು ಮಂಡಿಸಿದ್ದಾರೆ... ಇದನ್ನು ಎಲ್ಲಾ ರೀತಿಯಿಂದಲೂ ಪರಿಶೀಲನೆ ಮಾಡಿ ಕಡೆಗೆ ಕರ್ನಾಟಕ ಎಂಬ ಹೆಸರನ್ನು ಇಡಬೇಕೆಂದು ಪಾರ್ಟಿಯಲ್ಲಿ ಬಹುಮಂದಿ ಸದಸ್ಯರು ಇಷ್ಟಪಟ್ಟರು. ಕಾರಣ ಇದಕ್ಕೆ ಒಂದು ಐತಿಹಾಸಿಕ ಹಿನ್ನೆಲೆ ಇದೆ. ಆದುದರಿಂದ ಇದಕ್ಕೆ ಈ ಹೆಸರೇ ಸಾರ್ಥಕವಾದದ್ದು ಎಂದು ಬಹುಪಾಲಿನ ಜನರ ಸದಿಚ್ಛೆಯಾಗಿತ್ತು. ಅದನ್ನರಿತು ನಮ್ಮ ನಾಯಕರು ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡಬೇಕೆಂದು ನಿರ್ಣಯ ಮಾಡಿದರು....ನಾವು ಹಿಂದಿನ ಚರಿತ್ರೆಯನ್ನು ತಿರುವಿ ಹಾಕಿದರೆ ಕರ್ನಾಟಕ ಎಂಬ ಹೆಸರಿನ ಹಿಂದೆ ಅಡಗಿರತಕ್ಕ ಆ ಶೌರ್ಯ, ಸಾಹಸ ಹಾಗೂ ನಮ್ಮವರ ಪರಾಕ್ರಮ ಮತ್ತು ಆ ಕರ್ನಾಟಕದಲ್ಲಿದ್ದ ವಿವಿಧ ಭಾಷೆಗಳು, ವಿವಿಧ ಕೋಮಿನ ಜನರು ಎಲ್ಲರೂ ಒಟ್ಟಿಗೆ ಸೇರಿ ಸಹೋದರರರಂತೆ ಬೆಳೆದು ಬಾಳಿದ ದೇಶ ಅದು ಎನ್ನುವುದು ಎಲ್ಲರಿಗೂ ವೇದ್ಯವಾಗುತ್ತದೆ.. ಹಿಂದಿನ ಮಹಾರಾಜರಿಗೆ ಕರ್ನಾಟಕ ರತ್ನ ಸಿಂಹಾಸನಾಧೀಶ್ವರ ಎಂಬ ಬಿರುದಿತ್ತು, ಅಂದಾಗ ಕರ್ನಾಟಕದ ಹಿರಿಮೆ ಎಷ್ಟಿತ್ತೆಂಬುದನ್ನು ಅದು ಎತ್ತಿ ತೋರಿಸುತ್ತದೆ. ಆದ್ದರಿಂದ ಮೈಸೂರು ಎಂಬ ಹೆಸರಿಗಿಂತ ಕರ್ನಾಟಕ ಎಂಬ ಹೆಸರು ಬಹಳ ಹೆಚ್ಚಿನ ವ್ಯಾಪಕವುಳ್ಳದ್ದಾಗಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಡಿ. ದೇವರಾಜೇ ಅರಸ್ ರವರು ಇದನ್ನು ಸಭೆಯ ಮುಂದೆ ಮಂಡಿಸಿ ಒಂದು ಒಮ್ಮತದ ತೀರ್ಮಾನವನ್ನು ತೆಗೆದುಕೊಂಡುದದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.....ಬೆಳಗಾಂನಲ್ಲಿ ಹಿಂದೆ ಕಾಂಗ್ರೆಸ್ ಅಧಿವೇಶನವಾದಾಗ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಎಂಬ ಹೆಸರು ಬರಲು ಕಾರಣರಾದ ಮಹಾತ್ಮ ಗಾಂಧಿಯವರನ್ನು ಈ ಸಂದರ್ಭದಲ್ಲಿ ನೆನೆಯಬೇಕಾಗಿದೆ. ಕೊನೆಯವರೆಗೆ ಅವರು ನಮ್ಮ ದೇಶವನ್ನು ಕರ್ನಾಟಕ ಎಂದು ಕರೆದರೇ ಹೊರತು ಬೇರೆ ಹೆಸರಿನಿಂದ ಸಂಭೋದಿಸಿಲ್ಲ. ಕೆಲವು ಭಾಗಗಳು, ಮುಂಬಯಿ, ಮದ್ರಾಸ್, ಹೈದರಾಬಾದು ಮುಂತಾದ ಪ್ರಾಂತಗಳಿಂದ ಸೇರಿ ಒಂದು ರಾಜ್ಯವಾದಾಗಲೂ ಕೂಡ ಗಾಂಧೀಜಿಯವರ ಬಾಯಲ್ಲಿ ಕರ್ನಾಟಕ ಎಂಬ ಹೆಸರೇ ಬಂತು....ಇಂದು ಮೈಸೂರಿನ ಹೆಸರಿಗೆ ಮಹತ್ವಕ್ಕೆ ಕುಂದೇನೂ ತರುವಂಥ ಕೆಲಸಮಾಡುತ್ತಿಲ್ಲ. ಮೈಸೂರು ಮೈಸೂರಾಗಿಯೇ ಇರುವುದು ಮೈಸೂರು ಇದು ಕರ್ನಾಟಕದ ಒಂದು ಭಾಗವಾಗುವುದು. ಕರ್ನಾಟಕ ಒಂದು ದೊಡ್ಡ ರಾಷ್ಟ್ರ, ಇದಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. ಹಿಂದೊಮ್ಮೆ ಕರ್ನಾಟಕ ಪ್ರಾಂತ ಎಂದಾಗ ಗಾಂಧಿ ಪ್ರಾಂತ ಎಂದು ಹೇಳುತ್ತಿದ್ದರು. ಈ ರಾಜ್ಯದಲ್ಲಿ ಮಹಾತ್ಮ ಗಾಂಧಿಯವರ ತತ್ವವನ್ನು ಅಳವಡಿಸುವ ಯೋಜನೆ ಸಹ ಆಗಬೇಕು ಎಂಬುದು ನನ್ನ ಅಭಿಪ್ರಾಯ. ಈ ದೃಷ್ಟಿಯಿಂದ ಮಾನ್ಯ ಸದಸ್ಯರೆಲ್ಲರೂ ಕರ್ನಾಟಕವೆಂಬ ಹೆಸರಿಗೆ ಬೆಂಬಲ ಕೊಡುವುದರ ಜೊತೆಗೆ ಈ ರಾಜ್ಯವನ್ನು ಸರ್ವರೀತಿಯಿಂದಲೂ ಅಭಿವೃದ್ಧಿ ಮಾಡಲು ಶ್ರಮಿಸಬೇಕು, ಹಾಗೆ ಮಾಡಿ ಗಾಂಧೀಜಿಯವರ ಆತ್ಮಕ್ಕೆ ಶಾಂತಿ ದೊರೆಯುವಂತೆ ರಚನಾತ್ಮಕ ಕಾರ್ಯಗಳಲ್ಲಿ ಜೀವನವನ್ನು ಸವೆಸಬೇಕು ಎಂದು ಈ ಸಂದರ್ಭದಲ್ಲಿ ಕೇಳಿ ಕೊಳ್ಳುತ್ತೇನೆ. ಇವತ್ತು ಭಾರತದ ನಕ್ಷೆಯಲ್ಲಿ ಕರ್ನಾಟಕ ಒಂದು ದೊಡ್ಡ ಪ್ರಾಂತವಾಗಿದೆ. ಈ ಪ್ರಾಂತದಲ್ಲಿ ಮುಂಬಯಿ ಪ್ರದೇಶದವರು ತಮ್ಮ ನಡೆನುಡಿಯನ್ನು ಕರೆದುಕೊಂಡು ಬಂದಿದ್ದಾರೆ, ಮದ್ರಾಸ್, ಹೈದರಾಬಾದ್ ಮುಂತಾದ ಪ್ರಾಂತಗಳಿಂದ ಬಂದಿರುವವರ ಸಹ ತಮ್ಮ ತಮ್ಮ ನಡೆನುಡಿಗಳನ್ನು ತಂದಿದ್ದಾರೆ. ಮೈಸೂರಿಗೆ ಹಿಂದಿನಿಂದಲೂ ಸಹ ಒಂದು ಹಿರಿಮೆ ಇದೆ, ಸುಗಂಧದ ಹಿರಿಮೆ, ಕನ್ನಡದ ಹಿರಿಮೆ ಇದೆ, ಮುಂಬಯಿ ಪ್ರದೇಶಗಳಿಂದ ಕಾರವಾರ ಮುಂತಾದ ಬಂದರುಗಳು ಸೇರಿವೆ.

ಮಂಗಳೂರು ಬಂದರು ಬಂದಿರುವುದರಿಂದ ಔದ್ಯೋಗಿಕ ಬೆಳವಣಿಗೆಗೆ ಮತ್ತು ಸ್ವಾವಲಂಬನೆಗೆ ಅವಕಾಶವಾಗಿದೆ. ಕಾರವಾರ ಬಂದರಾಗುವುದಿದೆ. ಇದು ನೈಸರ್ಗಿಕ ಸಂಪತ್ತು ನಮ್ಮಲ್ಲಿ ವಿಪುಲವಾಗಿದೆ. ಬೇಕಾದ ಎಲ್ಲಾ ಸಂಪನ್ಮೂಲಗಳಿವೆ, ಅವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಹಿಂದಿನ ಸಾಮಾಜಿಕ ಬೆಳವಣಿಗೆ, ವೈಚಾರಿಕ ಬೆಳವಣಿಗೆ ಮುಂತಾದವುಗಳನ್ನು ಗಮನಿಸಿ ನಮ್ಮ ಜೀವನವನ್ನು ಅದಕ್ಕೆ ಸರಿಹೊಂದಿಸಿಕೊಂಡು ಪ್ರಗತಿಯ ಕಡೆಗೆ ಹೆಜ್ಜೆ ಇಡಬೇಕಾಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರಂಥ ಮೇಧಾವಿಗಳಿದ್ದ ನಾಡು ಇದು. ನಮ್ಮಲ್ಲಿ ಒಳ್ಳೆಯ ಅರಣ್ಯ ಸಂಪತ್ತಿದೆ. ಇದನ್ನೆಲ್ಲಾ ಸದುಪಯೋಗ ಮಾಡಿಕೊಂಡರೆ ನಮ್ಮ ಸಂಪತ್ತು ಹೆಚ್ಚುವುದು.....ಶ್ರೀಮಾನ್ ದೇವರಾಜ ಅರಸ್ ರವರನ್ನು ಏತಕ್ಕಾಗಿ ಪ್ರಶಂಸೆ ಮಾಡುತ್ತಿದ್ದೇವೆ ಎಂದರೆ ಇಂದು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಲು ಒಂದು ದಿಟ್ಟ ಹೆಜ್ಜೆಯನ್ನು ತೆಗೆದುಕೊಂಡಿದ್ದಾರೆ ಎಂದರು.

ಈ ಕರ್ನಾಟಕದ ವಿಷಯವಾಗಿ ಕೆಳಮನೆಯಲ್ಲಿ ಕೂಡ ಚರ್ಚೆಯಾಗಿದೆ. ಮೇಲ್ಮನೆಯ ಸದಸ್ಯರೂ ಕೂಡ ಹೆಚ್ಚು ಅಭಿಮಾನವುಳ್ಳವರಾಗಿದ್ದಾರೆ. ಬಹುಶಃ ಎಲ್ಲರೂ ಇದನ್ನು ಒಪ್ಪಿದ್ದಾರೆ....ಶ್ರೀಮಾನ್ ದೇವರಾಜರು ಯಾರಿಗಿಂತಲೂ ಕಡಿಮೆ ಇಲ್ಲ. ಈ ಮಾತನ್ನು ಉತ್ತರ ಕರ್ನಾಟಕದಿಂದ ಬಂದಂಥ ಜನಗಳೂ ಕೂಡ ಹೇಳುತ್ತಾರೆ. "ಇದು ನಮ್ಮ ಕೈಯಲ್ಲೂ ಆಗಲಿಲ್ಲ. ಮೈಸೂರಿನವರೆ ಮುಂದಾಗಿ ಬಂದು ನಾವು ಇದಕ್ಕಾಗಿ ತ್ಯಾಗ ಬೇಕಾದರೂ ಮಾಡುತ್ತೇವೆ. ಈ ಹೆಸರನ್ನು ಇಡೋಣ' ಎಂದು ಮೈಸೂರಿನವರು ಉದಾರದೃಷ್ಟಿಯಿಂದ ಹೇಳಿದ್ದಾರೆ ಎಂದು. ಕರ್ನಾಟಕ ಮೊದಲಿನ ಕಾಲದೊಳಗೆ ಏನು ಇತ್ತೋ ಚಾಳುಕ್ಯ ಕದಂಬರ ಕಾಲದಲ್ಲಿ, ಹಾಗೆ ಬರಬೇಕೆಂದು ತಾವು ಆಶೀರ್ವಾದ ಮಾಡಬೇಕು."

## ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ್ ಅರಸ್ ಅವರಿಂದ ಚಾರಿತ್ರಿಕ ನಿರ್ಣಯ ಮಂಡನೆ

**ಶ್ರೀ ಡಿ. ದೇವರಾಜ್ ಅರಸ್ :–** ಮಾನ್ಯ ಆಧ್ಯಕ್ಷಿಣಿಯವರೇ, "ನಾನು ಈ ಕೆಳಗೆ ಕಂಡ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ", "ಭಾರತದ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು "ಕರ್ನಾಟಕ" ವೆಂಬುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಸರ್ಕಾರದವರು ಪಡೆದುಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರ "


ಈ ದಿವಸ ನಮ್ಮ ದೇಶದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಗತಕ್ಕಂಥ ದಿವಸವಾಗಿದೆ. ಅದರ ಕಾರಣ ಏನು ಎನ್ನುವುದು ಈ ಸಭೆಗೆ ವಿವರಿಸಿ ತಿಳಿಸಬೇಕಾದ ಅಣತ್ಯವಿಲ್ಲ...

ಈ ಮೈಸೂರು ಹೊಸದಾಗಿ ರಾಜ್ಯ ಎಂದಾದ ಮೇಲೆ ಅಥವಾ ಇದು ವಿಶಾಲ ಮೈಸೂರು ಆದಮೇಲೆ ಈ ರಾಜ್ಯದ ಹೆಸರು ಹಿಂದಿನಿಂದ ಬಂದಂಥ ಹೆಸರು ಇರಬೇಕೇ ಅಥವಾ ಇಷ್ಟೊಂದು ಭಾಗಗಳೆಲ್ಲ. ಹಿಂದೆ ಇದ್ದಂಥ ರಾಜ್ಯದಷ್ಟೇ ಹೆಚ್ಚು ಭಾಗಗಳು ಇಲ್ಲಿ ಬಂದು ಸೇರಿದ ಮೇಲೆ ಈ ಎಲ್ಲ ಜನರೂ ಒಂದೇ ಆದ ಮೇಲೆ ಒಂದೇ ಭಾಷೆಯ ಜನರಾದ ಮೇಲೆ ಈ ಬದಲಾವಣೆ ಹೆಸರಿನಲ್ಲಿ ಮಾಡಬೇಕೆಂಬ ವಿಚಾರ ನಮ್ಮ ಇಡೀ ರಾಜ್ಯದ ಜನತೆಯ ಮನಸ್ಸನ್ನು ಸೆಳೆದು ಆ ಒಂದು ವಿಷಯ ಇದುವರೆಗೂ ಇತ್ಯರ್ಥವಾಗದೆ ಹಾಗೆಯೇ ವಿಚಾರದಲ್ಲಿಯೇ ಉಳಿದು ಬಂದಿದೆ.

ಜನತೆ ಒಂದು ಕಡೆ ಹೆಸರು ಬದಲಾವಣೆ ಆಗಬೇಕು ಎಂದು ಇಚ್ಛೆಪಡುತ್ತಾ ಬಂದಿದ್ದರೇ ಶಾಸನ ಸಭೆಯ ಆಡಳಿತ ಪಕ್ಷದವರು ಇದನ್ನು ಮುಂದೂಡಿಕೊಂಡು ಬಂದಿದ್ದಾರೆ, ಇಂಥ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿ ಕೆಲವು ವರ್ಷಗಳವರೆಗೆ ನಡೆದು ಬಂತು.

1969ನೇ ಜುಲೈ ತಿಂಗಳಲ್ಲಿ ಕಾಂಗ್ರೆಸ್ ಪಕ್ಷದ ಚರಿತ್ರೆ ಬದಲಾವಣೆಯಾಯಿತು. ಅದೇ ರೀತಿ ಇಡೀ ಭಾರತ ದೇಶದ ರಾಜಕೀಯ ಚರಿತ್ರೆಯೂ ಕೂಡ ಬದಲಾವಣೆಯಾಯಿತು. ಅದರ ವಿಚಾರಕ್ಕೆ ಈಗ ನಾನು ಹೋಗಬೇಕಾದ ಅಗತ್ಯವಿಲ್ಲ, ಆ ಬದಲಾವಣೆಯ ಪರಿಣಾಮವಾಗಿ ನಾವು ಇಲ್ಲಿ ಈ ಸಭೆಯಲ್ಲಿದ್ದೇವೆ.

1970–71ರಲ್ಲಿ ನಡೆದಂಥ ಮಧ್ಯಂತರ ಚುನಾವಣೆ ಕಾಲದಲ್ಲಿ ಅಲ್ಲಲ್ಲಿ ಈ ಹೆಸರು ಬದಲಾವಣೆ ಬಗ್ಗೆ ಬಹಿರಂಗವಾಗಿ ಹಾಗೂ ಅಂತರಂಗವಾಗಿ ವಾದ–ವಿವಾದಗಳು ನಡೆಯುತಿದ್ದವು. ಮಧ್ಯಂತರ ಚುನಾವಣೆ ಆದ ಮೇಲೆ 1972ನೇ ಚುನಾವಣೆ ಕಾಲಕ್ಕೆ ಈ ಹೆಸರಿನ ವಿಚಾರ ಬಹಳ ಪ್ರಬಲವಾಗಿ ಜನ ಸಾಮಾನ್ಯರ ಮನಸ್ಸನ್ನು ಸೆಳೆಯುವುದಕ್ಕೆ ಒಂದು ಕಾರಣವಾಯಿತು.



ಈ ರಾಜಕೀಯ ತಿಕ್ಕಾಟದಲ್ಲಿ ನಾನು ಒಂದು ಕಡೆ ಮಾಡಿದಂಥ ಭಾಷಣದಿಂದ ಸ್ವಲ್ಪ ಕಿಡಿ ಹಾರಿತು, ಅದು ನಮ್ಮ ದೇಶದಾದ್ಯಂತ ವ್ಯಾಪ್ತಿಗೊಂಡಿತು.

ನನ್ನ ಅಭಿಪ್ರಾಯ ಏನೇ ಇರಲಿ, ಜನಸಾಮಾನ್ಯರ ಅಭಿಪ್ರಾಯದಲ್ಲಿ ಅವರಿಗೆ ಈ ಬದಲಾವಣೆಯಿಂದ ಒಂದು ಆನಂದ, ಒಂದು ತೃಪ್ತಿ, ಒಂದು ಸಮಾಧಾನ, ಒಂದು ಭಾವೈಕ್ಯತೆ ಬರುವುದಾದರೆ ನಮಗೆ ಅದರಿಂದ ತೊಂದರೆಯಾಗುವುದು ಏನೂ ಇಲ್ಲ. ಸಂತೋಷ ಎಂದು ಹೇಳುವುದರ ಜೊತೆಗೆ, ನಾಳೆ ಚುನಾವಣೆ ಆದಮೇಲೆ ನಮ್ಮ ಪಕ್ಷ ಬಹುಮತ ಪಡೆದು ಬಂದು ಅಧಿಕಾರವನ್ನು ಪಡೆಯುವುದಾದರೆ ಸಭೆಯಲ್ಲಿ ಚರ್ಚೆಮಾಡಿ, ಶಾಸನ ಸಭೆಯಲ್ಲಿ ನಮ್ಮ ಪ್ರತಿನಿಧಿಗಳು ಯಾರು ಇರುತ್ತಾರೆ ಅವರ ಅಭಿಪ್ರಾಯದಂತೆ ಹೋಗಿವುದಕ್ಕೆ ನನ್ನ ಅಡ್ಡಿ ಇಲ್ಲ, ಹೆಸರು ಬದಲಾವಣೆ ಮಾಡೋಣ, ಬಹುಮತ ಅಭಿಪ್ರಾಯದಂತೆ ಹೋಗೋಣ ಎನ್ನುವ ಮಾತನ್ನು ಜನತೆಯ ಮುಂದೆ ನಮ್ಮ ಪಕ್ಷದ ಪರವಾಗಿ ಹೇಳಿದ್ದು ಉಂಟು. ನಾನು ನೀವು ಜನತೆಗೆ ಕೊಟ್ಟಂಥ ಮಾತನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಇವೊತ್ತು. ನಮ್ಮ ಎಲ್ಲರ ಅಪ್ಪಣೆ ಪಡೆದು ಈ ಒಂದು ಠರಾವನ್ನು ನಾನು ಈ ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಮತ್ತೆ ಈ ಹೆಸರು ಯಾವುದು ಇರಬೇಕು ಎನ್ನುವ ಬಗ್ಗೆ ಕೂಡ ನನ್ನ ದೇಶದಲ್ಲಿ ಬಹಳ ಕಾಲ ಚರ್ಚೆ ನಡೆದಿದೆ.

ಇವೆಲ್ಲಾ ಚರ್ಚೆಗಳಿಂದ ನಾನು ಅರಿತಿರುವ ಪ್ರಕಾರ ಇದರಲ್ಲಿ ಈ ಯಾವ ಚರ್ಚೆಗೂ ಅವಕಾಶವಿಲ್ಲ ಮತ್ತು ಇಂತಹ ಬದಲಾವಣೆಯನ್ನು ಮಾಡುವುದು ಎಂದರೆ "ಕರ್ನಾಟಕ" ಎಂದು ಮಾಡಬಹುದು ಎನ್ನುವ ಒಂದು ನಿರ್ಣಯವನ್ನು ಇಲ್ಲಿ ಮಂಡಿಸಿದ್ದೇನೆ. ಕರ್ನಾಟಕ ಎನ್ನುವ ಹೆಸರನ್ನು ಹಿಂದೆ ರಾಜರುಗಳು ಉಪಯೋಗಿಸುತ್ತಿದ್ದರು. ಕರ್ನಾಟಕ ಸಿಂಹಾಸ ನಾಧೀಶ್ವರ ಎಂದು ಒಂದು ಕಾಲದಲ್ಲಿ ಮೈಸೂರು ರಾಜರು ಇಟ್ಟುಕೊಂಡಿದ್ದರು. ಇದರಂತೆ ವಿಜಯನಗರದ ರಾಜರು ಇಟ್ಟುಕೊಂಡಿದ್ದರು. ಹೊಯ್ಸಳರು ಹಾಗೂ ಕದಂಬರು ಇಟ್ಟು ಕೊಂಡಿದ್ದರು. ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಈ ಹೆಸರು ಬರುತ್ತಲೇ ಇತ್ತು. ಸಾಹಿತಿಗಳು ಸಾಹಿತ್ಯದಲ್ಲಿ ಕರ್ನಾಟಕ ಎಂಬ ಹೆಸರನ್ನು ಇಡಬಹುದೆಂದು ಹೇಳಿದ್ದರು. ಅದರಂತೆ ಇಲ್ಲಿ ನಿರ್ಣಯವನ್ನು ಮಂಡಿಸಿದ್ದೇನೆ.

ಈಗ್ಗೆ ಒಂದೂವರೆ ತಿಂಗಳ ಹಿಂದೆ ಇಂತಹ ಒಂದು ಠರಾವನ್ನು ನಮ್ಮ ಕ್ಯಾಬಿನೆಟ್ಟಿನಲ್ಲಿ ಮಾಡುವಾಗ ನಾವೇನು ಮಾಡಿದೆವು ಎಂದರೆ ಶಾಸಕರು ಅಭಿಪ್ರಾಯಪಟ್ಟಂತೆ ಹಾಗೂ ಹೆಚ್ಚು ಜನರು ಅಭಿಪ್ರಾಯ ಪಡುವಂತೆ ನಮ್ಮ ರಾಜ್ಯಕ್ಕೆ ಒಂದು ಶಾಶ್ವತವಾದ ಹೆಸರನ್ನು ಇಟ್ಟು ಈಗಿನ ಹೆಸರನ್ನು ಬದಲಾವಣೆ ಮಾಡಬಹುದು ಎನ್ನುವ ಒಂದು ತೀರ್ಮಾನಕ್ಕೆ ಬಂದೆವು.

ನಾನು ತಮ್ಮ ಮುಂದೆ ಠರಾವಿನಲ್ಲಿ 'ಕರ್ನಾಟಕ' ಎಂದು ಏನು ಹೆಸರನ್ನು ಇಟ್ಟಿದ್ದೇನೋ ಅದೇ ಬಹುಮತ ಅಭಿಪ್ರಾಯ ಎಂದು ನನ್ನ ನಂಬಿಕೆ. ಇಂತಹ ಒಂದು ಬಹುಮತದ ಅಭಿಪ್ರಾಯ ಬಂದ ಮೇಲೆ ನಮ್ಮ ಪಕ್ಷದಲ್ಲಿ ಕೂಡ ಇದನ್ನು ನಾವು ಚರ್ಚೆ ಮಾಡಿ ಆಡಳಿತ ಪಕ್ಷವಾದ ಕಾಂಗ್ರೆಸ್ ಪಕ್ಷದವರು ಎಲ್ಲರೂ ಒಪ್ಪಿದಂತೆ ಠರಾವನ್ನು ಇಲ್ಲಿ ತಂದಿದ್ದೇನೆ. ಒಂದು ಸಂತೋಷದ ವಿಚಾರ ಇಲ್ಲಿ ಹೇಳಬೇಕಾಗಿದೆ. ನಮ್ಮ ಪಕ್ಷದಲ್ಲಿ ಕೆಲವು ವಿಚಾರದಲ್ಲಿ ಅಭಿಪ್ರಾಯ ಭೇಧಗಳು ಇದ್ದರೂ ಇದರಲ್ಲಿಲ್ಲ. ಎಲ್ಲರೂ ಇಂತಹ ಒಂದು ಬದಲಾವಣೆಯನ್ನು ಮಾಡಲು ಒಪ್ಪಿದ್ದಾರೆ.

ನಾವೆಲ್ಲಾ ಮೈಸೂರು ದೇಶದಲ್ಲಿರಲಿ ಇಲ್ಲವೇ ಕರ್ನಾಟಕ ದೇಶದಲ್ಲಿರಲಿ ಇಡೀ ಭಾರತ ದೇಶದಲ್ಲಿ ಸೇವೆ ಮಾಡುತ್ತಿದ್ದರೂ ಕಾಲ ಸನ್ನಿವೇಶಕ್ಕೆ ತಕ್ಕ ಹಾಗೆ ಆರ್ಥಿಕವಾಗಿ ಐಹಿಕ ವಿಚಾರಕ್ಕೆ ಹೆಚ್ಚು ಪ್ರಾಧ್ಯಾನ್ಯತೆ ಕೊಡುತ್ತಿದ್ದೇವೆ. ಇದು ಮನುಷ್ಯನಿಗೆ ತೃಪ್ತಿ ತರುವ ವ್ಯವಹಾರವಾಗಿದ್ದರೂ ಒಂದು ರೀತಿಯಲ್ಲಿ ಇದರಲ್ಲಿ ಹೊಂದಿಕೊಂಡು ಹೋಗುವ ಒಂದು ಭಾವನೆಗೆ ಬರಬೇಕು.

ಹಳೆಯ ಮೈಸೂರಿನ ಭಾಗದಿಂದ ಬಂದ ಜನರಿಗೆ ಮೈಸೂರು ರಾಜ್ಯದ ಹೆಸರಿನ ಬಗ್ಗೆ ಹಿಂದಿನಿಂದಲೂ ಚಾರಿತ್ರಿಕವಾಗಿ ಒಂದು ಅಭಿಮಾನ ಬೆಳೆದು ಬಂದಿದೆ. ಮೈಸೂರು ರಾಜ್ಯ ಎಂಬುದು ಇಡೀ ಇಂಡಿಯಾ ದೇಶದಲ್ಲಿ ಕೀರ್ತಿ ಪಡೆದಿರುವುದಲ್ಲದೆ, ಹೊರ ದೇಶಗಳಲ್ಲಿಯೂ ಸಹ ಕೀರ್ತಿ ಪಡೆದಿದೆ. ಮೈಸೂರು ಜನತೆಯ ವಿಚಾರದಲ್ಲಿ ಮೈಸೂರು ಸಾಮಾನುಗಳ ವಿಚಾರದಲ್ಲಿ ತಿಳಿದಂತಹ ಜನರು ಹೊರದೇಶಗಳಲ್ಲಿ ಇದ್ದಾರೆ. ಅದಕ್ಕೋಸ್ಕರ ಮೈಸೂರು ರಾಜ್ಯ ಹೆಚ್ಚಿನ ಗೌರವ ಹಾಗೂ ಕೀರ್ತಿ ಪಡೆದುಕೊಂಡಿದೆ. ಮೈಸೂರು ಎಂಬ ಹೆಸರಿಗೆ ಶಕ್ತಿ ಇದೆ.

ಈ ಹೆಸರು ಅಸ್ತಂಗತವಾದರೂ ಸಹ ಇನ್ನೊಂದು ಹೆಸರು ಉದಯವಾಗುತ್ತಿದೆ. ಹೊಸ ಹೆಸರಿನಲ್ಲಿ ಭಾವೈಕ್ಯತೆ ಇದೆ. ಹೊಸ ಹೆಸರಿನ ಬಗ್ಗೆ ವಿಶ್ವಾಸವಿದೆ. ಆ ಹೆಸರಿನ ಬಗ್ಗೆ ಹೆಚ್ಚಿನ ಜನರಿಗೆ ಸಂತೋಷ, ಆನಂದ ಉಂಟಾಗುತ್ತಿದೆ.

ಬದಲಾವಣೆಯಲ್ಲಿ ಒಂದು ಹೆಜ್ಜೆ ಮುಂದೆ ಹೋಗುವಾಗ ಹಳೆಯದು ಹೋಗಿ ಹೊಸದು ಬರುವಾಗ ತೊಂದರೆ ಇಲ್ಲ, ಆನಂದ ಬರುತ್ತದೆ, ಆದ್ದರಿಂದ ಇದರ ಬಗ್ಗೆ ಹೆಚ್ಚು ಚಿಂತನೆ ಮಾಡಬೇಕಾಗಿಲ್ಲ.

ನಾನು ಸರ್ಕಾರದ ವತಿಯಿಂದ ಮಂಡಿಸಿದಂಥ ನಿರ್ಣಯಕ್ಕೆ ಎಲ್ಲಾ ಕಡೆಯಿಂದಲೂ ಎಲ್ಲಾ ಪಕ್ಷಗಳಿಂದಲೂ ಸರ್ವತೋಮುಖವಾದ ಬೆಂಬಲ ಬಂದಿರತಕ್ಕದ್ದು ನನಗಂತೂ ಬಹಳ ಸಂತೋಷ ಉಚಿಟುಮಾಡಿದೆ.

ನಾನು ಮೊದಲೇ ಈ ಸಭೆಯಲ್ಲಿ ಅರಿಕೆ ಮಾಡಿಕೊಂಡ ಹಾಗೆ ಏನಾದರೂ ಇಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಇದ್ದರೂ ಹೆಸರು ಬದಲಾವಣೆ ಆಗತಕ್ಕೆ ಕಾಲದಲ್ಲಿ ಮನಸ್ಸಿಗೆ ಸ್ವಲ್ಪ ನೋವು ಆದಂಥವರು ಕೂಡ ಅಂತಿಮವಾಗಿ ನಿರ್ಣಯಕ್ಕೆ ಬೆಂಬಲ ಕೊಟ್ಟಿದ್ದಾರೆ. ಮತ್ತು ಬದಾಲಾವಣೆಯನ್ನು ಸ್ವಾಗತಿಸಿದ್ದಾರೆ. ನಾವು ಕರ್ನಾಟಕ ಎಂಬ ಹೆಸರು ಇಡಬೇಕು ಎಂಬುದನ್ನು ಕೂಡ ಒಪ್ಪಿದ್ದಾರೆ. ಆದಕಾರಣ 3 ದಿವಸಗಳಿಂದ ಮಾತನಾಡಿ ತಮ್ಮ ಹೃದಯದಿಂದ ಬಂದ ಬೆಂಬಲವನ್ನು ಕೊಟ್ಟಂಥ ಮಾನ್ಯ ಸದಸ್ಯರಿಗೂ, ಈ ಚರ್ಚೆಯಲ್ಲಿ ಭಾಗವಹಿಸದೆ ಮೌನದಿಂದ ಕುಳಿತು ಮಾತುಗಳನ್ನು ಕೇಳಿದವರಿಗೂ ಮತ್ತು ಮೌನದಿಂದಲೇ ಬೆಂಬಲ ಕೊಟ್ಟಂಥ ಎಲ್ಲಾ ಸದಸ್ಯರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ನಾನು ಅಪ್ಪಣೆ ಬೇಡುತ್ತೇನೆ.

ಈ ಸಂದರ್ಭದಲ್ಲಿ ನಾನು ಈ ನಿರ್ಣಯವನ್ನು ಮಂಡಿಸುವುದಕ್ಕೆ ಮನಸ್ಸು ಮಾಡಿದ್ದಕ್ಕಾಗಿ ಅಥವಾ ತಂದಿದ್ದಕ್ಕಾಗಿ ನನ್ನ ಬಗ್ಗೆ ಕೆಲವರು ಒಳ್ಳೆಯ ಭಾಷಣವನ್ನು ಮಾಡಿದ್ದಾರೆ; ಮೆಚ್ಚಿಗೆಯನ್ನು ನನ್ನ ಮಿತ್ರರು, ಎದುರು ಪಕ್ಷದಲ್ಲಿ ಇರತಕ್ಕ ನಾಯಕರು ವ್ಯಕ್ತಪಡಿಸಿದ್ದಾರೆ.

ತಿಳಿವಳಿಕೆ ಇಲ್ಲದೆ ಧೈರ್ಯ ಬರುವುದಿಲ್ಲ. ಮತ್ತೆ ನಡೆದ ವಿಚಾರವನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ, ನಿರ್ವಿಕಾರವಾದ ಮನಸ್ಸು ಬೇಕು. ಈ ವಿಷಯದಲ್ಲಿ ನಾನು ಒಂದು ನಿರ್ವಿಕಾರ ದೃಷ್ಟಿಯಿಂದ ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ಜನತೆ ಅಭಿಪ್ರಾಯ ಏನು ಇದೆ ಅದನ್ನು ನೋಡಿ ಹಾಗೆ ಮುನ್ನಡೆಯುತ್ತಿದ್ದೇನೆ. ಎಂದು ನನ್ನ ತಿಳಿವಳಿಕೆ ಪ್ರಕಾರ ಗೊತ್ತಾಗಿದ್ದು, ಅದರಂತೆ ನಡೆಯುವುದಕ್ಕೆ ಧೈರ್ಯ ಮಾಡಿದೆ ಅಷ್ಟೆ....

ಕೊನೆಯದಾಗಿ ಒಂದು ಮಾತು ಏನೆಂದರೆ ಈ ನಿರ್ಣಯವನ್ನು ನನ್ನ ಒಂದು ಸ್ಥಾನದಿಂದ ತಂದಿರತಕ್ಕದ್ದು ಸಂತೋಷವೆಂದು ಕೆಲವು ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

ಈ ರಾಜತ್ವಕ್ಕೆ, ನನಗೆ ಆಗಿನಿಂದಲೇ ವಿರೋಧವಾದ ಮನೋಭಾವ ಬೆಳೆದು ಬಂದಿತ್ತು, ಏಕೆಂದರೆ ಅದರಲ್ಲಿ ಯಾವುದೂ ತರ್ಕಕ್ಕೆ ನಿಲ್ಲುವ ವಿಚಾರ ಇಲ್ಲ. ಯಾವಾಗ ನಮ್ಮಲ್ಲಿ ರಾಜಕೀಯ ತತ್ವಗಳ ಆಧಾರದ ಮೇಲೆ ಕೆಲವು ಇನ್ಸ್ಟಿಟ್ಯೂಶನುಗಳು ಬೆಳೆದುಬಂತೋ, ಆಗ ಅಂತಹ ಸನ್ನಿವೇಶಗಳಲ್ಲಿ, ಅದು ಒಂದು ಕಾಲದಲ್ಲಿ ಒಳ್ಳೆಯದಾಗಿದ್ದರೂ, ಈ ಕಾಲದಲ್ಲಿ ಅದರಿಂದ ದೇಶಕ್ಕೆ ಮತ್ತು ದೇಶದ ಜನರಿಗೆ ಪ್ರಯೋಜನವಾಗುವುದಿಲ್ಲ.

ಮಹಾತ್ಮಾ ಗಾಂಧೀಜಿಯವರು ಈ ರಾಜರುಗಳ ಬಗ್ಗೆ ಹೇಳಿದಾಗ, ಅದು ಸರಿ ಎಂದು ನನಗೆ ತೋರಿ ನಾನೂ ಅದಕ್ಕೆ ವಿರುದ್ಧವಾಗಿ ಎದ್ದು ನಿಂತಿದ್ದೇನೆ.

ಇಷ್ಟು ಹೇಳಿ ತಾವೆಲ್ಲರೂ ಇದನ್ನು ವಿರೋಧ ಮಾಡದೆ ಸ್ವಾಗತ ಮಾಡಿದ್ದಕ್ಕಾ ತಮಗೆಲ್ಲರಿಗೂ ನಾನು ಅಭಿನಂದಿಸುತ್ತೇವೆ. ಇದಕ್ಕೆ ಸರ್ವಾನುಮತದ ಸ್ವಾಗತವನ್ನು ತಾವೆಲ್ಲರೂ ಮಾಡಿದ್ದೀರಿ. ಇದಕ್ಕೆ ಇನ್ನೊಂದು ಕಾರಣವನ್ನು ಹೇಳುವುದು ಅವಶ್ಯಕವೆಂದು ಕಾಣುತ್ತದೆ. ಇವತ್ತು ನಾವು ಈ ಮಹತ್ತರವಾದ ನಿರ್ಣಯವನ್ನು ತಮ್ಮ ಅಧ್ಯಕ್ಷತೆಯಲ್ಲಿ ಚರ್ಚೆಮಾಡಿ ಅಂಗೀಕರಿಸುತ್ತಿದ್ದೇವೆ. ಆ ಒಂದು ಸುಸಂಧರ್ಭ ನಮಗೆ ಸಿಕ್ಕಿದೆ. ಇದು ಬಹಳ ಹೆಮ್ಮೆ ಮತ್ತು ಸಂತೋಷ ಪಡತಕ್ಕಂತಹ ವಿಚಾರವೆಂದು ಹೇಳಿದರೆ ತಪ್ಪಾಗಲಾರದು, ತಮ್ಮ ಘನ ಅಧ್ಯಕ್ಷತೆಯಲ್ಲಿ ಈ ಒಂದು ಚರಿತ್ರಾರ್ಹವಾದ ಘಟನೆ ನಡೆದಿರುವುದು ನಮ್ಮ ಪುಣ್ಯವೆಂದು ಭಾವಿಸುತ್ತೇನೆ. ತಾವು ಎಲ್ಲಾ ಪಕ್ಷದ ಸದಸ್ಯರಿಗೂ ಸಮಾಧಾನವಾಗಿ ಮಾತನಾಡುವುದಕ್ಕೆ ಅವಕಾಶಕೊಟ್ಟು ಅವರೆಲ್ಲರೂ ಸಂತೋಷದಿಂದ ಬೆಂಬಲ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇಂತಹ ಸಂದರ್ಭದಲ್ಲಿ ತಾವು ಅಧ್ಯಕ್ಷರಾಗಿರುವುದು ಒಂದು ಶುಭ ಸಂಕೇತವೆಂದು ತಿಳಿದು ನಾನು ತಮ್ಮನ್ನು ಮತ್ತೊಮ್ಮೆ ಅಭಿನಂದಿಸಿ ಈ ನಿರ್ಣಯಕ್ಕೆ ತಮ್ಮೆಲ್ಲರ ಬೆಂಬಲವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ."

(ಎಲ್ಲರೂ ಕರತಾಡನ ಮಾಡಿ ಸಂತೋಷವನ್ನು ವ್ಯಕ್ತಪಡಿಸಿದರು)

**ಅಧ್ಯಕ್ಷರು–ನಾನು ಈ ನಿರ್ಣಯವನ್ನು ಸಭೆಯ ಒಪ್ಪಿಗೆಗೆ ಹಾಕುತ್ತೇನೆ, ಅದು ಹೀಗಿದೆ:–**

"ಭಾರತದ ಸಂವಿಧಾನದಲ್ಲಿ ನಮೂದಿಸಿದ್ದ ಈ ರಾಜ್ಯದ ಹೆಸರನ್ನು ಕರ್ನಾಟಕ' ಎಂಬುವುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಸರ್ಕಾರದವರು ಪಡೆದುಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ".

(ಎಲ್ಲಾ ಸದಸ್ಯರು ಜಯಕಾರ ಮಾಡಿದರು)

ಅಧ್ಯಕ್ಷರು.– ನಿರ್ಣಯದ ವಿರೋಧ ಯಾರು ಇಲ್ಲವಾದ್ದರಿಂದ ಈ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಖ್ಠಜ ಖಢರಟಣಣುಠಟ ತಿಛಿ ಚಿಜಠಠಿಣಜಜ

**ಶ್ರೀ ವಾಟಾಳ್ ನಾಗರಾಜ್,–** ಈ ಶುಭ ಸಂತೋಷದ ಸಮಯದಲ್ಲಿ ಸಂತೋಷ ಸೂಚಕವಾಗಿ ನಾನು ಈ ಮಲ್ಲಿಗೆ ಹೂಗಳನ್ನು ಎಲ್ಲರ ಮೇಲೆಯೂ ಚೆಲ್ಲುತ್ತೇನೆ. (ವಾಟಾಳ್ ನಾಗರಾಜರು ಮತ್ತು ಎಸ್. ಬಂಗಾರಪ್ಪನವರು ಮಲ್ಲಿಗೆ ಹೂಗಳನ್ನು ಚೆಲ್ಲಿದರು)

**ಶ್ರೀ ಡಿ. ದೇವರಾಜ ಅರಸ್**– ನಾನು ಈಗ **'ಕರ್ನಾಟಕಕ್ಕೆ'** ಎಂದು ಹೇಳುತ್ತೇನೆ. ತಾವೆಲ್ಲರೂ ಒಕ್ಕಂಠದಿಂದ **'ಜಯವಾಗಲಿ'** ಎಂದು ಹೇಳಬೇಕು,

ಶ್ರೀ ಡಿ. ದೇವರಾಜ್ ಅರಸ್– **'ಕರ್ನಾಟಕಕ್ಕೆ'**

ಎಲ್ಲ ಸದಸ್ಯರು **'ಜಯವಾಗಲಿ'**

ಶ್ರೀ ಡಿ. ದೇವರಾಜ್ ಅರಸ್, **'ಕರ್ನಾಟಕಕ್ಕೆ'**

ಎಲ್ಲ ಸದಸ್ಯರು **'ಜಯವಾಗಲಿ'**

ಶ್ರೀ ಡಿ. ದೇವರಾಜ್ ಅರಸ್ – **'ಕರ್ನಾಟಕಕ್ಕೆ'**

ಎಲ್ಲ ಸದಸ್ಯರು **'ಜಯವಾಗಲಿ'**

(ಎಲ್ಲಾ ಸದಸ್ಯರು **"ಕರ್ನಾಟಕಕ್ಕೆ ಜಯವಾಗಲಿ"** ಎಂದು ಘೋಷಣೆಯನ್ನು ಮತ್ತು ಕರತಾಡನವನ್ನು ಮಾಡಿದರು)

## ಸಹಕಾರಿ ರಂಗದಲ್ಲಿ ಕ್ರಾಂತಿಯನ್ನೇ ಮೊಳಗಿಸಿದ್ದು ನಮ್ಮ ಜಿಲ್ಲೆಯ ಹೆಮ್ಮೆ

# 'ಗದಗ' ಸಹಕಾರ ರಂಗದ ತೊಟ್ಟಿಲು

ಭಾರತದಲ್ಲಿಯ ಸಹಕಾರ ಅಂದೋಲನದ ಭಾಗೀರಥಿಗೆ ಗದಗ ಗಂಗೊತ್ರಿ ಅದಕ್ಕಾಗಿಯೇ ಗದಗ ಸಹಕಾರ ರಂಗದ ತೊಟ್ಟಿಲು ಎಂಬ ಖ್ಯಾತಿ ಗಳಿಸಿದ (ಉಚಿಜಚಿರ ಃಜಣರಂಜಡು ೨ಛಿ ಛಜಜಟಿ ಡಿರ್ಚುಣಥಿಟಥಿ ಚಿಛಿ-ಛಿಟಚಿಟಜಜ ಛಿ ಣುಜ ಛಿಡಿಚಿಜಟಜ ರಜಿ ಛಿ೦-ರರಿಜಡಿಚಿಣುರಟಿ). ಸಹಕಾರ ಅಂದೋಲನ ಭಾರತದ ಸನಾತನ ಬದುಕಿನೊಂದಿಗೆ ಬೆಸೆದುಕೊಂಡು ಬೆಳೆದಿದೆ. ಆಧುನಿಕ ಸಹಕಾರ ಚಳುವಳಿಯ ಸ್ವರೂಪ ಅದು ಹೊಂದಿರದಿದ್ದರೂ ಭಾರತೀಯ ಬದುಕಿನ ಆಧಾರವೇ ಸಹಕಾರವಾಗಿದ್ದಿತು. ನಮ್ಮ ಗ್ರಾಮೀಣ ಬದುಕು ಸಹಕಾರ ತತ್ವ ಆಚರಣೆಯಿಂದಲೇ ಜೀವಂತವಾಗಿದ್ದಿತು.

ನಮ್ಮ ವೇದ ಉಪನಿಷತ್‌ಗಳಲ್ಲಿ, ಸ್ಮೃತಿಗಳಲ್ಲಿ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ, ಆಶೋಕನ ಶಿಲಾಲೇಖನಗಳಲ್ಲಿ ಸಹಕಾರದ ಪ್ರಸ್ತಾಪವಿರುವುದನ್ನು ಗಮನಿಸಿದಾಗ ಭಾರತೀಯರ ಜೀವನದಲ್ಲಿ ಸಹಕಾರ ತತ್ವ ಬಹುಹಿಂದಿನ ಕಾಲದಿಂದ ಬೆಸೆದಿದೆ, ಬೆಳೆದಿದೆ ಎಂದು ಹೇಳಬಹುದು. 'ಸಹನಾವವತು, ಸಹನೌಭುವಕ್ತು, ಸಹವೀರ್ಯರ ಕರವಾವ ಹೈ, ತೇಜಸ್ವಿನಾಮಧೀತು ಮಸ್ತು ಎದಾ ವಿದ್ವಿಷಾವಹೈ' ಇದು ನಮ್ಮ ಶಾಂತಿ ಮಂತ್ರ. ಜೊತೆಯಾಗಿ ಬಾಳೋಣ, ಜೊತೆಯಾಗಿ ಬೆಳೆಯೋಣ, ಜೊತೆಯಾಗಿ ಮುನ್ನಡೆಯೋಣ, ಜೊತೆಯಾಗಿ ಶಕ್ತಿಶಾಲಿಗಳಾಗೋಣ ಪರಸ್ಪರ ದ್ವೇಷಿಸದಿರೋಣ–ಇದು ಮಂತ್ರದ ಸಾರ. ಇದೇ ಸಹಕಾರ ತತ್ವದ ಸಾರ. ನಾನು ಹೋಗಿ ನಾವು ಬರಬೇಕು, ಅಲ್ಲಿಂದಲೇ ಸಹಕಾರ ಶ್ರೀಗಣೇಶ.

1904 ಭಾರತದ ಸಹಕಾರ ಇತಿಹಾಸದಲ್ಲಿ ಬಹು ಅವಿಸ್ಮರಣೀಯವಾದ ವರ್ಷ. ಇದು ಸಹಕಾರ ಕಾಯ್ದೆ ಪಾಸಾದ ವರ್ಷ, ದೇಶದ ಪ್ರಥಮ ಸಹಕಾರ ಸಂಘಗಳ ರಜಿಸ್ಟ್ರಾರ್ 'ಮ್ಯಾಕನೀಲ' ಅಧಿಕಾರ ವಹಿಸಿಕೊಂಡ ವರ್ಷ, (ದಿ.ಕೋ.ಆ.ಕ್ರೆಡಿಟ್ ಸೊಸಾಯಿಟಿಗಳ ಕಾಯ್ದೆ 25 ಮಾರ್ಚ 1904ರಂದು ಪಾಸಾಯಿತು.) ಭಾರತದಲ್ಲಿ ಸಹಕಾರ ಕಾಯ್ದೆ ಜಾರಿಗೆ ಮೊದಲು ಇಂತಹ ಪ್ರಯೋಗಗಳು ನಡೆದಿರಲಿಲ್ಲವೆಂದು ಭಾವಿಸಬಾರದು. ಕೈಗಾರಿಕಾ ಕ್ರಾಂತಿಯ ನಂತರ ಕಾರ್ಮಿಕರ ಹಿತ ರಕ್ಷಣೆಗಾಗಿ ಸಹಕಾರ ಚಳವಳಿ ಕಾರ್ಯ ಪ್ರವೃತ್ತವಾಗಿದ್ದು, ಜರ್ಮನಿಯಲ್ಲಿ ಇದರ ಯಶಸ್ವಿ ಪ್ರಯೋಗವಾಗಿದ್ದಿತು.

ಭಾರತದಲ್ಲಿ ಬರಗಾಲ, ಕಾಲರಾ, ಪ್ಲೇಗು ಮೊದಲಾದವುಗಳಿಂದ ಗ್ರಾಮೀಣ ಭಾರತ ತತ್ತರಿಸಿದ್ದಿತು. ಜೊತೆಗೆ ಬಡ್ಡಿ ವ್ಯವಹಾರ ಮಾಡುವವರ ಶೋಷಣೆ ವಿರುದ್ಧ ಕೆಲವೆಡೆ ರೈತರು ಧರಣಿ ನಡೆಸಿದ್ದರು. ಗ್ರಾಮೀಣ ಭಾಗದ ರೈತರನ್ನು ಶೋಷಣೆಯಿಂದ ಮುಕ್ತಗೊಳಿಸಲು ಸಹಕಾರ ಚಿಂತನೆ ನಡೆಸಿದ್ದರ ಹಾಗೂ ಭಾರತೀಯ ರಾಜಕೀಯ ನಾಯಕರು ಜನರ ನೆರವಿಗೆ ಬರಬೇಕೆಂಬ ಒತ್ತಾಯವೂ ಸಹ ಸಹಕಾರ ಕಾಯ್ದೆ ಪಾಸಾಯಿತೆಂದು ಹೇಳಬಹುದು.

ಜುಲೈ 1904ರಲ್ಲಿ ಜೆ.ಮ್ಯಾಕನೀಲ (ಎ.ಓcniell-ICS) ಅವರನ್ನು ಮೊದಲ ರಜಿಸ್ಟ್ರಾರ ಎಂದು ನೇಮಕ ಮಾಡಲಾಯಿತು. ಮ್ಯಾಕನೀಲ ಕೆಲಕಾಲ ತಮ್ಮ ಮಾತೃಭೂಮಿಯಲ್ಲಿ ಕಳೆದು 'ಐರೀಷ್ ಅಗ್ರಿಕಲ್ಚರ್ ಆರ್ಗನೈಜೇಶನ್ ಸೊಸಾಯಿಟಿ'ಯಲ್ಲಿ ಕೆಲಸದ ಅನುಭವ ಪೆಡದು, ಭಾರತದಲ್ಲಿ ಸಹಕಾರ ಅಂದೋಲನಕ್ಕೆ ಭದ್ರ ಬುನಾದಿ ಹಾಕಬೇಕೆಂದು ಬಹು ಹುಮ್ಮಸ್ಸಿನಿಂದ ಕೆಲಸಕ್ಕೆ ಧುಮುಕಿದರು. ಅದಕ್ಕಾಗಿ ಪುನಾದಲ್ಲಿ ತಮ್ಮ ಪ್ರಧಾನ ಕಛೇರಿ ಸ್ಥಾಪಿಸಿದರು.

ದೇಶದಲ್ಲಿ ಪರಸ್ಥಿತಿ ಚೆನ್ನಾಗಿರಲಿಲ್ಲ. ಸಾಂಕ್ರಾಮಿಕ ರೋಗಗಳಿಂದ ಜನ ತತ್ತರಿಸಿದ್ದರು. ಕೃಷಿ ಚಟುವಟಿಕೆಗಳು ಹೆಚ್ಚು ಕಡಿಮೆ ಸ್ಥಗಿತಗೊಂಡಿದ್ದವು. ಇಂತಹ ಭೀಕರ ಪರಿಸ್ಥಿತಿಯಲ್ಲಿಯೇ ದೇಶ ಸಂಚಾರ ಮಾಡಿದ ಮ್ಯಾಕನೀಲ ಎಲ್ಲಿಯೂ ಸಹಕಾರ ಚಳವಳಿಗೆ ಬೆಂಬಲ ವ್ಯಕ್ತವಾಗಲಿಲ್ಲವಾದ್ದರಿಂದ ಬಹಳ ಹತಾಶಗೊಂಡಿದ್ದರು. ಅವರು ನಿರಾಶಾದಾಯಕ ಸ್ಥಿತಿಯಲ್ಲಿದ್ದಾಗ ಅವರು ಬೆಟಗೇರಿಯಲ್ಲಿ ಧರ್ಮಪ್ರಸಾರಕರಾಗಿದ್ದ ಪಾದ್ರಿ ಕ್ಯಾನನ್ ಸಿ.ಎಸ್.ರೆವ್ಹಿಂಗಟನ್ ಅವರನ್ನು ಭೆಟ್ಟಿಯಾದರು. ಈ ಭೆಟ್ಟಿಯಲ್ಲಿ ಅವರು ಫಾದ್ರಿ ಕ್ಯಾನನ್ ರೆವ್ಹಿಂಗಟನ್ ಅವರಲ್ಲಿ ತಮ್ಮ ನೋವು ತೋಡಿಕೊಂಡರು.

ದೇಶದ ಗ್ರಾಮೀಣ ಭಾಗದ ಜನರನ್ನು ಆರ್ಥಿಕ ಶೋಷಣೆಯಿಂದ ಕಾಪಾಡಲು ತಂದಿರುವ ಸಹಕಾರ ಕಾಯ್ದೆಯನ್ನು ಜನರು ಉಪಯೋಗ ಮಾಡಿಕೊಳ್ಳುವಂತಾಗಬೇಕೆಂದು ಆಗ ರೆವ್ಹಿಂಗಟನ್ ಅವರು ತಮ್ಮ ಜೊತೆ ಬರಗಾಲ ಪರಿಹಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಕೆಲಸ ಮಾಡಿದ ಶ್ರೀ ಶಿವಾಜಿ ರಾಮಚಂದ್ರ ಕುಲಕರ್ಣಿ ಅವರನ್ನು ಕರೆಯಿಸಿಕೊಂಡು ಚರ್ಚಿಸಿದರು. ರಾವಸಾಹೇಬ ಶಿವಾಜಿ ರಾಮಚಂದ್ರ ಕುಲಕರ್ಣಿ ವಕೀಲರು ನೆರೆಯ ಕನಗಿನಹಾಳ ಗ್ರಾಮದವರು ತಮ್ಮ ಗ್ರಾಮದಲ್ಲಿ ಆನಂತರ ರಂಗನಗೌಡ.ಪಾಟೀಲರ ನೇತೃತ್ವದಲ್ಲಿ ಹುಲಕೋಟಿಯಲ್ಲಿ ತಮ್ಮ ಸಂಭಂಧಿಕರಾದ ಹಂದಿಗೋಳದ ಡಿ.ಬಿ.ಕುಲಕರ್ಣಿಯವರ ನೇತೃತ್ವದಲ್ಲಿ ಸಹಕಾರ ಪತ್ತಿನ ಸಂಘಗಳನ್ನು ಸ್ಥಾಪಿಸಿದರು.

ರೆವ್ಹಿಂಗಟನ್ ಅವರೇ 1905ರಲ್ಲಿ ದೇಶದ ಮೊಟ್ಟ ಮೊದಲ ಪಟ್ಟಣ ಸಹಕಾರಿ ಬ್ಯಾಂಕನ್ನು ಬೆಟಗೇರಿಯಲ್ಲಿ ಸ್ಥಾಪಿಸಿದರು. ಕನಗಿನಹಾಳದ ಗೌಡರಾದ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರು ದೇಶದ ಮೊಟ್ಟ ಮೊದಲ ಸೊಸಾಯಿಟಿ ಅಧ್ಯಕ್ಷರಾದುದರಿಂದ ಸಹಕಾರ ರಂಗದ ಪಿತಾಮಹ ಎಂದು ಬಣ್ಣಿಸಲ್ಪಟ್ಟಿದ್ದಾರೆ. ಎಸ್. ಎಸ್. ಪಾಟೀಲರು ರೇಲ್ವೆ ನಿಲ್ದಾಣ, ಕುಡಿಯಲು ನೀರಿನ ವ್ಯವಸ್ಥೆ ರೂಪಗೊಳ್ಳುವಂತೆ ಮಾಡಿದ ಶ್ರೇಯಸ್ಸಿಗೆ ಪಾತ್ರರಾಗಿದ್ದಾರೆ.

1905 ಮಾರ್ಚ ಅಂತ್ಯದ ವೇಳೆಗೆ 8 ಸಹಕಾರಿ ಪತ್ತಿನ ಸಂಘಗಳು ಸ್ಥಾಪಿಸಲ್ಪಟ್ಟಿದ್ದವೆಂದು ಮ್ಯಾಕನೀಲ ವರದಿಯಲ್ಲಿ ತಿಳಿಸಿದ್ದಾರೆ. 1906ರ ಮಾರ್ಚ ಅಂತ್ಯದ ವೇಳೆಗೆ 31 ಸೊಸಾಯಿಟಿಗಳು ನೋಂದಾಯಿಸಲ್ಪಟ್ಟಿದ್ದವು. ಮ್ಯಾಕನೀಲ ನಂತರ ಸಿ.ಎಸ್. ಕ್ಯಾಂಪಬೆಲ್ ಸಹಕಾರ ಇಲಾಖೆ ರಜಿಸ್ಟ್ರಾರರಾದರು. ಅವರ ಅಧಿಕಾರ ಅವಧಿ ಮುಗಿದಾಗ 1911ರಲ್ಲಿ ಮುಂಬಯಿ ಪ್ರಾಂತದಲ್ಲಿ 300ಕ್ಕೂ ಅಧಿಕ ಸಹಕಾರ ಸಂಘಗಳು ಸ್ಥಾಪನೆಗೊಂಡಿದ್ದವು. 1913ರಲ್ಲಿ 515, 1914ರಲ್ಲಿ 698 ಸಹಕಾರ ಸಂಘಗಳು ಸ್ಥಾಪನೆಗೊಂಡವಲ್ಲದೇ ಪಟ್ಟಣ ಸಹಕಾರಿ ಬ್ಯಾಂಕುಗಳು ಅಂದೋಲನ ಆರಂಭಗೊಂಡಿತು. ಜಾತಿ ಬೆಂಬಲಿತ ಹಣಕಾಸು ಸಂಸ್ಥೆಗಳು ಎಲ್ಲಡೆ ಬೆಳೆದು ಬಂದವು. ಕುರುಬರ ಬ್ಯಾಂಕ್, ರಡ್ಡಿ ಬ್ಯಾಂಕ್, ಭಾವಸಾರ ಕ್ಷತ್ರೀಯ ಬ್ಯಾಂಕ್, ನೇಕಾರರ ಸೊಸಾಯಿಟಿ ಮೊದಲಾದ ಸಂಸ್ಥೆಗಳು ಗದಗ ಪರಿಸರದಲ್ಲಿ ಬೆಳೆದು ಬಂದವು.

**ಗದಗ – ಸಹಕಾರ ಕಾಶಿ:** ಗದಗ ನಗರವನ್ನು ಸಹಕಾರ ಕಾಶಿ ಎಂದು ಬಣ್ಣಿಸಲಾಗಿದೆ. ಗದಗ ಭಾಗದಲ್ಲಿ ಬೆಳೆಯುತ್ತಿದ್ದ ಲಕ್ಷ್ಮಿ ಹತ್ತಿ ಮುಂಬಯಿ ಮಾರುಕಟ್ಟೆಯಲ್ಲಿ 'ಬಿಳಿ ಬಂಗಾರ' ಎಂದು ಬಣ್ಣಿಸಲ್ಪಡುತ್ತಿದ್ದಿತು. ಅದಕ್ಕಾಗಿ ಹತ್ತಿ ಖರೀದಿಗೆ ಮುಂಬಯಿ, ಬರೋಡ, ಅಹ್ಮದಾಬಾದಗಳಿಂದ ಗುಜರಾತಿಗಳು ಆಗಮಿಸಿದ್ದರು. ಅವರು ಬಂದು ನೆಲೆಸಿದ ಪ್ರದೇಶ ಅಂದಿನಿಂದಲೂ ಹಾಗೂ ಈಗಲೂ 'ಗುಜ್ಜರಬಸ್ತಿ' ಎಂದು ಕರೆಯಲ್ಪಡುತ್ತಿದೆ.

ಹತ್ತಿ ಖರೀದಿ ಮಾಡಿದ ನಂತರ ಅದನ್ನು ಮುಂಬಯಿಗೆ ಕಳುಹಿಸಲು ಜಿನ್ ಮಾಡಿ ಪ್ರೆಸ್ ಮಾಡಿ ಬೇಲಗಳಲ್ಲಿ ಕಟ್ಟಿ ಕಳುಹಿಸಲು ಗದಗದಲ್ಲಿ ಜಿನ್ನಿಂಗ್ ಪ್ರೆಸ್ಸಿಂಗ್ ಫ್ಯಾಕ್ಟರಿಗಳು ಬಂದವು. ಅದರಲ್ಲಿ ಸಹಕಾರಿ ರಂಗದ ಫ್ಯಾಕ್ಟರಿಗಳು ಬೆಳೆದ ಬಂದವು. ಒಂದು ಕಾಲಕ್ಕೆ ಗದಗ ಜಿನ್ನಿಂಗಿಗೆ ಪ್ರಸಿದ್ಧ ಪಡೆದಿದ್ದಿತು.

ಪೆಸ್ಟ ಪೇಟೆಂಟ ಪ್ರೆಸ್ ಕಂ.ಲಿ (200), ಕೆ.ಪಟಾರಿಯಾ ಪ್ರೆಸ ಫ್ಯಾಕ್ಟರಿ (100), ಆರ್.ಎ.ಕುಷ್ಟಗಿ ಪ್ರೆಸ್ ಫ್ಯಾಕ್ಟರಿ (70), ಗದಗ ಮಹಾಲಕ್ಷ್ಮೀ ಜಿನ್ನಿಂಗ ಆ್ಯಂಡ ಪ್ರೆಸ್ಸಿಂಗ ಕಂ.ಲಿ (225), ವ್ಹಿ.ಡಿ.ಮಾನ್ವಿ ಪ್ರೆಸ್ ಫ್ಯಾಕ್ಟರಿ (200), ಮಣಿಕಾಂತ ಲಖಮಸಿ ಪ್ರೆಸ ಫ್ಯಾಕ್ಟರಿ (225), ಕೃತಪುರ ಜಿನ್ನಿಂಗ ಆ್ಯಂಡ ಪ್ರೆಸ್ಸಿಂಗ ಕಂ.ಲಿ (200), ಭೂಮರಡ್ಡಿ ಬ್ರದರ್ಸ ಪ್ರೆಸ್ ಫ್ಯಾಕ್ಟರಿ (225), ಎಸ್.ಎಸ್. ಯಳಮಲಿ ಪ್ರೆಸ್ ಫ್ಯಾಕ್ಟರಿ (225), ಎನ್.ಪಿ.ಗದಗ ಜಿನ್ ಫ್ಯಾಕ್ಟರಿ (150), ಎಸ್.ಬಿ.ಆ್ಯಂಡ ಕೆ.ಬಿ.ಅಬ್ಬಿಗೇರಿ ಜಿನ್ನಿಂಗ ಫ್ಯಾಕ್ಟರಿ (150), ಲಾಲಜಿ ಲದ್ದಾ ಜಿನ್ನಿಂಗ ಫ್ಯಾಕ್ಟರಿ (50), ಬಸವರಾಜ ಜಿನ್ ಫ್ಯಾಕ್ಟರಿ (50), ರಾಜಪ್ಪ ವೀರಪ್ಪ ಮಾನ್ವಿ ಜಿನ್ನಿಂಗ ಫ್ಯಾಕ್ಟರಿ (40), ಗದಗ-ಬೆಟಗೇರಿ ಜಿನ್ನಿಂಗ ಫ್ಯಾಕ್ಟರಿ (40), ವೆಲಜಿ ಮುಲಜಿ ಜಿನ್ನಿಂಗ ಫ್ಯಾಕ್ಟರಿ (40) (ಆವರಣದಲ್ಲಿ ಕೊಟ್ಟಿರುವ ಸಂಖ್ಯೆ ಉದ್ಯೋಗಾವಕಾಶಗಳು) ಈ ಎಲ್ಲ ಜಿನ್ನಿಂಗ ಪ್ರೆಸ್ಸಿಂಗ ಘಟಕಗಳಲ್ಲಿ ಒಟ್ಟು 2085 ಜನರು ಕೆಲಸ ಮಾಡುತ್ತಿದ್ದರು. ನಾರಾಯಣದಾಸ ಚುನ್ನಿಲಾಲ ಮಿಲ್ಸ ಕಾರ್ಮಿಕರ ಸಮಸ್ಯೆಯಿಂದಾಗಿ ಸ್ಥಗಿತಗೊಂಡಿದ್ದು ಗದಗಿನ ದುರ್ದೈವ ಎಂದೇ ಹೇಳಬಹುದು.

ಸಹಕಾರ ತತ್ವ : 'ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರು' ಇದು ಸಹಕಾರ ತತ್ವದ ಮುಖ್ಯ ಸಂದೇಶ. ಈ ಶ್ರೇಷ್ಠ ತತ್ವದ ಬುನಾದಿಯ ಮೇಲೆ ಕಟ್ಟಿರುವುದು ಸಹಕಾರ ಕ್ಷೇತ್ರ. ಗದಗ ಜಿಲ್ಲೆಯಲ್ಲಿ ಎಲ್ಲ ರೀತಿಯ ಸಹಕಾರ ಸಂಸ್ಥೆಗಳು ಬೆಳೆದು ಬಂದಿರುವ ವೈವಿದ್ಯ ಮಯವಾಗಿರುವ ಸಹಕಾರ ಸಂಸ್ಥೆಗಳ ಸಂಖ್ಯೆ ಒಟ್ಟು 1083. ಅದರಲ್ಲಿ ಕಾರ್ಯನಿರತವಾದವು 953. ಸ್ಥಗಿತಗೊಂಡಿರುವ 59, ಸಮಾಪನಗೊಂಡಿರುವ 71 ಸಂಸ್ಥೆಗಳಿವೆ. ಇವರಲ್ಲಿ 432 ಸಂಸ್ಥೆಗಳು ಲಾಭದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ ಸಹಕಾರ ತತ್ವವನ್ನು ನಿಜವಾಗಿ ಅನುಷ್ಠಾನಗೊಳಿಸಲು ಗದಗ ಪರಿಸರದಲ್ಲಿ ಹಲವಾರು ನಾಯಕರು ಪ್ರಯತ್ನಿಸಿದ್ದಾರೆ. ಸಹಕಾರದಿಂದ ಸರ್ವೋದಯ ಸಮಾಜ ಕಟ್ಟುವ ಕನಸು ಕಂಡವರಲ್ಲಿ ಗಣ್ಯರೆಂದರೆ ಕೆ.ಎಚ್.ಪಾಟೀಲ ಇವರ ನೇತೃತ್ವದಲ್ಲಿ ಗದಗ ಪರಿಸರದಲ್ಲಿ ಸಹಕಾರ ಚಳುವಳಿ ಗಳಿಸಿದ ಕೀರ್ತಿಯಿಂದಾಗಿ ಗದಗ ಸಹಕಾರ ಕಾಶಿ ಎಂದು ಹಾಗೂ ಕೆ.ಎಚ್.ಪಾಟೀಲರನ್ನು ಸಹಕಾರ ರಂಗದ ಭೀಷ್ಮ ಎಂದು ಬಣ್ಣಿಸಲಾಗುತ್ತಿದೆ.

1917ರಲ್ಲಿ ಹತ್ತಿ ಬೆಳೆಯುವ ರೈತರನ್ನು ಮಾರುಕಟ್ಟೆಯಲ್ಲಿ ಆಗುವ ಶೋಷಣೆಯಿಂದ ಮುಕ್ತಗೊಳಿಸಲು ಸಹಕಾರ ಕಾಯ್ದೆಗೆ ಆ ತಿದ್ದುಪಡಿ ಆಧರಿಸಿ ದಿ ಗದಗ ಕೋ-ಆಪ್ ಕಾಟನ್ ಸೇಲ್ ಸೊಸಾಯಿಟಿ ಸ್ಥಾಪಿಸಲ್ಪಟ್ಟಿತು. ಅಂದು ಮುಂಬಯಿ ಪ್ರಾಂತದ ಗವ್ಹರ್ನರಾಗಿದ್ದ "ಬ್ರೇಬೋರ್ನ" ಅವರು ಕಾಟನ್ ಸೇಲ್ ಸೊಸಾಯಿಟಿಯ ಆಡಳಿತ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು.

1954 ಗದಗ ರಾಜಕೀಯ ಇತಿಹಾಸದಲ್ಲಿ ಬಹಳ ಮಹತ್ವಪೂರ್ಣವಾದ ವರ್ಷ. ಗದಗ-ಬೆಟಗೇರಿ ನಗರಸಭೆ ಹತ್ತಿಕಾಳ ಬಜಾರ ರಚಿಸಿ, 56 ವಖಾರಗಳ ನಿರ್ಮಿಸಿತು. ಇಲ್ಲಿ ಹತ್ತಿ ಮಾರಾಟ ವ್ಯವಸ್ಥೆ ಮಾಡಲಾಯಿತು.

1959 ಗದಗ ಎ.ಪಿ.ಎಂ.ಸಿ ಇತಿಹಾಸದಲ್ಲಿ ಅವಿಸ್ಮರಣೀಯವಾದ ವರ್ಷ. ರೋಣ ಮುಂಡರಗಿ ತಾಲೂಕಗಳು ಗದಗ ಎ.ಪಿ.ಎಂ.ಸಿ ರಕ್ಷಣೆ ಬರುತ್ತಿದ್ದವು. ತಾಲೂಕಗೊಂದು ಎ.ಪಿ.ಎಂ.ಸಿ ಇರಬೇಕೆಂಬ ಸರಕಾರದ ನಿರ್ಧಾರದಂತೆ ರೋಣ, ಮುಂಡರಗಿ ಪ್ರತ್ಯೇಕಗೊಂಡವು. ಆಗ ತೆರವಾದ ಎ.ಪಿ.ಎಂ.ಸಿ ಚೇರಮನ್ ಸ್ಥಾನಕ್ಕೆ ಕೆ.ಎಚ್.ಪಾಟೀಲರು ಆಯ್ಕೆಯಾದರು. ಇದು ಒಂದು ರೀತಿ ಗದಗದಲ್ಲಿ ಕೆ.ಎಚ್.ಪಾಟೀಲ ಯುಗಾರಂಭವಾಯಿತು. ದಿ.ಗದಗ ಕೋ-ಆಪ್ ಕಾಟನ್ ಸೇಲ್ ಸೊಸೈಟಿಯಲ್ಲಿ ಬಹುಮತ ಸಾಧಿಸಿ ಆ ಸಂಸ್ಥೆಯ ಕರ್ಣಾಧಾರತ್ವ ಸ್ವೀಕರಿಸಿದ ಪಾಟೀಲರು ಈ ಎರಡೂ ಸಂಸ್ಥೆಗಳನ್ನು ರೈತ ಪಕ್ಷಪಾತಿ ಸಂಸ್ಥೆಗಳಿಗಾಗಿ ಬೆಳೆಸಿದ್ದರ ಫಲವಾಗಿ ಗದಗ ಸಹಕಾರ ರಂಗದ ಕಾಶಿ ಎಂಬ ಖ್ಯಾತಿ ಗಳಿಸಿತು.

ದಿ.ಗದಗ ಕೋ-ಆಪ್ ಕಾಟನ್ ಸೇಲ್ ಸೊಸಾಯಿಟಿ ಶ್ರೇಷ್ಠ ಸಹಕಾರಿ ಸಂಸ್ಥೆ ಎಂದು ರಾಜ್ಯ ಸರಕಾರದಿಂದ ಬಹುಮಾನ ಪಡೆಯಿತು. ಸಂಸ್ಥೆ ಗುದಾಮ ನಿರ್ಮಾಣದಲ್ಲಿ ದಾಖಲೆಯ ಕೆಲಸ ಮಾಡಿತಲ್ಲದೆ ಗ್ರಾಮೀಣ ಭಾಗದಲ್ಲಿ ಗುದಾಮಗಳು ಕಟ್ಟಿ ಅವುಗಳನ್ನು ರೈತರ ಲಕ್ಷ್ಮೀ ಮಂದಿರಗಳು ಎಂಬ ಭಾವ ಬೆಳೆಸಿದರು. ಕೆ.ಎಚ್.ಪಾಟೀಲರು ಸಹಕಾರಕ್ಕೊಂದು ಅನ್ವರ್ಥಕನಾಮವಾಗಿ ಬೆಳೆದು ಸಹಕಾರ ಸಂಸ್ಥೆಗಳನ್ನು ಬೆಳೆಸಿದರು. ಅವರ ಗುರಿ ಗ್ರಾಮೀಣ ಬದುಕಿನಲ್ಲಿ ಶೋಷಣೆ ರಹಿತ ಸಮಾಜ ನಿರ್ಮಿಸುವುದಾಗಿದೆ. ಅದಕ್ಕಾಗಿ ಅವರು ಸುವ್ಯವಸ್ಥಿತ ಸಹಕಾರಿ ಜಾಲ ಹೆಣೆದಿದ್ದಾರೆ. ಈ ಸಹಕಾರ ಜಾಲದಲ್ಲಿ ರೈತರೇ ನಿರ್ವಾಹಕರು, ಚಾಲಕರು, ಮಾಲೀಕರು.

ರೈತರ ಆರ್ಥಿಕ, ಬೌದ್ಧಿಕ ಶೋಷಣೆ ಕೊನೆಗೊಳ್ಳಬೇಕು. ರೈತರು ಬೆಳೆದ ಮಾಲಿಗೆ ನ್ಯಾಯೋಚಿತ ಬೆಲೆ ದೊರೆಯಬೇಕು. ರೈತ ತನ್ನ ಉತ್ಪಾದನೆ ಮಾರುವಾಗ ಹಾಗೂ ತನ್ನ ಅಗತ್ಯವಸ್ತುಗಳನ್ನು ಕೊಳ್ಳುವಾಗ ವಂಚನೆಗೊಳಬಾರದು. ರೈತರು ಬೆಳೆದ ಮಾಲು ಸಂಸ್ಕರಣೆಗೊಂಡು ಮಾರಾಟವಾಗಬೇಕು. ರೈತ ದೀನನಾಗಿ ಬದುಕಬಾರದು ಧೈರ್ಯದಿಂದ ಸ್ವಾಭಿಮಾನಿಯಾಗಿ ಸ್ವಾವಲಂಬಿಯಾಗಿ ಬಾಳಬೇಕೆಂಬುದೇ ಕೆ.ಎಚ್.ಪಾಟೀಲರ ಆಶಯವಾಗಿದ್ದಿತು.

ದಿ.ಗದಗ ಕೋ-ಆಪ್ ಕಾಟನ್ ಸೇಲ್ ಸೊಸಾಯಿಟಿ ಕೆ.ಎಚ್.ಪಾಟೀಲರ ಕರ್ಮಕ್ಷೇತ್ರ. ಈ ಸಂಸ್ಥೆಯಿಂದ ಜಿನ್ನಿಂಗ ಪ್ರೆಸ್ಸಿಂಗ, ತೊಗರಿ ಬೆಳೆಗಾರರಿಗಾಗಿ ದಾಲ್ ಮಿಲ್, ರೈತರ ಅಗತ್ಯ ವಸ್ತುಗಳಿಗಾಗಿ ಸೇಲ್ ಡಿಪೋ, ಪೆಟ್ರೋಲ್ ಬಂಕ್ ಸ್ಥಾಪಿಸಿದರು. ಹತ್ತಿ ಬೆಳೆಗಾರ ರೈತರ ಹಿತ ಕಾಪಾಡಲು ದಿ.ಗದಗ ಕೋ-ಆಪ್ ಟೆಕ್ಸಟೈಲ್ ಮಿಲ್ ಹಾಗೂ ದಿ.ಫಾರ್ಮರ್ಸ್ ಕೋ-ಆಪ್ ಸ್ಪಿನ್ನಿಂಗ ಮಿಲ್ ಸ್ಥಾಪಿಸಿದರು. ಎಣ್ಣೆಗಾಳು ಬೆಳೆದಿರುವ ರೈತರ ಹಿತ ಕಾಪಾಡಲು ದಿ.ಫಾರ್ಮರ್ಸ ಕೋ-ಆಪ್ ಆಯಿಲ್ಸ ಲಿ. ಬಿಂಕದಕಟ್ಟಿ ಕಟ್ಟಿದರು. ರೈತರ ದನಕರುಗಳ ಆರೋಗ್ಯ ಕಾಪಾಡಲು ದಿ.ಹುಲಕೋಟಿ ಕೋ-ಆಪ್ ಕ್ಯಾಟಲ್ ಫೀಡ್ಸ ಸ್ಥಾಪಿಸಿದರು. ಉದ್ಯೋಗಾವಕಾಶಗಳಿಗಾಗಿ ಖಾದಿ ಗ್ರಾಮೋದ್ಯೋಗ, ರೈತರ ಆರೋಗ್ಯಕಾಪಾಡಲು ಆರೋಗ್ಯ ಸೇವಾ ಸಹಕಾರಿ ಸಂಘ, ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ವಿಜ್ಞಾನ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ, ಕೃಷ್ಣಾ ಕೃಷಿ, ಕ್ರಾಪ್ ಡೆವ್ಹಲಪಮೆಂಟ್ ಕೋ. ಆಪ್ ಸೊಸಾಯಿಟಿ, ದಿ.ರೂರಲ್ ಮೆಡಿಕಲ್ ಸರ್ವೀಸ್ ಸೊಸೈಟಿ, ಗದಗ ಕೋ-ಆಪ್ ಇಂಡಸ್ಟ್ರೀಯಲ್ ಎಸ್ಟೇಟ್, ವಿದ್ಯುತ್ ಚಾಲಿತ ಮಗ್ಗಗಳ ಸಮುಚ್ಚಯ, ಹೌಸಿಂಗ್ ಸೊಸಾಯಿಟಿ ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆ, ರೂರಲ್ ಟೆಕ್ನಿಕಲ್ ಎಜ್ಯುಕೇಶನ್ ಸೊಸಾಯಿಟಿ ಜೊತೆಗೆ ಹತ್ತಾರು ಸಹಕಾರ ಸಂಸ್ಥೆಗಳನ್ನು ಹುಟ್ಟಿಹಾಕಿದರು. ಈ ಎಲ್ಲ ಸಂಸ್ಥೆಗಳ ಉದ್ದೇಶ ರೈತರನ್ನು ಶೋಷಣೆ ಮುಕ್ತರನ್ನಾಗಿ ಮಾಡಿ ಅವರನ್ನು ಆರೋಗ್ಯವಂತರನ್ನಾಗಿ ಅವರ ಕುಟುಂಬ ವರ್ಗದವರನ್ನು ಆಧುನಿಕ ಸ್ಪರ್ಧಾತ್ಮಕ ಯುಗಕ್ಕೆ ಸಿದ್ದಗೊಳಿಸುವುದಾಗಿದ್ದಿತು. ಆ ದಿಶೆಯಲ್ಲಿ ಅವರ ಸಾಧನೆ ಅವಿಸ್ಮರಣೀಯ ಅದಕ್ಕಾಗಿ ಅವರಿಗೆ ಇಂಡಿಯನ್ ಫಾರ್ಮರ್ಸ ಆ್ಯಂಡ ಫರ್ಟಿಲೈಸರ್ಸ ಕೋ-ಆಪ್ ಸಂಸ್ಥೆ ರಾಷ್ಟ್ರದ ಶ್ರೇಷ್ಠ ಸಹಕಾರಿ ಪ್ರಶಸ್ತಿ, ನೀಡಿ ಗೌರವಿಸಿದರು.

– ಜಗನ್ನಾಥ.ಜಮಾದಾರ.
ನಿಲಯ ನಿರ್ದೇಶಕರು,
ಸಹಕಾರ ರೇಡಿಯೋ–ಗದಗ.

**ಆಧಾರ ಗ್ರಂಥಗಳು:** ಧಾರವಾಡ ಜಿಲ್ಲಾ ಗೆಜೆಟಿಯರ್, ಗದಗ ಡೈರೆಕ್ಟರಿ, ಕೆ.ಎಚ್.ಪಾಟೀಲ–ದೃಷ್ಟಿ–ಸೃಷ್ಟಿ, ಗದಗ–ಬೆಟಗೇರಿ Centenary Souvenir in the wake of Freedom-India's trust with Co-operatives- L.C.Jain & Karen Chesto Report of the committee on Urban Co-operative

## ಗದಗ ಪರಿಸರ ದೇಶದಲ್ಲಿಯೇ ಒಂದು ಅಪರೂಪದ ಸಹಕಾರಿ ಕ್ಷೇತ್ರ

# ಸಹಕಾರದ ಬೃಹತ್ ಪ್ರಯೋಗಶಾಲೆ–ಗದಗ

ಗದಗ ಸಹಕಾರದ ಗಂಗೋತ್ರಿ, ಸಹಕಾರದ ತೊಟ್ಟಿಲು. ಬದುಕಿನ ಎಲ್ಲ ಕ್ಷೇತ್ರ ವ್ಯಾಪಿಸಿಸಿರುವ ಸಹಕಾರದ ಬೃಹತ್ ಕಾರ್ಯಗಾರ, ಪ್ರಯೋಗಶಾಲೆಯಾಗಿ ಹೊರಹೊಮ್ಮಿದೆ. ಸಹಕಾರದಿಂದ ಸರ್ವೋದಯ ಸಮಾಜ ನಿರ್ಮಾಣ, ಸಹಕಾರದಿಂದ ಶೋಷಣೆ ಮುಕ್ತ ಸಮಾಜ ನಿರ್ಮಾಣ, ಸಹಕಾರದಿಂದ ಸ್ವಾವಲಂಬಿ, ಸ್ವಾಭಿಮಾನ ಸಮಾಜ ನಿರ್ಮಾಣ, ಸಹಕಾರದಿಂದ ಬುದ್ಧಿವಂತ ಸಮಾಜ ನಿರ್ಮಾಣ ಈ ಎಲ್ಲ ಗುರಿ ಸಾಧನೆಗೆ ಯಶಸ್ವಿ ಪ್ರಯೋಗ ನಡೆದಿರುವ ಗದಗ ಪರಿಸರ ದೇಶದಲ್ಲಿಯೇ ಒಂದು ಅಪರೂಪದ ಸಹಕಾರಿ ಕ್ಷೇತ್ರ. ಅದಕ್ಕಾಗಿಯೇ ಗದಗನ್ನು ಸಹಕಾರಿ ರಂಗದ 'ಓಯಾಸಿಸ್' ಎಂದು ಬಣ್ಣಿಸಿದ್ದಾರೆ.

ದೇಶದ ಮೊಟ್ಟ ಮೊದಲ ಸಹಕಾರಿ ಪತ್ತಿನ ಸಂಘ ಸ್ಥಾಪಿಸಲ್ಪಟ್ಟಿದ್ದು ಗದಗ ತಾಲೂಕಿನ ಕನಗಿನಹಾಳ ಗ್ರಾಮದಲ್ಲಿ ಇಂದು ಗದಗ ಜಿಲ್ಲೆಯಲ್ಲಿ, ಸೌಹಾರ್ದ ಸಹಕಾರಿ ಸಂಸ್ಥೆಗಳ ಸಂಖ್ಯೆ 70. ಇಂದು ಗದಗ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಒಂದು ಪ್ರಾಥಮಿಕ ಸಹಕಾರಿ ಕೃಷಿ ಪತ್ತಿನ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತವೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಸಂಖ್ಯೆ 181 ಗಡಿ ದಾಟಿದೆ. ಹತ್ತು ಪಟ್ಟಣ ಸಹಕಾರಿ ಬ್ಯಾಂಕುಗಳ ಕಾರ್ಯ ನಿರ್ವಹಿಸುತ್ತವೆ. ಇತರೇ ಪತ್ತಿನ ಸಹಕಾರಿ ಸಂಘಗಳ ಸಂಖ್ಯೆ 180. ನೌಕರರ ಪತ್ತಿನ ಸಹಕಾರಿ ಸಂಘಗಳ ಸಂಖ್ಯೆ 57 ಹಾಗೂ 80 ಟಿ.ಎ.ಪಿ.ಸಿ.ಎಂ.ಎಸ್‌ಗಳಿವೆ. 5 ಇತರೇ ಮಾರಾಟ ಸಹಕಾರಿ ಸಂಘಗಳಿದ್ದರೆ ಎರಡು ಸಹಕಾರಿ ಸಕ್ಕರೆ ಕಾರ್ಖಾನೆಗಳಿವೆ, ಮೂರು ನೂಲಿನ ಗಿರಣಿಗಳು, 31 ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘಗಳಿವೆ. ಪಶು ಸಂಗೋಪನದಲ್ಲಿ 240 ಸಹಕಾರಿ ಸಂಘಗಳಿವೆ. 227 ಹಾಲು ಉತ್ಪಾದಕ ಸಹಕಾರಿ ಸಂಘಗಳಿವೆ. ಒಟ್ಟು ಗದಗ ಜಿಲ್ಲೆಯಲ್ಲಿ 1118 ಸಹಕಾರಿ ಸಂಘಗಳು ಕೆಲಸ ನಿರ್ವಹಿಸುತ್ತವೆ. ಈ ಎಲ್ಲ ಸಂಸ್ಥೆಗಳು ಒಟ್ಟು ಉದ್ದೇಶ ಸಮಾಜವನ್ನು ಆರ್ಥಿಕ ಶೋಷಣೆಯಿಂದ ಮುಕ್ತಗೊಳಿಸುವುದಾಗಿದೆ.

ಗದಗ, ಮುಂಡರಗಿ, ಶಿರಹಟ್ಟಿ, ಲಕ್ಷ್ಮೇಶ್ವರ, ನರಗುಂದ, ರೋಣ, ಗಜೇಂದ್ರಗಡ ತಾಲೂಕುಗಳನ್ನೊಳಗೊಂಡ ಗದಗ ಜಿಲ್ಲೆ ಎಲ್ಲ ಬಗೆಯ ಸಹಕಾರಿ ಸಂಸ್ಥೆಗಳಿಂದ ಶ್ರೀಮಂತವಾಗಿದೆ. ಸೇವಾ ಸಹಕಾರಿ ಸಂಸ್ಥೆಗಳಿಂದ ಹಿಡಿದು ಬೃಹತ್ ಉತ್ಪಾದನಾ ಸಹಕಾರಿ ಸಂಸ್ಥೆಗಳಿವೆ. ಎಲ್ಲ ಬಗೆಯ ಸಂಸ್ಕರಣ ಘಟಕಗಳಿವೆ. ವಿಶೇಷವಾಗಿ ಕೃಷಿ ಕ್ಷೇತ್ರದಲ್ಲಿ, ಪಶುಸಂಗೋಪನ ಕ್ಷೇತ್ರದಲ್ಲಿ ಹೆಚ್ಚು ಸಹಕಾರಿ ಸಂಸ್ಥೆಗಳು ಕೆಲಸ ಮಾಡುತ್ತ ರೈತರ ಬದುಕಿನ ಆರ್ಥಿಕ ಭದ್ರತೆಯನ್ನು, ಭರವಸೆಯನ್ನು ಮೂಡಿಸುವ ಕೆಲಸ ಮಾಡುತ್ತಿವೆ. ಸಹಕಾರವೆಂದರೆ ನುಡಿಯುವುದಲ್ಲ ನಡೆಯುವುದು. ಸಹಕಾರವೆಂದರೆ ಮಾನವೀಯ ಹೃದಯವಂತಿಕೆ ಸಹಕಾರ ಮಾನವನ ಉನ್ನತ ಜೀವನಕ್ಕೊಂದು ಸಾಧನ. ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಬಾಳುವುದೇ ಸಹಕಾರ. ಸಹಕಾರ ಪ್ರಾಮಾಣಿಕರ ಅಸ್ತ್ರ, ಸಹಕಾರ ಸ್ವಾಭಿಮಾನಿಗಳ ಕ್ಷೇತ್ರ, ತನ್ನ ಕಲ್ಯಾಣಕ್ಕಿಂತ ತನ್ನವರ ಕಲ್ಯಾಣಕ್ಕೆ ಸಮರ್ಪಿತರಾದವರ ಕ್ಷೇತ್ರ.

**ಶೈಕ್ಷಣಿಕ ಕಾರ್ಯಗಾರ:** ಶಿಕಣ ಕ್ಷೇತ್ರದಲ್ಲಿ ಗದಗ ಪರಿಸರದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಸಹಕಾರಿ ಕ್ಷೇತ್ರ ಕಾರ್ಯಾರಂಭ ಮಾಡಿದೆ. ಉದಾಹರಣೆಗೆ, ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆ, ಪೂರ್ವಪ್ರಾಥಮಿಕ, ಬಾಲವಾಡಿ ಕೇಂದ್ರಗಳನ್ನು ಸ್ಥಾಪಿಸಿತು. ಪ್ರಾಥಮಿಕ, ಮಾಧ್ಯಮಿಕ, ಸಂಯುಕ್ತ ಪದವಿಪೂರ್ವ ಪೂರ್ಣಪ್ರಮಾಣದ ಕಾಲೇಜು, ವೃತ್ತ ತರಬೇತಿ, ಕಾನೂನು ಮಹಾವಿದ್ಯಾಲಯ, ಕಂಪ್ಯೂಟರ್ ಶಿಕ್ಷಣ ವ್ಯವಸ್ಥೆ ಮಾಡಿತು. ಕೆ.ಜಿ.ಯಿಂದ ಪಿ.ಜಿಯವರೆಗೆ ಶಿಕ್ಷಣ ನೀಡುತ್ತಿರುವ ಈ ಸಂಸ್ಥೆ ನಿರಂತರ ವಿಸ್ತಾರಣೆಗೊಳ್ಳುತ್ತದೆ.

ರೂರಲ್ ಟೆಕ್ನಿಕಲ್ ಎಜ್ಯುಕೇಶನ್ ಸೊಸೈಟಿ, ಪಾಲಿಟೆಕ್ನಿಕ್ ಡಿಪ್ಲೋಮಾ ಕೋರ್ಸಗಳನ್ನು ಹಾಗೂ ಇಂಜಿನಿಯರಿಂಗ್‌ದಲ್ಲಿ ಪದವಿ ಹಾಗೂ ಸ್ನಾತಕ ಪದವಿ ಶಿಕ್ಷಣ ನೀಡುತ್ತಿದೆ. ಶ್ರೀ ರಾಮಕೃಷ್ಣಮ ಆಶ್ರಮ ಸಂಸ್ಥೆ ಬಾಲವಾಡಿ, ಮಾಧ್ಯಮಿಕ ಶಾಲೆ, ಉಚಿತ ಪ್ರಸಾದ ನಿಲಯ, ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ ಜೆ.ಓಡಿಸಿ ಶಿಕ್ಷಣ ನೀಡುತ್ತಿದೆ. ಶ್ರೀ ರಾಜರಾಜೇಶ್ವರಿ ವಿದ್ಯಾನಿಕೇತನ ವಸತಿ ಸೌಲಭ್ಯ ಹೊಂದಿರುವ ಇಂಗ್ಲೀಷ್ ಮಾಧ್ಯಮ ಶಾಲೆಯಾಗಿದೆ. ಇದೊಂದು ಸಿಬಿಎಸ್‌ಇ ಶಾಲೆಯಾಗಿದ್ದು 2000 ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ.

ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷ್ಣ ಕೃಷಿ ಸಂಶೋಧನೆ ಹಾಗೂ ತರಬೇತಿ ನಿರಂತವಾಗಿ ನೀಡುತ್ತಿದೆ. ಸ್ವಾಮಿ ವಿವೇಕಾನಂದ ಪಿ.ಯು. ಸೈನ್ಸ್ ಮಹಾವಿದ್ಯಾಲಯ ಹಾಗೂ ನರ್ಸಿಂಗ್ ತರಬೇತಿಯಲ್ಲಿ ಪದವಿ ಶಿಕ್ಷಣದ ವ್ಯವಸ್ಥೆ ಇದೆ. ಗದಗ ಪರಿಸರದ ಜನ ಶೈಕ್ಷಣಿಕವಾಗಿ ಸೌಲಭ್ಯ ವಂಚಿತರಾಗಬಾರದು ಹಾಗೂ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಮಂಚೂಣಿಯಲ್ಲಿರಬೇಕೆಂಬ ಆಶಯ ಈಡೇರಿಸುವಲ್ಲಿ ಮೇಲ್ಕಾಣಿಸಿದ ಸಹಕಾರ ಸಂಸ್ಥೆಗಳು ಶ್ರಮಿಸುತ್ತವೆ.

**ಶೋಷಣೆ ಮುಕ್ತ ಸಮಾಜ:** ನಮ್ಮ ರೈತ ಸಮುದಾಯ ಶೋಷಣೆಗೊಳಗಾಗುವುದು ಮುಖ್ಯವಾಗಿ ಎರಡು ಪ್ರಸಂಗಗಳಲ್ಲಿ. ಒಂದು ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವಾಗ ಹಾಗೂ ತಮಗೆ ಬೇಕಾದ ಸಾಮಾಗ್ರಿಗಳನ್ನು ಪೇಟೆಯಲ್ಲಿ ಕೊಳ್ಳುವಾಗ ಈ ಎರಡೂ ಪ್ರಸಂಗಗಳಲ್ಲಿ ರೈತರಿಗೆ ಆಗುವ ಶೋಷಣೆಯನ್ನು ಕನಿಷ್ಠಗೊಳಿಸಲು ಸಹಕಾರಿ ಸಂಸ್ಥೆಗಳು ಪ್ರಯತ್ನಶೀಲವಾಗಿವೆ.



ದಿ.ಗದಗ ಕೊ. ಆಫ್. ಕಾಟನ್ ಸೇಲ್ ಸೊಸೈಯಿಟಿ ಶೋಷಣೆಮುಕ್ತ ಸಮಾಜ ನಿರ್ಮಾಣಕ್ಕಾಗಿ ಸಮರ್ಪಿತನಾದ ಸಂಸ್ಥೆ ಈ ಸಂಸ್ಥೆ

1. ಪೆಟ್ರೋಲ್ ಡಿಸೇಲ್ ಪಂಪ್.
2. ಕೃಷಿ ಉಪಕರಣಗಳ ಮಾರಾಟ.
3. ರಾಸಾಯನಿಕ ಗೊಬ್ಬರ-ಕ್ರಿಮಿನಾಶಕ ಮಾರಾಟ.
4. ಬಿತ್ತನೆ ಬೀಜ.
5. ರೈತರ ಉತ್ಪಾದನೆಗಳ ಮಾರಾಟ ರೂಪಿಸಿ ಅನುಷ್ಠಾನಗೊಳಿಸಿದೆ.

**ಸಂಸ್ಕರಣ ಘಟಕಗಳು:** ರೈತರ ಉತ್ಪಾನೆಗಳಿಗೆ ಸೌಲ್ಯಾಭಿವೃದ್ಧಿ ಮಾಡಲು ಈ ಸಂಸ್ಥೆ ಪ್ರಯತ್ನಶೀಲವಾಗಿದೆ. ಅದಕ್ಕಾಗಿ ಹತ್ತಿಯಿಂದ-ಜಿನ್ನಿಂಗ್, ಪ್ರೆಸ್ಸಿಂಗ್, ಅರಳಿ ನೂಲಿನ ಗಿರಣಿಗಳು, ನಿರುಪಯುಕ್ತ ವಸ್ತುವಿನಿಂದ 1. ಸರ್ಜಿಕಲ್ ಕಾಟನ್ 2. ಕಾಗದ ತಯಾರಿಕೆ 3. ಕ್ಯಾಟಲ್ ಫಿಡ್ ಸಂಸ್ಥೆ.

**ದಾಲ್‌ಮಿಲ್:** ರೈತರ ತೋಟಗಾರಿಕೆ ಬೆಲೆ ಹೆಚ್ಚುವಂತೆ ಮಾಡಲು ದಾಲ್ ಮುಲ್ ಕೆಲಸ ನಿರ್ವಹಿಸುತ್ತಿದ್ದರೆ, ನೆಲಗಡಲೆ, ಸೂರ್ಯಪಾನ ಬೆಳೆಗಳಿಗೆ ಉತ್ತಮ ಬೆಲೆ ಬರುವಂತೆ ಮಾಡಲು ಬಿಂಕದಕಟ್ಟಿ ಕೊ.ಆ. ಆಯಿಲ್ಸ್ ಲಿ. ಸಂಸ್ಥೆ ಇದೆ. ಯಾವುದೇ ವಸ್ತು ಉತ್ಪಾದನೆಯಾದ ನಂತರ ಅಂತಿಮವಾಗಿ ಉಳಿಯುವ ವಸ್ತು ಉದಾ: ಎಣ್ಣೆ ತಯಾರಿಸಿದ ನಂತರ ದೊರೆಯುವ ಹಿಂಡಿ ಅದನ್ನು ದನದ ಆಹಾರ ಉತ್ಪಾದನ ಘಟಕದಲ್ಲಿ ಬಳಸಲಾಗುತ್ತಿದೆ. ನೂಲಿನ ಗಿರಣಿಗಳಲ್ಲಿ ದೊರೆಯುವ ಕೊನೆಯ ಉಳಿಕೆಯನ್ನು ಸರ್ಜಿಕಲ್ ಕಾಟನ್ ಘಟಕ ಅನಂತರ ಉಳಿದಿದ್ದು ಕಾಗದ ತಯಾರಿಕೆಗೆ ಬಳಸಲಾಗುತ್ತದೆ.

ತನ್ನ ಪರಿಸರದ ಜನರ ವಸತಿ ಅವಶ್ಯಕತೆ ಪೂರೈಸಲು ಹುಲಕೋಟಿ ಕೋ.ಆಫ್. ಹೌಸಿಂಗ್ ಸೊಸೈಟಿ; ರಾಧಾಕೃಷ್ಣ ಹೌಸಿಂಗ್ ಕೋ. ಆಫ್ ಸೇರಿ ಹಲವಾರು ಹೌಸಿಂಗ್ ಸೊಸೈಟಿಗಳು ಕೆಲಸ ನಿರ್ವಹಿಸುತ್ತವೆ. ರೈತ ತಾನು ಬೆಳೆದ ಮಾಲಿನ ಬೆಲೆ ತಾನೇ ಕಟ್ಟುವಂತಾಗಬೇಕು. ಇದು ಸಹಕಾರಿ ಬ್ರಹ್ಮರೆನಿಸಿದ ಕೆ.ಎಚ್.ಪಾಟೀಲರ ಗುರಿ, ಇದು ಅವರ ಆದರ್ಶ.

ರೈತ ಅನ್ನದಾತ ಅವನು ಶೋಷಣೆಯಿಂದ ಮುಕ್ತವಾಗಬೇಕು ಅದಕ್ಕಾಗಿ ಆತನನ್ನು ಮಧ್ಯವರ್ತಿಗಳ ಕಪಿಮುಷ್ಟಿಯಿಂದ ಮುಕ್ತಗೊಳಿಸಬೇಕೆಂಬುದೇ ಗದಗ ಪರಿಸರದ ಸಹಕಾರಿಗಳ ಬಯಕೆ. ರೈತರೇ ಸಂಘಟಿಸುವ, ತಾವೇ ಉತ್ಪಾದನೆಯನ್ನು ಸಂಸ್ಕರಿಸುವ ಘಟಕಗಳನ್ನು ಸ್ಥಾಪಿಸಿ ನೇರವಾಗಿ ಗ್ರಾಹಕರಿಗೆ ಅವು ಲಭ್ಯಗೊಳಿಸಬೇಕು. ಅಂದರೆ ರೈತನಿಗೆ ಹಾಗೂ ಗ್ರಾಹಕನಿಗೆ ನ್ಯಾಯವಾದ ಬೆಲೆಯಲ್ಲಿ ವಸ್ತುಗಳು ದೊರೆಯಬೇಕು. ರೈತ ಹಾಗೂ ಗ್ರಾಹಕರ ಮಧ್ಯ ದಲ್ಲಾಳಿಗಳಿರಬಾರದು. ರೈತ ಬೆಳೆದ ಪ್ರತಿಯೊಂದು ವಸ್ತು ಮೌಲ್ಯವರ್ಧಿಕವಾಗಿ ಗ್ರಾಹಕರಿಗೆ ದೊರತಾಗ ದೊರೆಯುವ ಲಾಭ ಮತ್ತೇ ರೈತರಿಗೆ ಹರಿದು ಬರಬೇಕು. ಈ ಲಾಭಾಂಶದ ಒಂದು ಭಾಗ ರೈತ ಹಿತಾರಕ್ಷಣೆ-ಯ ಸಂಸ್ಥೆಗಳಿಗೆ ದೊರೆಯಬೇಕು. ಈ ಹಣಕಾಸು ಬಲದಿಂದ ಅತ್ಯಂತ ಶ್ರೇಷ್ಠ ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಬೇಕು. ರೈತರ ಆರ್ಥಿಕ ಅಭಿವೃದ್ಧಿಯೊಂದಿಗೆ ಅವನ ಪರಿವಾರದ ಜ್ಞಾನದ ಕ್ಷಿತಿಜ ವಿಸ್ತರಿಸಲ್ಪಡಬೇಕು. ರೈತರ ಮಕ್ಕಳು ಸ್ಪರ್ಧಾತ್ಮಕ ಪ್ರಪಂಚದಲ್ಲಿ ಮುಂದೆ ಬರಬೇಕು ಅವರು ತಮ್ಮ ಜ್ಞಾನದ ಬಲದಿಂದ ಗಳಿಸುವ ಹಾಗೂ ಮತ್ತೇ ಗ್ರಾಮೀಣ ವಿಕಾಸ ಕೆಲಸಗಳಿಗೆ ಹರಿದು ಬರುವಂತಾಗಬೇಕು. ಅದೇ ಕಾಲಕ್ಕೆ ಗ್ರಾಮೀಣ ಭಾಗದ ಜನ ತಮ್ಮ ಆರೋಗ್ಯ ರಕ್ಷಣೆಗಾಗಿ ದೂರ ದೂರ ಪ್ರದೇಶಗಳಿಗೆ ಹೋಗಬಾರದು ಅವರಿಗೆ ಶ್ರೇಷ್ಠ ವೈದ್ಯಕೀಯ ಸೇವೆ ಅವರ ಸಮೀಪದಲ್ಲಿಯೇ ದೊರೆಯಬೇಕೆಂದು ಅದಕ್ಕಾಗಿ ರೂರಲ್ ಮೆಡಿಕಲ್ ಸರ್ವಿಸ್ ಸೊಸೈಟಿ ಹಾಗೂ ಅದರ ಅಂಗ ಸಂಸ್ಥೆ ಕೆ.ಎಚ್ ಪಾಟೀಲ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ವಿಜ್ಞಾನ ಸಂಸ್ಥೆ ಕೆಲಸ ಮಾಡುತ್ತಿವೆ.

ಒಬ್ಬ ದೂರದೃಷ್ಟಿ ನಾಯಕನ ಕನಸುಗಳಿವು, ಇವು ಗಾಳಿಯಲ್ಲಿ ಅವರು ತೇಲಿ ಬಿಟ್ಟಿಲ್ಲ ವಾಸ್ತವದಲ್ಲಿ ಕಟ್ಟಿ ಬೆಳೆಸಿದ್ದಾರೆ. ಕೆ.ಎಚ್. ಪಾಟೀಲರು ನಾಲ್ಕು ದಶಕಗಳ ಕಾಲ ನಿರಂತರ ಹೋರಾಟ ಅವಿಶ್ರಾಂತ ಪರಿಶ್ರಮದಿಂದ ಇದನ್ನೆಲ್ಲ ಸಾಧಿಸಿ ತೋರಿಸಿದ್ದಾರೆ. ಅದಕ್ಕಾಗಿಯೇ ಇಂದು ಗದಗ ಪರಿಸರ 'ಸಹಕಾರ ಕಾಶಿ' ಎಂದು ಹೆಸರಾಗಿದೆ.

ಇದೊಂದು ಸಹಕಾರಿ ಪ್ರಯೋಗ ಅದಕ್ಕಾಗಿ ಇಲ್ಲಿ ಕಟ್ಟಿರುವ ಸಂಸ್ಥೆಗಳೇ ಕಾರ್ಯಗಾರ ಸುಧಾರಣೆಗೆ ವಿಸ್ತರಣೆಗೆ, ಅವಕಾಶಗಳಿಗೆ ಮಿತಿ ಇಲ್ಲ. ಆ ಪಥಯಲ್ಲಿ ನಡೆಯುವ ಎದೆಗಾರಿಕೆ, ಛಲವಂತಿಕೆ ಹಾಗೂ ಸಹಕಾರಕ್ಕೆ ಸಮರ್ಪಣ ಭಾವಬೇಕಾಗಿದೆ.

**ಮುಂದೇನು?:** ಗದಗ ಜಿಲ್ಲೆಯಲ್ಲಿ ಪಟ್ಟಣ ಸಹಕಾರಿ ಬ್ಯಾಂಕಿಂಗ್ ಕ್ಷೇತ್ರ ವಿಸ್ತಾರಗೊಳ್ಳುತ್ತಿದೆ. ಅದರಲ್ಲಿಯೂ ವಿಶೇಷವಾಗಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಗಾತ್ರ ಹಾಗೂ ಪಾತ್ರದಲ್ಲಿ ಬೆಳೆಯುತ್ತಿವೆ. ಇದರ ಜೊತೆಗೆ ನೌಕರದಾರರ ಸಹಕಾರಿ ಸಂಘಗಳು ಆರೋಗ್ಯಶಾಲಿಯಾಗಿ ಬೆಳೆದಿವೆ. ಈ ಎರಡೂ ಕ್ಷೇತ್ರಗಳು ಬೆಳೆಯಲು ವಿಫುಲ ಅವಕಾಶಗಳನ್ನು ಹೊಂದಿವೆ.


ಮಾರಾಟ ಕ್ಷೇತ್ರದಲ್ಲಿ ಬೆಳೆಯಲು ಸಾಕಷ್ಟು ಅವಕಾಶಗಳಿವೆ. ಅದರಲ್ಲಿಯೂ ವಿಶೇಷವಾಗಿ ಗೋದಾಮುಗಳ ನಿರ್ಮಾಣ ವಿಸ್ತಾರಗೊಳ್ಳಬೇಕಾಗಿದೆ. ಜೊತೆಗೆ ಗ್ರಾಮೀನ ಭಾಗದಲ್ಲಿ ಸ್ವಸಹಾಯ ಗುಂಪುಗಳು ಹೆಚ್ಚುತ್ತಿವೆ. ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ಪ್ರಬಲ ಸಾಧನವಾಗಿರುವ ಸ್ವಸಹಾಯ ಸಂಘಗಳು ಜಿಲ್ಲೆಯಲ್ಲಿ ಹಾಲು ಉತ್ಪಾದಕ ಸಹಕಾರ ಸಂಘಗಳು ಭರದಿಂದ ಬೆಳೆಯುತ್ತಿವೆ. 227 ಹಾಲು ಉತ್ಪಾದಕ ಸಹಕಾರಿ ಸಂಘಗಳಿವೆ. ಜೊತೆಗೆ ಹಾಲು ಉತ್ಪಾದಕರ ಯೂನಿಯನ್ ಪ್ರಭಾವಶಾಲಿಯಾಗುತ್ತಿದ್ದು. ಈ ಕ್ಷೇತ್ರದಲ್ಲಿ ಬೆಳವಣಿಗೆಗೆ ವಿಫುಲ ಅವಕಾಶಗಳಿವೆ. ನೇಕಾರಿಕೆ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳು ಮೊದಲಿದಷ್ಟು ಸಕ್ರೀಯವಾಗಿಲ್ಲದಿರುವುದು ಗಮನಾರ್ಹ.

ಸಹಕಾರ ಚಳುವಳಿ ಸ್ವತಂತ್ರ ಸ್ವಾಯತ್ತ ಸ್ವಾಭಿಮಾನ ಚಳುವಳಿಯಾಗಿ ಬೆಳೆಯಲು ಸಾಧ್ಯವಾಗಿಲ್ಲ. ರಾಜಕೀಯ ಹಸ್ತಕ್ಷೇಪದಿಂದಾಗಿ ಸಹಕಾರಿ ಚಳುವಳಿ ಸೊರಗಿದೆ. ಇದಕ್ಕೆ ಗದಗ ಜಿಲ್ಲೆಯೂ ಹೊರತಾಗಿಲ್ಲ. ದುರ್ಬಲ ವರ್ಗಕ್ಕೆ ಮೀಸಲಾಗಿದ್ದ ಸಹಕಾರಿ ಕ್ಷೇತ್ರವನ್ನು ಆರ್ಥಿಕವಾಗಿ ಸಬಲವಾಗಿರುವ ಸಂಸ್ಥೆಗಳೊಂದಿಗೆ ಸ್ಪರ್ಧಿಸುವಂತೆ ಮಾಡಿರುವುದು ಹಿನ್ನಡೆಗೊಂದು ಕಾರಣವಾಗಿದೆ. ಧ್ವನಿ ಇಲ್ಲದ ವರ್ಗಗಳಿಗೆ ಸಹಕಾರಿ ಸಂಸ್ಥೆಗಳ ನಿರ್ವಹಣೆಯಲ್ಲಿ ಪಾಲ್ಗೊಳ್ಳುವಿಕೆ ನಗಣ್ಯವಾಗಿದೆ. ಆರ್ಥಿಕ ಸ್ವಾತಂತ್ರ್ಯವೇ ಸಹಕಾರದ ಹೆಬ್ಬಾಗಿಲು ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹೇಳಿದರು. ಬಂಡವಾಳಶಾಹಿ ಹಾಗೂ ಸಮತಾವಾದದ ನಡುವಿನ ಸುವರ್ಣಮಾಧ್ಯಮ ಎಂದು ದೇಶದ ಪ್ರಥಮ ಪ್ರಧಾನಿ ನೆಹರು ಬಣ್ಣಿಸಿದರು. ಜಿಲ್ಲೆಯಲ್ಲಿ ಕೆಲದಶಕಗಳ ಹಿಂದೆ ಬೆಳೆದಂತೆ ಸಹಕಾರ ಚಳುಚಳಿ ಬೆಳೆಯುತ್ತಿಲ್ಲ. ಉತ್ಪಾದಕರೇ ಸಂಘಟಿಸಿ ನಡೆಸುವ ಸಂಸ್ಕರಣ ಘಟಕಗಳ ಸಂಖ್ಯೆ ಹೆಚ್ಚಾಗಬೇಕು. ಅವು ಲಾಭದಾಯಕವಾಗಿ, ಉತ್ಪಾದಕನಿಗೆ ಅದರಲ್ಲಿ ಲಾಭದ ಪಾಲು ದೊರೆಯಬೇಕು ಜೊತೆಗೆ ಉತ್ಪಾದಕರ ಸರ್ವಾಂಗೀಯ ಅಭಿವೃದ್ಧಿಗೆ ಕಾರಣವಾಗುವ ಸಂಸ್ಥೆಗಳ ಬೆಳವಣಿಗೆಗೆ ಇವು ನೆರವಾಗಬೇಕು. ಅಂದಾಗ ಸಮಾಜದ ಆರೋಗ್ಯಶಾಲಿ ಬೆಳವಣಿಗೆಗೆ ಸಹಕಾರ ನೆರವಾಗುವುದು. ಇಂದು ಕೇಂದ್ರ ಸರಕಾರದಲ್ಲಿ ಸಹಕಾರ ಇಲಾಖೆಗೆ ಹೆಚ್ಚಿನ ಮಹತ್ವ ದೊ-ರೆತಿದೆ ಕೇವಲ ರಾಷ್ಟ್ರಮಟ್ಟದ ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ನೆರವು ಹರಿದು ಬರಬೇಕು. ಆಗ 'ಸಹಕಾರಿ ಕಾಶಿ' ಗದಗದಲ್ಲಿ ನಡೆದಂತಹ ಸಹಕಾರಿ ಕ್ರಾಂತಿ ಮರುಹುಟ್ಟು ನಡೆಯುವುದರಲ್ಲಿ ಯಾವ ಸಂದೇಹವಿಲ್ಲ.

– ಶ್ರೀ ಜಗನ್ನಾಥ ಜಮಾದಾರ.
ನಿಲಯ ನಿರ್ದೇಶಕರು,
ಸಹಕಾರ ರೇಡಿಯೋ–ಗದಗ.

# ಗದಗ ಜಿಲ್ಲೆಯ ಕವಿ ಮತ್ತು ಸಾಹಿತಿಗಳು

**01. ಒಂದನೆಯ ನಾಗವರ್ಮ**



ಒಂದನೆಯ ನಾಗವರ್ಮ ಪಂಪಯುಗದ ಮಹತ್ವದ ಕವಿ. ಈತನ ಕಾಲ ಕ್ರಿ.ಶ. ಸುಮಾರು 990. ಈತ ಸಯ್ಯಡಿಯವನೆಂದೂ ಈತನ ಪೂರ್ವಿಕರು ವೆಂಗಿಯ ವೈದಿಕ ಬ್ರಾಹ್ಮಣರೆಂದೂ ಈತ ಯುದ್ಧವೀರನಾಗಿದ್ದನೆಂದೂ ಛಂದೋಂಬುಧಿ ಕೃತಿಯಿಂದ ತಿಳಿದುಬರುವ ಅಂಶಗಳಾಗಿವೆ.

ಛಂದೋಬುಧಿ ಮತ್ತು ಕರ್ಣಾಟಕ ಕಾದಂಬರಿ ನಾಗವರ್ಮನ ಎರಡು ಕೃತಿಗಳು. ಇವುಗಳಲ್ಲಿ ಮೊದಲನೆಯದು ಶಾಸ್ತ್ರಗ್ರಂಥ, ಎರಡನೆಯದು ಚಂಪೂಕಾವ್ಯ. 'ಛಂದೋಂಬುಧಿ' ಕನ್ನಡದಲ್ಲಿ ಉಪಲಬ್ಧವಿರುವ ಪ್ರಥಮ ಛಂದಶ್ಶಾಸ್ತ್ರ ಕೃತಿ. ಕಾಲದ ದೃಷ್ಟಿಯಿಂದ ಮಾತ್ರವಲ್ಲ, ಮಹತ್ವದ ದೃಷ್ಟಿಯಿಂದಲೂ ಇದು ಆದಿಗ್ರಂಥ. ಈ ಗ್ರಂಥದಲ್ಲಿ ಕವಿ ಸಂಸ್ಕೃತ, ಪ್ರಾಕೃತ, ಕನ್ನಡ ಛಂದಸ್ಸುಗಳನ್ನು ನಿರೂಪಿಸಿದ್ದಾನೆ.

**02. ಶಾಸನಕವಿ ಮಲ್ಲ**

ಗದುಗಿನ ಸ್ಥಳ ಪುರಾಣವನ್ನು ಹೇಳುವ ಕೃತಪುರ ಮಹಾತ್ಮೆಯು ಭವಿಷ್ಯೋತ್ತರ ಪುರಾಣದ ಒಂದು ಭಾಗ. ಈ ಪುರಾಣವು 9–10ನೆಯ ಶತಮಾನದಲ್ಲಿ ಶಾಸನಕವಿ ಮಲ್ಲ ಎಂಬುವನು ರಚಿಸಿದ್ದಾನೆ. ಇವನು ಗದಗ ಜಿಲ್ಲೆಯ ಚಿಕ್ಕಹಂದಿಗೋಳದವನು. ಪ್ರಾಚೀನ ಕಾಲದಲ್ಲಿ ಶೈವರು ಮತ್ತು ವೈಷ್ಣವರ ಮಧ್ಯ ಇದ್ದ ದ್ವೇಷವನ್ನು ಕಡಿಮೆ ಮಾಡಲು ಈ ಕಾವ್ಯ ರಚಿತವಾಗಿದೆ. ಜನಮೇಜಯ ಅರಸನು ತೀರ್ಥಯಾತ್ರೆಯಿಂದ ಕೃತಪುರಕ್ಕೆ ಬಂದನು. ವೀರನಾರಾಯಣನ ಸಮೀಪದಲ್ಲಿ ತಾನು ಮಾಡಿದ ಸರ್ಪಯಾಗದ ಪಾಪವನ್ನು ಶಮನಗೊಳಿಸಲು ವೈಶಂಪಾಯನನಿಂದ ಮಹಾಭಾರತವನ್ನು ಕೇಳಿದ ಕಥೆ ಇಲ್ಲಿ ಬರುತ್ತದೆ.

**03. ದುರ್ಗಸಿಂಹ**



ಶಿಷ್ಟರ ಸಮೂಹಕ್ಕೆ ದೋಣಿಯೆಂದು ಕರೆದುಕೊಳ್ಳುವ ದುರ್ಗಸಿಂಹನು ಸು. 1145 ಈತನ ಕಾಲ. ಕನ್ನಡದಲ್ಲಿ ಪಂಚತಂತ್ರ ಕೃತಿಯನ್ನು ಬರೆದವನು. ದುರ್ಗಸಿಂಹನು ತನ್ನ ಗ್ರಂಥದ ಆದಿಭಾಗದಲ್ಲಿ ಸುಮಾರು 62 ಪದ್ಯಗಳಲ್ಲಿ ತನ್ನ ಕುರಿತಾದ ವಿವರಣೆಗಳನ್ನು ನಿವೇದಿಸಿಕೊಳ್ಳುತ್ತಾನೆ. ಸಯ್ಯಡಿ ಇಂದಿನ (ಗದಗ ಜಿಲ್ಲೆಯ ರೋಣ ತಾಲೂಕಿನ ಸವಡಿ) ಎನ್ನುತ್ತಾನೆ. ತಂದೆ ಈಶ್ವರಾಚಾರ್ಯ, ತಾಯಿ ರೇವಾಂಬಿಕೆ. ಗುರು ಮಹಾಯೋಗಿ ಶಂಕರಭಟ್ಟ. ತನ್ನ ಚಕ್ರವರ್ತಿಯ ಆಣತಿಯಂತೆ ತಾನು ಸೈಯಡಿಯಲ್ಲಿ ಹರಿಹರಭವನಗಳನ್ನು ಕಟ್ಟಿಸಿರುವುದಾಗಿಯೂ ತಿಳಿಸಿದ್ದಾನೆ. ಸಾಹಿತ್ಯದ ಮೂಲಕ ಕನ್ನಡದಲ್ಲಿ ರಾಜತಂತ್ರವನ್ನೂ ವ್ಯವಹಾರ ನೀತಿಯನ್ನೂ ಬೋಧಿಸಲು ಹೊರಟ ಕವಿಗಳಲ್ಲಿ ದುರ್ಗಸಿಂಹ ಮೊದಲಿಗ ಎನ್ನಬಹುದು.

**04. ನಯಸೇನ**



ಸಂಸ್ಕೃತದ ದೀರ್ಘ ಪ್ರಭಾವ ಹೊಂದಿದ್ದ ಕ್ರಿ.ಶ. 1112ರ ಸಂದರ್ಭದಲ್ಲಿ ಶುದ್ಧಕನ್ನಡದ ಬಳಕೆಯ ಕುರಿತಾಗಿ ಮಾತನಾಡುವ ನಯಸೇನನು ಗದಗ ಜಿಲ್ಲೆಯ ಮುಳುಗುಂದದಲ್ಲಿ ಜೈನ ಸನ್ಯಾಸಿಯಾಗಿ ಬದುಕಿದವನು. ಈತನ ವೈಯಕ್ತಿಕ ವಿವರಗಳು ಹೆಚ್ಚು ಲಭ್ಯವಿಲ್ಲ. ಧರ್ಮಾಮೃತವೆಂಬ ಚಂಪೂ ಕಾವ್ಯ ಈತ ರಚಿಸಿದ. ಈತನೇ ಬರೆದಿರಬಹುದಾದ ವ್ಯಾಕರಣ ಗ್ರಂಥವೊಂದು ಉಪಲಬ್ಧವಿಲ್ಲ. ಪಂಪ, ರನ್ನ ಮುಂತಾದ ಕವಿಗಳ ಮಾರ್ಗದರ್ಶನದಲ್ಲಿ ನಡೆದ ನಯಸೇನ ಮುಂದೆ ಜನ್ನನಂಥ ಸಮರ್ಥ ಕವಿಗಳ ಮೇಲೆ ಪ್ರಭಾವವನ್ನು ಬೀರಿದ್ದಾನೆ ಎಂಬುದು ಈತನ ಹಿರಿಮೆಯಾಗಿದೆ.

**05. ಚಾಮರಸ**

ನಡುಗನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬನಾದ ಚಾಮರಸ ಕ್ರಿ.ಶ. 1430ರ ಸಂದರ್ಭದಲ್ಲಿ ಗದಗ ಜಿಲ್ಲೆಯ ಗದಗ ತಾಲ್ಲೂಕಿನ ನಾರಾಯಣಪುರದಲ್ಲಿ ಬದುಕಿದ್ದವನು. ವಿಜಯನಗರ ಸಾಮ್ರಾಜ್ಯದ ಕೇಂದ್ರವಾದ ಹಂಪಿಯ ಪ್ರೌಢದೇವರಾಯನ ಆಸ್ಥಾನದಲ್ಲಿ ತನ್ನ ಜೀವನದ ಬಹುಪಾಲು ಕಾಲವನ್ನು ವೀರಶೈವ ಧರ್ಮದ ಅನುಯಾಯಿಯಾಗಿ ಕಳೆದನು. ಹನ್ನೆರಡನೆಯ ಶತಮಾನದ ಸಂತ–ಅನುಭಾವಿ–ಕವಿಯಾದ ಅಲ್ಲಮಪ್ರಭುವಿನ ಜೀವನ ಮತ್ತು ಸಾಧನೆಗಳನ್ನು ದ್ರವಾಗಿಟ್ಟುಕೊಂಡು, 'ಪ್ರಭುಲಿಂಗಲೀಲೆ'ಯೆಂಬ ಕಾವ್ಯವನ್ನು ರಚಿಸಿದ್ದಾನೆ. ಕವಿ ಕುಮಾರವ್ಯಾಸನ ಸಮಕಾಲೀನನಾಗಿದ್ದನು. ಇವರ ಪ್ರಭುಲಿಂಗಲೀಲೆ ಸಂಸ್ಕೃತ, ತಮಿಳು, ತೆಲುಗು ಹಾಗೂ ಮರಾಠಿ ಭಾಷೆಗಳಿಗೆ ಪರಿವರ್ತನ ಹೊಂದಿದ ಕೀರ್ತಿ ಪಡೆದ ಏಕಮಾತ್ರ ಕನ್ನಡ ಕಾವ್ಯವಾಗಿದೆ.

**06. ಕುಮಾರವ್ಯಾಸ**



ಹುಟ್ಟೂರು ಕೋಳಿವಾಡವಾದರೂ ವೀರನಾರಾಯಣನನ್ನು ಆರಾಧಿಸುತ್ತ ಗದುಗಿನಲ್ಲಿಯೇ ಬಾಳಿ ಬದುಕಿದವನು ಕುಮಾರವ್ಯಾಸ. ಈತನ ಕಾಲದ ಬಗ್ಗೆ ಗೊಂದಲಗಳಿದ್ದರೂ ಕವಿಚರಿತಾಕಾರರು ಲಭ್ಯವಾದ ಆಕರಗಳ ಹಿನ್ನೆಲೆಯಿಂದ ಕ್ರಿ.ಶ. 1350–1400 ಎಂದು ಗುರುತಿಸುತ್ತಾರೆ. ನಾರಣಪ್ಪ ಎಂಬುದು ಅವನಿಗಿದ್ದ ಮೊದಲ ಹೆಸರು. ವ್ಯಾಸ ಮಹಾಕವಿಯ ಮಾನಸಪುತ್ರ ತಾನೆನ್ನುವ ವಿನೀತ ಭಾವದಿಂದ ನಾರಣಪ್ಪನು ಕುಮಾರ ವ್ಯಾಸನೆಂದು ನಾಮಾಂಕಿತಗೊಂಡನು. ಗದುಗಿನ ವೀರ ನಾರಾಯಣ ಸ್ವಾಮಿಯ ಭಕ್ತಾಗ್ರಣಿಯಾಗಿ ಗದುಗಿನಲ್ಲಿಯೇ ನೆಲಸಿ ವೀರನಾರಾಯಣನ ಉತ್ಸವಾದಿ ಸೇವೆಯನ್ನು ವಿಜೃಂಭಣೆಯಿಂದ ಮಾಡುತ್ತಿದ್ದನು.ಭಾಮಿನಿ ಷಟ್ಪದಿಯ ಅತ್ಯುನ್ನತ ಶಿಖರ ಕುಮಾರವ್ಯಾಸ.

**07. ಶ್ರೀಧರಾಚಾರ್ಯ**

ಸಂದಿಗ್ಧತೆಯಿಲ್ಲದೆ ಲಾಲಿತ್ಯವಾಗಿ ಶಾಸನ ವಿಷಯವನ್ನು ಪ್ರತಿಪಾದಿಸುವ ಕವಿತಾ ಸಾಮರ್ಥ್ಯ ಹೊಂದಿದ್ದ ಶ್ರೀಧರಾಚಾರ್ಯನ ಕಾಲ ಕ್ರಿ.ಶ.ಸು 1049. ಈತನು ಚಾಲುಕ್ಯ ಆಹವಮಲ್ಲ ಮೊದಲನೇ ಸೋಮೇಶ್ವರನ ಆಸ್ಥಾನದಲ್ಲಿದ್ದನು.ಈತನು ಕನ್ನಡದ ಮೊದಲ ಜ್ಯೋತಿಷ್ಯ ಶಾಸ್ತ್ರ ಗ್ರಂಥವೆಂದು ಭಾವಿಸಲಾಗಿರುವ ಜಾತಕ ತಿಲಕವನ್ನು ಬರೆದ್ದಿದ್ದಾನೆ. ಇದಲ್ಲದೆ ಈತನು 'ಚಂದ್ರಪ್ರಭ ಪುರಾಣ' ಎಂಬ ಕೃತಿಯನ್ನು ರಚಿಸಿದ್ದು ಅದು ಉಪಲಬ್ಧವಾಗಿಲ್ಲ.ಜಾತಕ ತಿಲಕ ಗ್ರಂಥದಲ್ಲಿ ಶ್ರೀಧರಾಚಾರ್ಯನು ಶಬ್ದ ಸೌಂದರ್ಯ ಪ್ರಸಾದ ಗುಣಗಳಿಂದ ಶಾಸ್ತ್ರವನ್ನು ಕಾವ್ಯದಂತೆ ಹೇಳಿದ್ದಾನೆ. ಇದು ಕಂದ ಮತ್ತು ವೃತ್ತಗಳಿಂದ ಕೂಡಿದೆ.


**08. ಆದಯ್ಯ**



ಆದಯ್ಯ 11ನೇ ಶತಮಾನದ ಉತ್ತರಾರ್ಧ ಮತ್ತು 12ನೇ ಶತಮಾನದಲ್ಲಿದ್ದ ಸೌರಾಷ್ಟ ಪ್ರಾಂತ್ಯದಲ್ಲಿದ್ದ ಹಿರಿಯ ಶಿವಶರಣ. ಜೇಡರದಾಸಿಮಯ್ಯ ಮತ್ತು ಗುರುಬಸವಣ್ಣನವರ ಸಮಕಾಲೀನ. ಈತನ ವಚನಗಳಲ್ಲಿ ಅಂದು ಪ್ರಚಲಿತ–ಅಪ್ರಚಲಿತರಾಗಿದ್ದ ವಚನಕಾರರೆಲ್ಲ ಹೆಸರು ಉಲ್ಲೇಖಗೊಂಡಿರುವುದು ವಿಶೇಷ. ಈತನ ವಚನಗಳ ಅಂಕಿತ ಸೌರಾಷ್ಟ್ರ ಸೋಮೇಶ್ವರ


ಗುಜರಾತಿನ ದ್ವಾರಕಾನಗರದಲ್ಲಿ ಘೋರದತ್ತ ಮತ್ತು ಪುಣ್ಯವತಿಯರ ಮಗನಾಗಿ ಹುಟ್ಟಿದರೂ ಯೌವ್ವನದಲ್ಲಿ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಕರ್ನಾಟಕದ ಜೈನ ನಗರಿಯಾದ ಪುಲಿಗೆರೆ ಅಥವಾ ಈಗಿನ ಗದಗ ಜಿಲ್ಲೆಯ ಲಕ್ಷ್ಮೇಶ್ವರಕ್ಕೆ ಬಂದು ಅಲ್ಲಿನ ಜೈನಧರ್ಮಾವಲಂಬಿಯಾದ ಪಾರಿಶೆಟ್ಟಿಯ ಏಕೈಕ ಪುತ್ರಿ ಪದ್ಮಾವತಿಯನ್ನು ಮದುವೆಯಾಗಿ ಅಲ್ಲಿಯೇ ನೆಲೆಯೂರಿದನು. ಸೌರಾಷ್ಟ್ರದ ಸೋಮನಾಥನನ್ನು ಪುಲಿಗೆರೆಯ ಸುರಹೊನ್ನೆ ಬಸದಿಯಲ್ಲಿ ಪ್ರತಿಷ್ಠಾಪಿಸಿದನು.

**09. ಬಾಲಲೀಲಾ ಮಹಾಂತ ಶಿವಯೋಗಿಗಳು**



ಬಾಲಲೀಲಾ ಮಹಾಂತ ಶಿವಯೋಗಿಗಳು ಕ್ರಿ.ಶ 1823–59ರ ಕಾಲಾವಧಿಯಲ್ಲಿ ಜೀವಿಸಿದವರು. ಇವರ ಜನನ, ಬಾಲ್ಯಗಳ ಬಗೆಗೆ ಖಚಿತವಾಗಿ ತಿಳಿದುಬರುವುದಿಲ್ಲ. ಇವರ ಮೂಲ ಊರು ಬಿಜಾಪುರ ಜಿಲ್ಲೆಯ ಎರಿನಾಳ ಗ್ರಾಮವೆಂದು ನಂಬಲಾಗಿದೆ. ಅವರ ಬದುಕಿನ ಬಹುಪಾಲು ಆಯುಷ್ಯವನ್ನು ತಮ್ಮ ಗುರು ಮಹಾಂತದೇಶಿಕರ ಸಾನಿಧ್ಯದಲ್ಲಿ ಗದಗ ಜಿಲ್ಲೆಯ ಮುಳಗುಂದದಲ್ಲಿ ಕಳೆದರು. ಇವರ ಜನನಿ ಮತ್ತು ಜನಕರು ಅಯ್ಯಮ್ಮ ಹಾಗೂ ಪರ್ವತಯ್ಯ. ಶಿವಯೋಗಿಗಳು ಚಿಕ್ಕವರಿದ್ದಾಗಲೇ ತಂದೆತಾಯಿಗಳನ್ನು ಕಳೆದುಕೊಂಡು ದೊಡ್ಡಮ್ಮನಾದ ಅಣ್ಣವ್ವೆಯ ಲಾಲನೆ ಪಾಲನೆಯಲ್ಲಿ ಬೆಳೆದರು.


**10. ಆಲೂರು ವೆಂಕಟರಾಯರು**



ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರು 1880ರ ಜುಲೈ 12ರಂದು ಬಿಜಾಪುರದಲ್ಲಿ ಜನಿಸಿದರೂ ಇವರ ವಂಶಜರು ಮುಂದೆ ಈಗಿನ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹೊಳೆಆಲೂರಿಗೆ ಬಂದು ನೆಲೆಸಿದ್ದರಿಂದ ಭಾಲ್ಯದ ಬಹುಕಾಲ ಅಲ್ಲಿಯೇ ಕಳೆದರು. ತಂದೆ ಭೀಮರಾಯರು ಶಿರಸ್ತೇದಾರರು, ತಾಯಿ ಭಾಗೀರಥಿಬಾಯಿ.

ಹರಿದು ಹಂಚಿಹೋಗಿದ್ದ ಕರ್ನಾಟಕವನ್ನು ಒಗ್ಗೂಡಿಸಿ, ಕನ್ನಡಿಗರನ್ನು ಜಾಗೃತಗೊಳಿಸಿ ಭವ್ಯ ಕರ್ನಾಟಕದ ಕನಸ್ಸನ್ನು ಕಂಡು ಸಾಕಾರಗೊಳಿಸುವಲ್ಲಿ ಆಲೂರರ ಪಾತ್ರ ಮಹತ್ವದ್ದು. ಕರ್ನಾಟಕ ಏಕೀಕರಣಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ವೆಂಕಟರಾಯರು ಕನ್ನಡ ಕುಲದ ಪುರೋಹಿತರೇ ಹೌದು. ಆಲೂರರು 1964ರ ಫೆಬ್ರವರಿ 25ರಂದು ನಿಧನರಾದರು.

**11. ಹುಯಿಲಗೋಳ ನಾರಾಯಣರಾಯರು**



ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆಯನ್ನು ಕೇಳದ ಕನ್ನಡಿಗರೇ ಇಲ್ಲ. ಈ ಹಾಡಿನ ಕರ್ತೃ ಹುಯಿಲಗೋಳ ನಾರಾಯಣರಾಯರು. ನಾರಾಯಣರಾಯರು 1884ರ ಅಕ್ಟೋಬರ್ 4ರಂದು ಗದಗದಲ್ಲಿ ಜನಿಸಿದರು. ತಂದೆ ಹುಯಿಲಗೋಳ ಕೃಷ್ಣರಾಯರು. ತಾಯಿ ಬಹೆಣಕ್ಕ. ನಾರಾಯಣ–ರಾಯರು. ಹುಯಿಲಗೋಳ ನಾರಾಯಣರು ರಚಿಸಿದ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆ ಕರ್ನಾಟಕ ರಾಜ್ಯದ ನಾಡಗೀತೆಯೆಂದು ಖ್ಯಾತಿ ಪಡೆದಿತ್ತು.

ಈ ಗೀತೆಯನ್ನು ಬೆಳಗಾವಿಯಲ್ಲಿ ಜರುಗಿದ, 1924ರ ಕಾಂಗ್ರೆಸ್ ಅಧಿವೇಶನದಲ್ಲಿ ಹಾಡಲಾಗಿತ್ತು. ಮಹಾತ್ಮ ಗಾಂಧಿಯವರು ಈ ಅಧಿವೇಶನದ ಅಧ್ಯಕ್ಷರಾಗಿದ್ದರು. ಇಂದೂ ಕೂಡ ಈ ಹಾಡು ಕನ್ನಡಿಗರ ಹೃದಯದಲ್ಲಿ ನೆಲೆ ನಿಂತಿದೆ.


**12. ಶಾಂತಕವಿಗಳು**



ಆಧುನಿಕ ಕನ್ನಡದ ಪ್ರಥಮ ನಾಟಕಕಾರ, ಕೀರ್ತನಕಾರರೆಂದು ಮಾನ್ಯರಾದ ಶಾಂತಕವಿಗಳ ನಿಜನಾಮ ಸಕ್ಕರಿ ಬಾಳಾಚಾರ್ಯ. ತಮ್ಮ ಮನೆತನದ ದೇವರು ಶಾಂತೇಶ ಎಂಬುದನ್ನೇ ಕಾವ್ಯನಾಮ ಮಾಡಿಕೊಂಡು ಶಾಂತಕವಿ ಆದರು.


ಅಂದು ಕೃತುಪುರವೆನಿಸಿದ್ದ ಗದಗದಲ್ಲಿ ಕನ್ನಡ ಉದ್ಧಾರಕ್ಕಾಗಿ ಕನ್ನಡ ನಾಟಕದ ಏಳ್ಗೆಗಾಗಿ ಕರ್ನಾಟಕ ಕಂಪನಿಯನ್ನು ಕಟ್ಟುವ, ಕನ್ನಡ ನಾಟಕಗಳನ್ನು ಬರೆದುಕೊಡುವ ನಾಟಕವನ್ನು ಕಲಿಸಿಕೊಡುವ ಕೆಲಸ ಇವರಿಂದ ಆರಂಭವಾಯಿತು. ಈ ನಿಟ್ಟಿನಲ್ಲಿ ಅವರು ರಚಿಸಿದ ಮೊದಲ ನಾಟಕ 'ಉಷಾಹರಣ'. ಈ ಕಾರಣ–ಕ್ಕಾಗಿ ಇಂದಿಗೂ ಶಾಂತಕವಿಗಳು ಕರ್ನಾಟಕ ನಾಟಕದ ಪ್ರಥಮ ಗುರುವೆಂದು ಗೌರವಿಸಲ್ಪಡುತ್ತಾರೆ.

**13. ಗರುಡ ಸದಾಶಿವರಾಯರು**



ಗರುಡ ಸದಾಶಿವರಾಯರು ಕ್ರಿ.ಶ.1880ರಲ್ಲಿ ಗದಗದಲ್ಲಿ ಜನಿಸಿದರು. ಇವರ ತಂದೆ ಗುರುನಾಥ ಶಾಸ್ತ್ರಿ. ಗರುಡ ಸದಾಶಿವರಾಯರು 'ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಳಿ'ಯನ್ನು ಕಟ್ಟಿ, ಕರ್ನಾಟಕದ ಉದ್ದಗಲಕ್ಕೂ ಸಹಸ್ರಾರು ಪ್ರದರ್ಶನಗಳನ್ನು ನೀಡಿದರು. ಲೋಕಮಾನ್ಯ ತಿಲಕರ ರಾಷ್ಟ್ರೀಯ ಹೋರಾಟಕ್ಕೆ ಸಂಬಂಧಿಸಿದ 'ಬಂಧವಿಮೋಚನೆ' ನಾಟಕದಿಂದ ರಂಗಪ್ರವೇಶ ಮಾಡಿದ ಗರುಡರು 50ಕ್ಕೂ ಹೆಚ್ಚು ವರ್ಷಗಳನ್ನು ರಂಗಭೂಮಿಯ ಮೇಲೆ ಕಳೆದಿದ್ದಾರೆ. ಸುಮಾರು 50 ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಹಾಗು ರಾಷ್ಟ್ರೀಯ ನಾಟಕಗಳನ್ನು ಬರೆದು ಪ್ರಯೋಗಿಸಿದ್ದಾರೆ. ಇವರ 'ಪಾದುಕಾ ಪಟ್ಟಾಭಿಷೇಕ' ರಂಗಭೂಮಿಯ ಇತಿಹಾಸದಲ್ಲಿಯೇ ಮಹತ್ವದ ನಾಟಕ.

**14. ಜಿ.ಬಿ.ಜೋಶಿ (ಜಡಭರತ)**



ಗೋವಿಂದ ಭೀಮಾಚಾರ್ಯ ಜೋಶಿಯವರು ಗದಗ ಜಿಲ್ಲೆಯ ಹೊಂಬಳದಲ್ಲಿ 1904 ರಲ್ಲಿ ಜನಿಸಿದರು. ಧಾರವಾಡದಲ್ಲಿ ದ.ರಾ ಬೇಂದ್ರೆಯವರ ನೇತೃತ್ವದಲ್ಲಿ ಸ್ಥಾಪಿತವಾಗಿದ್ದ ಗೆಳೆಯರ ಗುಂಪಿನ ಸದಸ್ಯರೂ ಆಗಿದ್ದ ಜಡಭರತರು ಕವನ, ಕಾದಂಬರಿ, ಸ್ವಪ್ನಕಥನ, ನಾಟಕ ಕೃತಿಗಳನ್ನೂ ರಚಿಸಿದ್ದಾರೆ. ಮುಖ್ಯವಾಗಿ ಅವರ ಜೀವಫಲ ಕವನಸಂಕಲನದಲ್ಲಿ ಭಾವುಕತೆಯೇ ಪ್ರಧಾನವಾಗಿರುವುದನ್ನು ಗಮನಿಸಬಹುದು. ದೈವಕೃಪೆಯ ಬಗ್ಗೆ ದೈನ್ಯ ಭಾವದ ಯಾಚನೆ, ತಾಯಿ ಪ್ರೀತಿಯ ಧಾರೆ, ಸ್ನೇಹ ನೀಡುವ ಚೈತನ್ಯ, ಬಾಳಿನ ಆಸೆ ನಿರಾಸೆಗಳು ಇಲ್ಲಿನ ಕವನಗಳ ಬಹು ಮುಖ್ಯ ವಸ್ತುವಾಗಿವೆ.

**15. ಮೇವುಂಡಿ ಮಲ್ಲಾರಿ**



ಮೂಕ ಕವಿ ಎಂದೇ ಕರೆಯಲ್ಪಡುತ್ತಿದ್ದ ಮಿತ ಭಾಷಿ ಮೇವುಂಡಿ ಮಲ್ಲಾರಿಯವರು ಹುಟ್ಟಿದ್ದು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಮೇವುಂಡಿ ಗ್ರಾಮದಲ್ಲಿ. ತಂದೆ ನೀಲಕಂಠ ಭಟ್ಟರು, ತಾಯಿ ಲಕ್ಷ್ಮೀಬಾಯಿ. ತಂದೆ ತಾಯಿಗಳಿಬ್ಬರನ್ನೂ ಬಾಲ್ಯದಲ್ಲೇ ಕಳೆದುಕೊಂಡದ್ದರಿಂದ ವಿದ್ಯಾರ್ಜನೆಗೆ ಧಕ್ಕೆ. ಮಕ್ಕಳ ಕವಿ ಎಂದೇ ಪ್ರಸಿದ್ಧಿ ಪಡೆದ ಅವರ ಬರಹಗಳಲ್ಲಿ ಎರಡು ಭಾಗಗಳನ್ನು ಗುರುತಿಸಿಕೊಳ್ಳಬಹುದು. ಅವರೇ ಹೇಳುವ ಹಾಗೆ ಆರರಿಂದ ಹತ್ತು ವರ್ಷದ ಮಕ್ಕಳಿಗಾಗಿಯೇ ಅನೇಕ ಪದ್ಯವನ್ನು ಬರೆದರು. ಹತ್ತು ವರುಷ ಮೀರಿದ ಮಕ್ಕಳಿಗಾಗಿ ಅನೇಕ ಕಥೆಗಳನ್ನು ರಚಿಸಿದರು.

**16. ರಂ.ಶ್ರೀ. ಮುಗಳಿ**




ರಂಗನಾಥ ಶ್ರೀನಿವಾಸ ಮುಗಳಿಯವರು ಕನ್ನಡ ಸಾಹಿತ್ಯ ಲೋಕದ ಪ್ರಮುಖ ವಿದ್ವಾಂಸರ ಸಾಲಿಗೆ ಸೇರಿದವರು. ತಮ್ಮ ಪ್ರಾರಂಭದ ಹೆಸರಾದ ರಂಗನಿಗೆ ರಸಿಕತೆಯ ಲೇಪವನ್ನು ಹಚ್ಚಿ 'ರಸಿಕ ರಂಗ' ಎಂಬ ಹೆಸರನ್ನು ತಮ್ಮಲ್ಲಿನ ಬರವಣಿಗೆಗಾರನ ಹೆಸರನ್ನಾಗಿ ಮಾಡಿಕೊಂಡರು. ರಂ.ಶ್ರೀ. ಮುಗಳಿಯವರು 1906ರ ಜುಲೈ 15ರಂದು ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆಆಲೂರಿನಲ್ಲಿ ಜನಿಸಿದರು. ಇವರ 'ಕನ್ನಡ ಸಾಹಿತ್ಯ ಚರಿತ್ರೆ' ಎಂಬ ಗ್ರಂಥ ಕನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ಒಂದು ಮಹತ್ವದ ಕೃತಿ. ರಂ. ಶ್ರೀ. ಮುಗಳಿಯವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳಿಂದ ಚಿರಸ್ಮರಣೀಯರಾಗಿದ್ದಾರೆ.

**17. ಸಂ.ಶಿ. ಭೂಸನೂರಮಠ**



ಕನ್ನಡ ಸಂಪಾದನಾಶಾಸ್ತ್ರಕ್ಕೆ ಬುನಾದಿ ಹಾಕಿದ ಸಂ.ಶಿ. ಭೂಸನೂರಮಠರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನಿಡಗುಂದಿ ಗ್ರಾಮದವರು. ಸಂಗಯ್ಯ ಶಿವಮೂರ್ತಯ್ಯ ಭೂಸನೂರಮಠರು 1910ರ ನವೆಂಬರ್ 7ರಂದು ಜನಿಸಿದರು. ಶಾಸ್ತ್ರೀಯವಾಗಿ ಹಾಗೂ ವೈಜ್ಞಾನಿಕವಾಗಿ ವೀರಶೈವ ದರ್ಶನ ಅಧ್ಯಯನ ಮಾಡಿದ ಅವರು ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಹಲವು ಕೃತಿಗಳನ್ನು ಸಂಪಾದಿಸಿದ್ದಾರೆ. ಭಕ್ತಿಸುಧಾಸಾರ, ಗುರುರಾಜ ಚಾರಿತ್ರ, ಮೋಳಿಗಯ್ಯನ ಪುರಾಣ, ಲಿಂಗಲೀಲಾವಿಲಾಸ ಚಾರಿತ್ರ, ಪ್ರೌಢರಾಯನ ಕಾವ್ಯ, ವಚನ ಸಾಹಿತ್ಯ ಸಂಗ್ರಹ, ಏಕೋತ್ತರ ಶತಸ್ಥಲ, ಶೂನ್ಯ ಸಂಪಾದನೆಯ ಸಂಪುಟಗಳು ಪ್ರಮುಖವಾದವುಗಳು.

**18. ಎನ್ಕೆ ಕುಲಕರ್ಣಿ**




ಸಾಹಿತ್ಯವಲಯದಲ್ಲಿ ಎನ್ಕೆ ಎಂದು ಪ್ರಸಿದ್ಧರಾದವರು ಎನ್ಕೆ ಕುಲಕರ್ಣಿ. ಧಾರವಾಡದವರಿಗೆಲ್ಲ 'ನಾನೀಕಾಕ' ಎಂದೇ ಅವರು ಆಪ್ತ ನೆನಪು. ಎನ್ಕೆ ಕುಲಕರ್ಣಿಯವರು 1913ರ ಆಗಸ್ಟ್ 29ರಂದು ಗದಗದಲ್ಲಿ ಜನಿಸಿದರು. ತಂದೆ ಕೃಷ್ಣರಾವ್ ನರಸಿಂಹ ಕುಲಕರ್ಣಿ. ತಾಯಿ ಸೋನಕ್ಕ. ಎನ್ಕೆ ಅವರ ಪ್ರಾರಂಭಿಕ ಶಿಕ್ಷಣ ಗದಗ, ಕುಮಟಾ, ಹಳಿಯಾಳಗಳಲ್ಲಿ ನಡೆಯಿತು. ಎನ್ಕೆ ಅವರು 'ಕುಮಾರವ್ಯಾಸ ಭಾರತ'ದ ಕುರಿತು ಮಹಾಪ್ರಬಂಧ ರಚಿಸಿದ್ದರು. ಎನ್ಕೆ ಬರಹಗಾರರಾಗಿ ಹಲವಾರು ಹಾಸ್ಯ ಪ್ರಹಸನ, ಕಾದಂಬರಿ, ನಗೆ ಸಂಕಲನಗಳನ್ನು ಪ್ರಕಟಿಸಿದರು. ನಡುಮನೆಯಲ್ಲಿ ಬೆಳ್ಳಿಹಬ್ಬ, ಅಧಃಪಾತ, ಸುಧಾರಿಸಿದ ಕಳ್ಳ ಮುಂತಾದ 20ಕ್ಕೂ ಹೆಚ್ಚು ಏಕಾಂಕ, ರೇಡಿಯೋಗಳನ್ನು ರಚಿಸಿದ್ದಾರೆ.

**19. ಡಾ. ಆರ್.ಸಿ. ಹಿರೇಮಠ**



ಶರಣ ಸಂಸ್ಕೃತಿಯ ಚಿಂತಕರೆನಿಸಿದ್ದ ಹಿರೇಮಠ ಅವರು ಹುಟ್ಟಿದ್ದು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಕುರುಡಗಿ ಎಂಬ ಸಣ್ಣ ಹಳ್ಳಿಯಲ್ಲಿ, 1920 ರ ಜನವರಿ 15 ರಂದು. ತಂದೆ ಚಂದ್ರಯ್ಯ, ತಾಯಿ ವೀರಮ್ಮ. ಬಡತನದಲ್ಲಿ ಬೆಂದು ಅರಳಿದ ಬದುಕು. ಒಂದೊಂದು ಹೊತ್ತಿನ ತುತ್ತಿಗೂ ಪಡಬಾರದ ಕಷ್ಟಪಟ್ಟು ಬೆಳೆದವರು. ಆರ್.ಸಿ. ಹಿರೇಮಠರು ಷಟ್ಥಲ ಜ್ಞಾನ ಸಾರಾಮೃತ, ಅಖಂಡೇಶ್ವರ ವಚನಗಳು, ಚನ್ನಬಸವಣ್ಣನವರ ವಚನಗಳು, ಸಿದ್ಧರಾಮೇಶ್ವರ ವಚನಗಳು, ಬಸವಣ್ಣನವರ ವಚನಗಳು, ಶಿವಶರಣೆಯರ ವಚನಗಳು, 27 ಶಿವಶರಣೆಯರ ವಚನಗಳು, ಸಕಲ ಪುರಾತನ ವಚನಗಳು ಮಹತ್ವದ ಸಂಪಾದಿತ ಕೃತಿಗಳು.

**20. ಡಾ. ಎಂ. ಎಸ್. ಸುಂಕಾಪುರ**




ಕನ್ನಡದ ಪ್ರಖ್ಯಾತ ಸಾಹಿತಿಗಳಾದ ಡಾ. ಎಂ. ಎಸ್. ಸುಂಕಾಪುರ ಅವರು ಜನೇವರಿ 10, 1921ರಂದು ಗದಗ ಜಿಲ್ಲೆಯ ಮುಳಗುಂದದಲ್ಲಿ ಜನಿಸಿದರು. ಸುಂಕಾಪುರ ಅವರ ಮನೆತನವೆ ಜನಪದಗಳ ತವರು. ಹೀಗಾಗಿ ಇವರಿಗೆ ಜನಪದ ಕಲೆಗಳ ಬಗ್ಗೆ ವಿಶೇಷವಾದ ಆಕರ್ಷಣೆ ಮೂಡಿತು. ಸುಗ್ಗಿ ಕುಣಿತ, ಸೋಬಾನಪದ, ಜಾನಪದ ಕಥೆ ಹೇಳುವ ಕಲೆ ಇವರಿಗೆ ಕರಗತವಾಗಿತ್ತು. ಕನ್ನಡ ಸಾಹಿತ್ಯದಲ್ಲಿ ಹಾಸ್ಯ ಇವರ ಪಿಎಚ್.ಡಿ ಮಹಾಪ್ರಬಂಧ. ನಗೆಹೊಗೆ, ಗಪ್ ಚಿಪ್, ತಲೆಹರಟೆಗಳು, ನಗೆಗಾರ ನಯಸೇನ, ಜೀವನ ಜೋಕಾಲಿ ಇವರ ಇತರ ಪ್ರಮುಖ ಕೃತಿಗಳು.

**21. ಡಾ. ಬಿ.ವಿ.ಮಲ್ಲಾಪುರ**



ಡಾ. ಬಿ.ವಿ.ಮಲ್ಲಾಪುರ ಅವರು ಗದಗ ಜಿಲ್ಲೆಯ ರೋಣ ತಾಲೂಕಿನ ಇಟಗಿ ಗ್ರಾಮದಲ್ಲಿ ಜನಿಸಿದರು. ಡಾ. ಆರ್.ಸಿ.ಹಿರೇಮಠರ ಮಾರ್ಗದರ್ಶನದಲ್ಲಿ ನಯಸೇನ ಮತ್ತು ಆತನ ಕೃತಿಗಳು ಎಂಬ ವಿಷಯದ ಕುರಿತಾಗಿ ಪಿಎಚ್.ಡಿ ಪದವಿ ಪಡೆದರು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರವಾಚಕರಾಗಿ ಕಾರ್ಯ ನಿರ್ವಹಿಸಿದರು. ವೀರಶೈವ ದರ್ಶನ, ಶೂನ್ಯ ಸಂಪಾದನೆಗಳು, ಸಿದ್ಧರಾಮ ಒಂದು ಸಮೀಕ್ಷೆ, ಅಲಂಕಾರ ಶಾಸ್ತ್ರಕಾರರು ಒಂದು ಸಮೀಕ್ಷೆ, ಪ್ರೌಡದೇವರಾಯ–ವಿಜಯಕಲ್ಯಾಣ, ಸುಧಾರ್ಣವ–1, 2, 3 ಪ್ರಭುಲಿಂಗಲೀಲೆಯ ಸಂಪಾದನೆ ಇವರ ಮಹತ್ವದ ಸಾಹಿತ್ಯಕ ಕೊಡುಗೆಗಳು.

**22. ಡಾ. ಜಿ. ಎಸ್. ಅಮೂರ**



ಭಾರತದ ಪ್ರಥಮ ದರ್ಜೆಯ ವಿಮರ್ಶಕರೆಂದು ವಿದೇಶಿ ವಿದ್ವಾಂಸರಿಂದ ಕರೆಸಿಕೊಂಡ ಡಾ. ಗುರುರಾಜ ಶ್ಯಾಮಾಚಾರ್ಯ ಅಮೂರ ಅವರು ಆಧುನಿಕ ಕನ್ನಡ ಸಾಹಿತ್ಯದ ಶ್ರೇಷ್ಠ ವಿಮರ್ಶಕರು. 1925ರ ಮೇ 8ರಂದು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಸೂರಣಗಿಯಲ್ಲಿ ಜನಿಸಿದರು. ಡಾ. ಜಿ. ಎಸ್. ಅಮೂರ ಅವರು ಇಂಗ್ಲಿಷ್ ಸಾಹಿತ್ಯದ ಅತ್ಯುತ್ತಮ ಶಿಕ್ಷಕರಾಗಿದ್ದಂತೆ ಉನ್ನತ ಮಟ್ಟದ ಸಂಶೋಧಕರೂ, ವಿಮರ್ಶಕರೂ ಆಗಿದ್ದರು. ಅವರು ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಗಮನಾರ್ಹ ಸಾಹಿತ್ಯ ರಚನೆ ಮಾಡಿದ್ದಾರೆ. ಅವರು ಕುವೆಂಪು, ಬೇಂದ್ರೆ, ಚನ್ನವೀರ ಕಣವಿ, ಜಿ.ಎಸ್. ಶಿವರುದ್ರಪ್ಪನವರ ಕೆಲವು ಕವಿತೆಗಳನ್ನು, ಸರ್ವಜ್ಞ ಮತ್ತು ಬಸವಣ್ಣನವರ ಕೆಲವು ವಚನಗಳನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ.

**23. ಕೀರ್ತಿನಾಥ ಕುರ್ತಕೋಟಿ**



ಗದುಗಿನಲ್ಲಿ ಜನಿಸಿದ ಕೀರ್ತಿನಾಥ ಕುರ್ತಕೋಟಿಯವರು ಸಂಸ್ಕೃತ, ಇಂಗ್ಲಿಷ್, ಮರಾಠಿ ಮತ್ತು ಕನ್ನಡ ಸಾಹಿತ್ಯಗಳ ತಳಸ್ಪರ್ಶಿ ಅಧ್ಯಯನ ಮಾಡಿದವರು. ಕನ್ನಡದಲ್ಲಿ ವಿಮರ್ಶೆಯ ಪ್ರಕಾರ ಗಂಭೀರವಾದ ಶಿಸ್ತಾಗಿ ಬೆಳೆಯಬೇಕಾಗಿದ್ದ ಕಾಲದಲ್ಲಿ ಈ ಕ್ಷೇತ್ರಕ್ಕೆ ಪ್ರವೇಶಿಸಿ ಇದಕ್ಕೆ ಘನತೆಯನ್ನು ತಂದುಕೊಟ್ಟವರು ಬಹುಶ್ರುತ ವಿದ್ವಾಂಸ ಕೀರ್ತಿನಾಥ ಕುರ್ತಕೋಟಿಯವರು. ಗಾನಕೇಳಿ, ನಾವು ಬರಿಗೈಯವರು ಕವನ ಸಂಕಲನಗಳಾದರೆ, ಆ ಮನಿ, ಸ್ವಪ್ನದರ್ಶಿ ಮತ್ತು ಇತರ ಗೀತ ನಾಟಕಗಳು, ಸ್ವಪ್ನ ವಾಸವದತ್ತೆ ಚಂದ್ರಗುಪ್ತ, ನಾಟಕಗಳು. ನವ್ಯಕಾವ್ಯ ಪ್ರಯೋಗ, ಯುಗಧರ್ಮ ಹಾಗು ಸಾಹಿತ್ಯದರ್ಶನ, ಯಶೋಧರ ಚರಿತ್ರೆಯ ಕಾವ್ಯತಂತ್ರ, ಉರಿಯ ನಾಲಿಗೆ, ವಿಮರ್ಶೆಯ ವಿನಯ:ನಾಟಕ, ವಿಮರ್ಶೆಯ ವಿನಯ:ಕಾದಂಬರಿ, ಬಾರೊ ಸಾಧನಕೇರಿಗೆ, ನೂರುಮರ ನೂರುಸ್ವರ, ಶ್ರಾವಣ ಪ್ರತಿಭೆ ಮೊದಲಾದವು ವಿಮರ್ಶಾ ಕೃತಿಗಳಾಗಿವೆ.

**24. ಡಾ. ಪಂಡಿತ ಪುಟ್ಟರಾಜ ಗವಾಯಿಗಳು**



ಹಾವೇರಿ ಜಿಲ್ಲೆಯ ದೇವಗಿರಿಯಲ್ಲಿ ಜನಿಸಿದ ಪುಟ್ಟಯ್ಯನವರು ತಮ್ಮ ಕರ್ಮಭೂಮಿಯನ್ನಾಗಿ ಗದಗವನ್ನು ಆಯ್ದುಕೊಂಡರು. ಅಂಧರ ಬಾಳಿಗೆ ಬೆಳಕಾದ. ಪುಟ್ಟಯ್ಯನನ್ನು ದೊಡ್ಡ ಗವಾಯಿ ಮಾಡಬೇಕೆಂಬ ಆಕಾಂಕ್ಷೆಯಿಂದ ಅವರ ಮಾವ ಪಂಚಾಕ್ಷರಿ ಗವಾಯಿಗಳಲ್ಲಿ ಕರೆದೊಯ್ದು ಎಲ್ಲ ವಿವರಿಸಿದರು. ಪಂಚಾಕ್ಷರಿ ಗವಾಯಿಗಳ ಅಂತಶ್ಚಕ್ಷು ಅರುಹಿತು, ನನ್ನ ಹೆಸರನ್ನು ಅಮರಗೊಳಿಸುವ ಶಿಷ್ಯನನ್ನು ಗುರು ಕುಮಾರೇಶ ಕಳಿಸಿರುವನು ಎಂದು ಪುಟ್ಟಯ್ಯನನ್ನು ಅಪ್ಪಿದರು. ಪಾಠ ಮರುದಿನವೇ ಆರಂಭವಾಯಿತು. ಹಿಂದುಸ್ತಾನಿ ಮತ್ತು ಕರ್ನಾಟಕಿ ಎಂಡೂ ಪದ್ಧತಿಗಳಲ್ಲಿ ನಿಷ್ಣಾತನನ್ನಾಗಿಸಿ ಪುಟ್ಟಯ್ಯನನ್ನು ತಮ್ಮಂತೆಯೆ ಉಭಯ ಗಾಯನಾಚಾರ್ಯನನ್ನಾಗಿಸಿದರು. ಅವರ ಸಾಹಿತ್ಯ ಕೃಷಿ ಅಗಾಧ. ಪುರಾಣ, ನಾಟಕ, ಕಾವ್ಯ ಹೀಗೆ ಇತರ ಪ್ರಕಾರದಲ್ಲಿ 75ಕ್ಕೂ ಅಧಿಕ ಕೃತಿಗಳು ಪ್ರಕಟಗೊಂಡಿವೆ. ಹಿಂದಿಯಲ್ಲಿ ಬಸವ ಪುರಾಣ ರಚಿಸಿದ್ದಾರೆ. ಪುಟ್ಟರಾಜ ಗವಾಯಿಗಳಿಗೆ ಬಂದ ಪದವಿಗಳು ಅಸಂಖ್ಯ ಯಾವ ಪ್ರಶಸ್ತಿಯೂ ಅವರ ಸಾಧನೆಯ ಘನತೆಗೆ ದೊಡ್ಡದಲ್ಲ.

**25. ಡಾ. ಅನ್ನದಾನೀಶ್ವರ ಮಹಾಸ್ವಾಮಿಗಳವರು**



ಮುಂಡರಗಿಯ ಪರಮಪೂಜ್ಯರೂ, ಸಾಹಿತಿಗಳೂ, ವೀರಶೈವ ಸಾಹಿತ್ಯದ ಪ್ರಕಾಂಡ ಪಂಡಿತರೂ ಆದ ಜಗದ್ಗುರು ಡಾ. ಅನ್ನದಾನೀಶ್ವರ ಮಹಾಸ್ವಾಮಿಗಳವರು ಸಾಹಿತಿಗಳಾಗಿಯೂ ಪ್ರಸಿದ್ಧರು.

ಅನ್ನದಾನೀಶ್ವರ ಸಂಸ್ಥಾನ ಮಠದ ದಶಮಪೀಠಾಧಿಪತಿಗಳಾದ ಪೂಜ್ಯಡಾ. ಅನ್ನದಾನೀಶ್ವರ ಶ್ರೀಗಳವರ ಅವಿರತ ಶ್ರಮದಿಂದ ನಾಡಿನ ಸಾಂಸ್ಕೃತಿಕ ಶೈಕ್ಷಣಿಕ ಹಾಗೂ ಸಾಹಿತ್ಯಕ ಇತಿಹಾಸದಲ್ಲಿ ಅಜರಾಮರವಾಗಿರುವರು. ಕವಿಗಳಾಗಿ, ತ್ರಿಭಾಷಾ ಪಂಡಿತರಾಗಿ, ಸಂಪಾದಕರಾಗಿ ಮಕ್ಕಳ ಸಾಹಿತಿಯಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ ನೂರಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಸಮರ್ಪಿಸಿದ್ದು ಬಹುದೊಡ್ಡ ಕಾಣಿಕೆ,

ಅವುಗಳಲ್ಲಿ ಪ್ರಮುಖವಾದವು ಮೈಲಾರ ಬಸವಲಿಂಗ ಶರಣರ ಗುರುಕರಣ, ವೀರಶೈವ ದಾರ್ಶನಿಕ ಸಿದ್ಧಾಂತ. ಮಾನವಧರ್ಮ, ಬಸವತತ್ವದರ್ಶನ, ಶಿವಾಗಮಗಳಲ್ಲಿ ವೀರಶೈವ ಮುಂತಾದ ನೂರಕ್ಕೂ ಅಧಿಕ ಕೃತಿಗಳು ಪೂಜ್ಯರ ವಿದ್ವತ್ತಿಗೆ ಸಾಕ್ಷಿ. ಇವರ ಸಾಹಿತ್ಯವನ್ನು ಕುರಿತು ಉನ್ನತ ಸಂಶೋಧನೆಗಳು ನಡೆದಿವೆ. ಅವರ ಸಾಹಿತ್ಯಕ ಶೈಕ್ಷಣಿಕ ಸೇವೆಯನ್ನು ಗುರುತಿಸಿ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ.

**26. ಚೆನ್ನವೀರ ಕಣವಿ**



ಚೆನ್ನವೀರ ಕಣವಿ ಹೊಸಗನ್ನಡ ಕಾವ್ಯದ ಪ್ರಮುಖ ಕವಿ. ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ 1928ರ ಜೂನ್ 28ರಂದು ಜನಿಸಿದರು. ತಾಯಿ ಪಾರ್ವತೆವ್ವ. ತಂದೆ ಸಕ್ಕರೆಪ್ಪ. ಪತ್ನಿ ಶಾಂತಾದೇವಿ ಅವರು ಕೂಡ ಸಾಹಿತ್ಯ ಸಂಸ್ಕೃತಿಯ ಒಲವುಳ್ಳವರು. ಚೆನ್ನವೀರ ಕಣವಿಯವರು ಕವಿಯಾಗಿ ಪ್ರಕಟವಾಗಿದ್ದು ನವೋದಯದ ಸಂದರ್ಭದಲ್ಲಿ. ಬೇಂದ್ರೆ, ಕುವೆಂಪು, ಪು.ತಿ.ನ, ಮಧುರಚೆನ್ನ ಮೊದಲಾದವರ ಕಾವ್ಯ ಹೊಸದಾಗಿ ಕಾವ್ಯರಚನೆಗೆ ತೊಡಗುವವರನ್ನು ಗಾಢವಾಗಿ ಪ್ರಭಾವಿಸುತ್ತಿದ್ದ ಕಾಲವದು. ಮಧುಚಂದ್ರ, ಮಣ್ಣಿನ ಮೆರವಣಿಗೆ, ದಾರಿದೀಪ ಕಾರ್ತಿಕದ ಮೋಡ, ಹೂವು ಹೊರಳುವವು ಸೂರ್ಯನ ಕಡೆಗೆ ಮೊದಲಾದವು ಅವರ ಇ ತ ್ ರ ್ ಕವನ ಸಂಕಲನಗಳು. ಕಾವ್ಯದಾಚೆಗೂ ಅವರ ಸಾಹಿತ್ಯ ಕೃಷಿ ಇದೆ.

**27. ಎಚ್.ಎನ್.ಹೂಗಾರ**




ಎಚ್.ಎನ್.ಹೂಗಾರ ಶತಮಾನ ಕಂಡ ಪ್ರಸಿದ್ಧ ವೃತ್ತಿರಂಗಭೂಮಿ ಕಂಪನಿಯ ನಾಟಕಕಾರ. ಗದುಗಿನ ಶಹಪೂರಪೇಟೆಯಲ್ಲಿ ಮಾರ್ಚ್ 1932ರಲ್ಲಿ ಜನಿಸಿದ ಹುಚ್ಚಪ್ಪನವರ ಮನೆತನದ ಕಸುಬು ಹೂಗಾರಿಕೆ. ಕಲಾವಿದರ ಕುಟುಂಬದಲ್ಲಿಯೇ ಜನಿಸಿದ ಕಾರಣ ನಾಲ್ಕನೆಯ ವಯಸ್ಸಿನಲ್ಲಿಯೇ ಸರಸ್ವತಿ ಪಾತ್ರ ನಿರ್ವಹಿಸಿ ರಂಗಭೂಮಿ ಪ್ರವೇಶಿಸಿದರು. ಈ ಪ್ರವೇಶದಿಂದಾಗಾಗಿ ನಾಟಕ ಬರೆಯುವ ಅಭಿರುಚಿಯೂ ಅಂಟಿಕೊಂಡಿತು. ದಸರಾ ನಾಟಕದ ಮೂಲಕ ವೃತ್ತಿರಂಗಭೂಮಿಯನ್ನು ಪ್ರವೇಶಿಸಿ ಎಪ್ಪತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಭಕ್ತಿಜ್ಯೋತಿ, ಕುಲಪುತ್ರ, ಕೊಂಡು ತಂದ ಗಂಡ, ಬೂದಿ ಮುಚ್ಚಿದ ಕೆಂಡ, ಸತಿಯೇ ಸೌಭಾಗ್ಯ, ಮನ ಗೆದ್ದ ಮಡದಿ, ಸಂಗೊಳ್ಳಿ ರಾಯಣ್ಣ, ಇವರ ಪ್ರಮುಖ ನಾಟಕಗಳು. ಎಚ್.ಎನ್.ಹೂಗಾರ ಅವರನ್ನು ಜ್ಯೂಬಿಲಿ ಕವಿ ಎಂದೇ ಕರೆಯಲಾಗುತ್ತದೆ.

**28. ಮಾಧವ ಕುಲಕರ್ಣಿ**



ಲೇಖಕ, ವಿಮರ್ಶಕ ಮಾಧವ ಕುಲಕರ್ಣಿ ಅವರು ಗದುಗಿನಲ್ಲಿ ಜನಿಸಿದರು. ತಂದೆ ಎ.ವಿ. ಕುಲಕರ್ಣಿ ಗದುಗಿನ ಮುನ್ಸಿಪಲ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಕವಿ ಗೋಪಾಲಕೃಷ್ಣ ಅಡಿಗರು ನಡೆಸುತ್ತಿದ್ದ ತ್ರೈಮಾಸಿಕ ಪತ್ರಿಕೆ 'ಸಾಕ್ಷಿ'ಗಾಗಿ ಬರೆಯಲು ಪ್ರಾರಂಭಿಸಿದರು. ಈ ಸಮಯದಲ್ಲಿ ಎ.ಕೆ. ರಾಮಾನುಜನ್ ಮತ್ತು ಅಡಿಗರ ಕಾವ್ಯದ ಮೇಲೆ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು ಬರೆದ ವಿಮರ್ಶಾ ಲೇಖನಗಳಿಗೆ ಪ್ರತಿಕ್ರಿಯಿಸಿದ್ದು ಮತ್ತು ಅದು ಒಂದು ಗಂಭೀರ ಚರ್ಚೆಯ ಸ್ವರೂಪ ಪಡೆದದ್ದು ಮಹತ್ವದ ವಿಷಯ. ಈ ಚರ್ಚೆ ವಿಮರ್ಶಾ ಕ್ಷೇತ್ರದಲ್ಲಿ ಮಾಧವ ಕುಲಕರ್ಣಿ ಅವರನ್ನು ಮುಂಚೂಣಿಗೆ ತಂದಿತು. ವಿಮರ್ಶೆ, ಕಾವ್ಯ, ಕತೆ, ಕಾದಂಬರಿ ಸೇರಿದಂತೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ.

**29. ಸೋಮಶೇಖರ ಇಮ್ರಾಪೂರ**



ಕವಿ, ವಿದ್ವಾಂಸ, ಜಾನಪದ ತಜ್ಞ, ಸೋಮಶೇಖರ ಇಮ್ರಾಪೂರ ಅವರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಅಬ್ಬಿಗೇರಿ ಗ್ರಾಮದಲ್ಲಿ 1940ರ ಫೆಬ್ರವರಿ 14 ರಂದು ಜನಿಸಿದರು. ತಂದೆ ಗುರಪ್ಪ. ತಾಯಿ ಸಂಗಮ್ಮ.ಅವರ ಪ್ರಾರಂಭಿಕ ಶಿಕ್ಷಣ ಅಬ್ಬಿಗೇರಿಯಲ್ಲಿ ನಡೆಯಿತು.

ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಮತ್ತು ಭಾಷಾ ವಿಜ್ಞಾನದಲ್ಲಿ ಸುವರ್ಣ ಪದಕದೊಡನೆ ಎಂ.ಎ. ಪದವಿ ಪಡೆದ ಸೋಮಶೇಖರರು 'ಜನಪದ ಒಗಟುಗಳು' ಪ್ರಬಂಧಮಂಡಿಸಿ ಪಿಎಚ್.ಡಿ ಪದವಿ ಪಡೆದರು. ಸೋಮಶೇಖರ ಇಮ್ರಾಪೂರ ಅವರು ತಮ್ಮ ತಾತ್ವಿಕ ಹೋರಾಟದಿಂದ ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ವಿಭಾಗಕ್ಕೆ ಜೀವತುಂಬಿ, ಜಾನಪದ ವಿಭಾಗವನ್ನು ಕಟ್ಟಿ ಬೆಳೆಸಿದರು.

**30. ಅಬ್ಬಿಗೇರಿ ವಿರುಪಾಕ್ಷಪ್ಪನವರು**

ಅಬ್ಬಿಗೇರಿ ವಿರುಪಾಕ್ಷಪ್ಪನವರು 20–8–1924 ರಂದು ಗದಗ ಜಿಲ್ಲೆಯ ರೋಣ ತಾಲೂಕಿನ ಸೂಡಿ ಗ್ರಾಮದಲ್ಲಿ ಜನಿಸಿದರು. ವಿದ್ಯಾರ್ಥಿ ದಿಸೆಯಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರೀಯವಾಗಿ ಧುಮುಕಿದವರು. ಸಮಾಜವಾದಿ ತತ್ವ ಸಿದ್ಧಾಂತ ಮೈಗೂಡಿಸಿಕೊಂಡಿದ್ದ ಅಬ್ಬಿಗೇರಿಯವರು 1956 ರ ಮೈಸೂರು ರಾಜ್ಯ ಉಳಿಸಿ, ಗಡಿ ಚಳವಳಿ, ಕರ್ನಾಟಕ ಎಂಬ ನಾಮಕರಣ ಚಳವಳಿ, ಗೋಕಾಕ ಚಳವಳಿ ಹೀಗೆ ಕನ್ನಡ ನಾಡು ನುಡಿಗೆ ಸಂಬಂಧಿಸಿದ ಎಲ್ಲ ಚಳವಳಿಗಳಲ್ಲೂ ಭಾಗವಹಿಸಿದ ಕೀರ್ತಿ ಅವರದ್ದು. ಅಂದಿನ ಕನ್ನಡದ ಜನರಲ್ಲಿ ನಾಡು ನುಡಿ ಅಭಿಮಾನ ಬೆಳಸುವಲ್ಲಿ ಅವರ ಸಾಹಿತ್ಯದ ಪಾತ್ರವೂ ಮಹತ್ವದ್ದು.

**31. ಎಸ್ .ಆರ್. ಪಾಟೀಲ**

ಎಸ್.ಆರ್. ಪಾಟೀಲ ಅವರು ವೃತ್ತಿಯಲ್ಲಿ ಎಂಜಿನೀಯರ್. ಆದರೆ, ಸಾಹಿತ್ಯ ಅವರ ಆಸಕ್ತಿಕರ ಕ್ಷೇತ್ರ. ಗ್ರಂಥ ರಚನೆ ಹಾಗೂ ವೃತ್ತಪತ್ರಿಕೆಗಳ ಅಂಕಣಕಾರರಾಗಿ ದೀರ್ಘಕಾಲದಿಂದಲೂ ಸಾಹಿತ್ಯ ಕ್ಷೇತ್ರದಲ್ಲಿ ಚಿರಪರಿಚಿತರು. ಸಾಹಿತ್ಯವನ್ನು ಹೊರತುಪಡಿಸಿದರೆ ಅಧ್ಯಾತ್ಮಅವರ ಬದುಕಿನ ಭಾಗವಾಗಿತ್ತು.

ಶ್ರೇಷ್ಟ ತತ್ವಪದಕಾರ ಶಿಶುನಾಳ ಶರೀಫರ ಗದ್ದುಗೆಯ ಬಳಿ ವಿಶ್ರಾಂತಿ ಧಾಮಕಟ್ಟಿಸುವಲ್ಲಿ ಇವರ ಪಾತ್ರ ತುಂಬ ಪ್ರಮುಖ. ಇದುವರೆಗೆ ನಲವತ್ತಕ್ಕೂ ಅಧಿಕ ಗ್ರಂಥಗಳನ್ನು ರಚಿಸಿದ್ದಾರೆ. ಪಿ. ಆರ್. ಸರಕಾರ ಅವರ 34 ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಅವರ ಜೀವನ ಚರಿತ್ರೆಯನ್ನು ನಿರೂಪಿಸಿದ್ದಾರೆ. ತೆಲುಗಿನಲ್ಲಿರುವ ಮಹಾಯೋಗಿ ವೇಮನರ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸಿ, ಟಿಪ್ಪಣಿಯೊಂದಿಗೆ ಹೊರತರುವಲ್ಲಿ ಇವರ ಪಾತ್ರ ಬಹು ಮುಖ್ಯವಾದದ್ದು.

**32. ಕೆ. ಎಚ್. ಪಾಟೀಲ**




ಸಹಕಾರ ಕ್ಷೇತ್ರವನ್ನು ಸರ್ವ ಕ್ಷೇತ್ರಗಳಿಗೆ ವಿಸ್ತರಿಸಿದ ಸಾಹಸಿ ಕೆ.ಎಚ್.ಪಾಟೀಲ ಸಹಕಾರಿ ರಂಗದ ಓಯಾಸಿಸ್ ರೆಂದು ಜನವಾನಸದಲ್ಲಿ ಸ್ಥಿರಗೊಂಡಿರುವ ಕೆ.ಎಚ್.ಪಾಟೀಲ ಅವರು 1925ವಾರ್ಚ 16ರಂದು ಶ್ರೀ ವೀರನಾರಾಯಣನ ಪರಿಸರದ ಗದಗ ನಗರದಲ್ಲಿ ರಂಗನಗೌಡ ಮತ್ತು ಶ್ರೀಮತಿ ನಿಂಗಮ್ಮ ದಂಪತಿಗಳ ಮಗನಾಗಿ ಜನಿಸಿದರು. ಕೆ.ಎಚ್.ಪಾಟೀಲ ಅವರ ಜನನ ಎಲ್ಲರಂತೆ ಸಾವಾನ್ಯವಾಗಿದ್ದರೂ ಅವರು ಬದುಕಿದ ರೀತಿ ವಾತ್ರ ಅಸಾವಾನ್ಯ ಹಾಗೂ ಅತ್ಯಂತ ಆದರ್ಶಪ್ರಾಯವಾಗಿದೆ. ಸಂಪಾದಕರಾಗಿ ಪತ್ರಿಕಾ ಕ್ಷೇತ್ರದಲ್ಲಿ ತಮ್ಮ ವಿಶಿಷ್ಟವಾದ ಪ್ರತಿಭೆಯ ಚಾಪು ಮೂಡಿಸಿದ್ದರು. ರಾಜಕಾರಣಿಗಳು ಎಂದರೆ ಓದು–ಬರವಣಿಗೆ ಮತ್ತು ಸಾಹಿತ್ಯ ಕ್ಷೇತ್ರದಿಂದ ಬಹುದೂರರು ಎಂಬ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಕೆ.ಎಚ್.ಪಾಟೀಲ ಅವರ ಬದುಕು ಅನೇಕರಿಗೆ ವಾದರಿ.

**33. ರಾಜಗುರು ಗುರುಸ್ವಾಮಿ ಕಲಿಕೇರಿ**



ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ಪಂಡಿತ ರಾಜಗುರು ಗುರುಸ್ವಾಮಿ ಕಲಿಕೇರಿ ಅವರು ಬಿಜಾಪುರ ಜಿಲ್ಲೆಯ ಕಲಿಕೇರಿ ಗ್ರಾಮದಲ್ಲಿ 1940ರಲ್ಲಿ ಜನಿಸಿದರು. ತಂದೆಯಿಂದ ಸಂಗೀತ ಮತ್ತು ಸಾಹಿತ್ಯದಲ್ಲಿ ಆಸಕ್ತಿ ತಳೆದು ಪಂಡಿತ ಪುಟ್ಟರಾಜ ಗವಾಯಿಯವರಲ್ಲಿ ಹಿಂದೂಸ್ತಾನಿ ಸಂಗೀತ ಶಿಕ್ಷಣ ಪಡೆದು ಗದುಗಿನಲ್ಲಿಯೇ ನೆಲೆ ನಿಂತರು. ಗಾಯನ ಮಾತ್ರವಲ್ಲದೇ ಹೃದಯ ಮುಟ್ಟುವ ಸುಪ್ರಭಾತಗಳನ್ನು ರಚಿಸಿ ಸಂಗೀತ ಸಂಯೋಜಿಸಿದ್ದಾರೆ. ಶ್ರೀಯುತರು 'ವೀರೇಶ್ವರ ಪುಣ್ಯಾಶ್ರಮ'ದಲ್ಲಿ ಸಾವಿರಾರು ಪ್ರತಿಭಾವಂತ ಯುವಕರಿಗೆ ಸಂಗೀತ ಶಿಕ್ಷಣ ನೀಡಿದ್ದಾರೆ. ಪಂಡಿತ ರಾಜಗುರು ಗುರುಸ್ವಾಮಿ ಕಲಿಕೇರಿ ಅವರ ಅನೇಕ ಪುಸ್ತಕಗಳು ಪ್ರಕಟಗೊಂಡಿವೆ ಮತ್ತು ಕರ್ನಾಟಕದಲ್ಲಿ ಅವರು ರಚಿಸಿದ ಅನೇಕ ನಾಟಕಗಳು ಯಶಸ್ವಿಯಾಗಿ ಪ್ರದರ್ಶನಗೊಂಡಿವೆ.

**34. ಡಾ. ಗಿರಡ್ಡಿ ಗೋವಿಂದರಾಜ**



ಕನ್ನಡದ ಶ್ರೇಷ್ಠ ವಿಮರ್ಶಕರಾದ ಗಿರಡ್ಡಿ ಗೋವಿಂದರಾಜರವರು ಹುಟ್ಟಿದ್ದು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಅಬ್ಬಿಗೇರಿಯಲ್ಲಿ. ತಂದೆ ಅಂದಾನಪ್ಪ, ತಾಯಿ ಸಂಗಮ್ಮ. ಶಿಕ್ಷಣವನ್ನು ಅಬ್ಬಿಗೇರಿ, ನರೇಗಲ್ಲ, ರೋಣ. ಧಾರವಾಡ, ಗುಲ್ಬರ್ಗ ಮಾತ್ರವಲ್ಲದೇ ಇಂಗ್ಲೆಂಡಿನಲ್ಲಿಯೂ ಪೂರೈಸಿದರು. ಪ್ರೌಢಶಾಲೆಯಲ್ಲಿದ್ದಾಗಲೇ ಸಾಹಿತ್ಯದತ್ತ ಒಲವು. 'ಶಾರದಾ ಲಹರಿ' ನೀಳ್ಗವಿತೆ ರಚನೆ. ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಪ್ರಕಟಿಸಿದ ಕವನ ಸಂಕಲನ. ರಸವಂತಿ. ಗೆಳೆಯರಾದ ಚಂಪಾ, ಸಿದ್ಧಲಿಂಗ ಪಟ್ಟಣಶೆಟ್ಟಿ ಜೊತೆಗೂಡಿ ಸಂಕ್ರಮಣ ದ್ವೈಮಾಸಿಕ ಪತ್ರಿಕೆ ಹೊರತಂದಾಗ ವಿಮರ್ಶೆ ಬರೆಯಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. 'ರಂಗ ಮಾಧ್ಯಮ' ನಾಟಕ ಸಂಸ್ಥೆಯ ಸ್ಥಾಪಿಸಿದ್ದರು.

**35. ರಾಮಣ್ಣ ಬ್ಯಾಟಿ**



ಗದುಗಿನ ಸಾಹಿತಿ ರಾಮಣ್ಣ ಬ್ಯಾಟಿಯವರು ಪ್ರಾಥಮಿಕ ತರಗತಿಯ ನಾಲ್ಕನೇ ತರಗತಿಯನ್ನೂ ಪೂರ್ತಿ ಕಲಿಯದ ಈ ಕವಿ ಭಾಮಿನಿ ಷಟ್ಪದಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಸುರೇಬಾನ ರಾಮಣ್ಣರ ಹುಟ್ಟೂರು. ಅಲ್ಲಿ ಜೀವನ ನಿರ್ವಹಣೆ ಸಾಧ್ಯವಾಗದೇ ಗದುಗಿನಲ್ಲಿ ಅನೇಕ ದಶಕಗಳ ಕಾಲ ಜೀವಿಸಿದವರು.


ತೋಂಟದ ಸಿದ್ದಲಿಂಗ ಶ್ರೀಗಳ ಮೇಲಿನ ಗೌರವದಿಂದ ರಚಿಸಿದ ಸಿದ್ದಲಿಂಗನ ಕಾವ್ಯ ರಾಮಣ್ಣನವರ ಮೊದಲ ಕೃತಿ. ನಂತರದಲ್ಲಿ ಗುಡ್ಡಾಪುರ ದಾನಮ್ಮದೇವಿ ಪುರಾಣ ಸೇರಿದಂತೆ ಆರು ಭಾಮಿನಿ ಷಟ್ಪದಿಯ ಪುರಾಣಕಾವ್ಯಗಳನ್ನು ರಚಿಸಿದ್ದಾರೆ. ಜೀವನ ಚರಿತ್ರೆ, ಸ್ಥಳಪುರಾಣ, ವ್ರತ ಮಹಾತ್ಮೆ, ಶತಕ, ಪೂಜಾಫಲದಂತಹ ಧಾರ್ಮಿಕ ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ಮೂವತ್ಮೂರು ಕೃತಿಗಳನ್ನು ರಚಿಸಿದ್ದಾರೆ.

**36. ಎಂ.ಡಿ.ಗೋಗೇರಿ**



ಎಂ.ಡಿ.ಗೋಗೇರಿಯವರು .ಹುಟ್ಟಿದ್ದು ಗದಗ ಜಿಲ್ಲೆಯ ರೋಣ ತಾಲ್ಲೂಕು ಗೋಗೇರಿಯಲ್ಲಿ. ತಂದೆ ದಸ್ತಗೀರ ಸಾಹೇಬ, ತಾಯಿ ಅಲ್ಲಮ್ಮಾ. ಕುರುಡಗಿ, ನಿಡಗುಂದಿ, ರೋಣದಲ್ಲಿ ಓದಿ ಮುಲ್ಕಿ ಪರೀಕ್ಷೆ ಪಾಸಾದರು. ಇವರು ಒಟ್ಟು ಆರು ಕವನ ಸಂಕಲನಗಳು, ಮೂರು ಮಕ್ಕಳ ಪದ್ಯಗಳು, ಮೂರು ಏಕಾಂಕ ನಾಟಕಗಳನ್ನು ರಚಿಸಿದ್ದಾರೆ. ಸಾಹೇಬರ ಸಿಪಾಯಿ, ನಮಸ್ಕಾರ, ಕವಿಪತ್ನಿಯರ ಸಂದರ್ಶನ ಮತ್ತು ಪುರುಷ ಶೋಷಣೆ ಮೊದಲಾದ ಹಾಸ್ಯ ಸಂಕಲನಗಳು. 'ಹುಬ್ಬಳ್ಳಿಯಿಂದ ಹೂಬಳ್ಳಿಗೆ' ಸ್ವಾನುಭವದ ಸಂಕಥನ ಪ್ರಕಟಗೊಂಡಿವೆ. ಇವರ ಸಾಹಿತ್ಯ ಸೇವೆಗೆ ಹುಬ್ಬಳ್ಳಿ ಮೂರು ಸಾವಿರ ಮಠ ಪ್ರಶಸ್ತಿ, ಆದರ್ಶ ಶಿಕ್ಷಕ ಪ್ರಶಸ್ತಿ, ಹರ್ಡೇಕರ್ ಮಂಜಪ್ಪ ಪ್ರಶಸ್ತಿ ಮುಂತಾದುವು ದೊರೆತಿವೆ.

**37. ಡಾ. ಎಚ್. ಕೆ. ಪಾಟೀಲ**



ಡಾ. ಎಚ್. ಕೆ. ಪಾಟೀಲ ಅವರು ಇಂದಿನ ರಾಜಕೀಯ ಕ್ಷೇತ್ರದ ಅತ್ಯಂತ ವಿಶಿಷ್ಟ ಹಾಗೂ ಆದರ್ಶಯುತ ವ್ಯಕ್ತಿತ್ವ ಹೊಂದಿದವರು. ಇವರು 1953 ಅಗಸ್ಟ್ 15ರಂದು ಹುಲಕೋಟಿ ಹುಲಿ ಎಂದು ಕರೆಯಲ್ಪಡುವ ಶ್ರೀ. ಕೃಷ್ಣಗೌಡ ಹನುಮಂತಗೌಡ ಪಾಟೀಲರ ಪುತ್ರನಾಗಿ ಜನಿಸಿದರು.

ಓರ್ವ ಉತ್ತಮವಾದ ರಾಜಕಾರಣಿ ಹೇಗಿರಬೇಕು ಎಂಬುದಕ್ಕೆ ಮಾದರಿಯಂತಿರುವ ಶುದ್ಧಹಸ್ತದ ಡಾ. ಎಚ್. ಕೆ. ಪಾಟೀಲ ಅವರು ಕರ್ನಾಟಕ ಘನ ಸರ್ಕಾರದಲ್ಲಿ ಜವಳಿ, ಜಲಸಂಪನ್ಮೂಲ, ಕೃಷಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಪ್ರಸ್ತುತ ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಚಿವರಾಗಿ ಜನಹಿತಕಾರ್ಯಗಳನ್ನು ಮುಂದುವರೆಸಿದ್ದಾರೆ.

ಡಾ. ಎಚ್. ಕೆ. ಪಾಟೀಲ ಅವರು ಪಂಚಾಯತ್ ರಾಜ್ ಇಲಾಖೆಯ ಸಚಿವರಾದಾಗ (2014–15ರಿಂದ2017–18ರವರೆಗೆ) ನಿರಂತರವಾಗಿ 4ವರ್ಷಗಳ ಕಾಲ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುವುದು ಅವರು ಇಲಾಖೆಯಲ್ಲಿ ಮಾಡಿದ ಸಾಧನೆಗೆ ಕೈಗನ್ನಡಿ. ಡಾ. ಎಚ್.ಕೆ.ಪಾಟೀಲ ಅವರು ರಾಜಕೀಯ ಚಟುವಟಿಕೆಯಲ್ಲಿ ಸಾಮಾನ್ಯವೆನಿಸಿದ ಕ್ರಿಯೆ–ಪ್ರತಿಕ್ರಿಯೆಗಳಿಗೆ ಮಾತಿನ ಮೂಲಕ ಸ್ಪಂದಿಸದೇ, ಬರವಣಿಗೆಯ ಮೂಲಕವೇ ಉತ್ತರಿಸುವುದರೊಂದಿಗೆ ಲೇಖಕರೂ ಆಗಿದ್ದಾರೆ.

ಡಾ. ಎಚ್. ಕೆ. ಪಾಟೀಲ ಅವರು ಒಟ್ಟು 6 ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಐದು ಕನ್ನಡ ಮತ್ತು ಒಂದು ಇಂಗ್ಲೀಷ್. ಕನ್ನಡದಲ್ಲಿ ಕೇಳಿ ಕೃಷ್ಣೆಯ ಕೂಗು, ಚಲುವ ಕನ್ನಡ ನಾಡು–ನನಸಾಗದ ಕನಸು, ಹೇಳಿದ್ದೇನು? ಮಾಡಿದ್ದೇನು?, ಕಾವೇರಿ–ಲೋಪಮುದ್ರೆ, ಊಳುವವನ ಊರುಗೋಲನ್ನು ಕಿತ್ತು ಉಳ್ಳವರಿಗೆ ಮತ್ತು ಕಾರ್ವಿಂಗ್ ಎ ಕ್ಯಾರಿಂಗ್ ಸಿಷ್ಟಮ್ ಎಂಬ ಇಂಗ್ಲೀಷ್ ಕೃತಿ ಅವರ ಸಾಹಿತ್ಯಿಕ ಕೊಡುಗೆಗಳು.

**38. ಮನು ಬಳಿಗಾರ**



ಬಹುಮುಖ ಸಾಧಕರಾದ ಮನು ಬಳಿಗಾರ ಅವರು ಹುಟ್ಟಿದ್ದು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಶಿಗ್ಲಿ ಗ್ರಾಮದಲ್ಲಿ. ಮನು ಬಳಿಗಾರ ಅವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ತಮ್ಮ ಗ್ರಾಮವಾದ ಶಿಗ್ಲಿಯಲ್ಲೇ ಪೂರೈಸಿದರು. ಕರ್ನಾಟಕದ ವಿವಿಧ ಇಲಾಖೆಗಳಲ್ಲಿ ದಕ್ಷ ಸೇವೆ ಸಲ್ಲಿಸಿರುವುದರ ಜೊತೆಗೆ ಸಾಹಿತಿಗಳಾಗಿಯೂ ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಇಪ್ಪತ್ತೈದನೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಮನು ಬಳಿಗಾರ ಅವರು ಕಥೆ, ಕಾವ್ಯ, ಲಲಿತ ಪ್ರಬಂಧ, ಸಂಪಾದನೆ, ನಾಟಕ, ಜೀವನ ಚರಿತ್ರೆ, ಅನುವಾದ ವಿವಿಧ ರೀತಿಯಲ್ಲಿ ಕೃಷಿ ಮಾಡಿರುವರು. ಅವ್ಯಕ್ತ, ಋಣ, ಬದುಕು ಮಾಯೆಯ ಮಾಟ, ದ ಡೆಥ್ ಅಂಡ್ ಅದರ್ ಸ್ಟೋರೀಸ್, ಕೆಲವು ಕತೆಗಳು ಮುಂತಾದವು ಅವರ ಕಥಾ ಸಂಕಲನಗಳು.

ಪ್ರಾಚೀನ ಕಾಲದಿಂದಲೂ ಗದಗ ಕನ್ನಡ ನಾಡಿಗೆ ಅಪಾರ ಕೊಡುಗೆಯನ್ನು ನೀಡಿದ ನೆಲೆ. ಇಂಥ ನೆಲೆಯಲ್ಲಿ ಕನ್ನಡವನ್ನು ಕಟ್ಟುಕಾರ್ಯ ನಿರಂತರವಾಗಿ ನಡೆದಿದೆ. ಈ ಕಾರ್ಯಕ್ಕೆ ಇಂದಿನ ಹಿರಿಯ ಮತ್ತು ಹೊಸ ತಲೆಮಾರಿನ ಅನೇಕ ಕವಿಗಳು ಮತ್ತು ಸಾಹಿತಿಗಳು ಕೊಡುಗೆಯನ್ನು ನೀಡಿದ್ದಾರೆ. ಅವರಲ್ಲಿ ಎಂ. ದಸ್ತಗೀರ, ಸಿ.ವಿ. ಕೆರಿಮನಿ, ಚಂದ್ರಶೇಖರ ವಸ್ತ್ರದ, ಕೆ. ಬಿ. ತಳಗೇರಿ, ಎಸ್. ಎಫ್. ಜಕಬಾಳ, ಶರಣಬಸವ ವೆಂಕಟಾಪೂರ, ಮಲ್ಲಿಕಾರ್ಜುನ ಕುಂಬಾರ, ಚಂದ್ರಶೇಖರ ವಸ್ತ್ರದ, ಅರ್ಜುನ ಗೊಳಸಂಗಿ, ಡಿ.ವಿ.ಬಡಿಗೇರ, ಕೆ. ಎನ್. ಬಳಿಗೇರ ವೈ. ಎಸ್. ಹರಗಿ, ನಿಂಗು ಸೊಲಗಿ, ಬಿ. ಆರ್. ಪೋಲಿಸ್‌ಪಾಟೀಲ, ಎ. ಎಸ್. ಮಕಾನದಾರ, ರಾಜೇಂದ್ರ ಗಡಾದ, ಶರಣು ಗೋಗೆರಿ, ಸಂಗಮೇಶ ತಮ್ಮಗೌಡರ, ಎಸ್. ಎಂ. ಕುರಿ, ವಿವೇಕಾನಂದಗೌಡ ಪಾಟೀಲ, ಮಂಜುನಾಥ ಬಮ್ಮನಕಟ್ಟಿ, ಟಿ. ಎಸ್. ಗೊರವರ, ವೀರಣ್ಣ ಮಡಿವಾಳರ, ರಮೇಶ ಮ. ಕಲ್ಲನಗೌಡರ, ಅಂದಯ್ಯ ಅರವಟಿಗಿಮಠ, ಶರಣಪ್ಪ ಸಂಗನಾಳ, ಸಿದ್ದು ಸತ್ಯಣ್ಣವರ, ಶಿಲ್ಪಾ ಮ್ಯಾಗೇರಿ, ಶಕುಂತಲಾ ಸಿಂಧೂರ, ಪ್ರಭು ಗಂಜಿಹಾಳ ಇನ್ನೂ ಮೊದಲಾದವರು ಪ್ರಮುಖರಾಗಿದ್ದಾರೆ.

---

### ಗಜೇಂದ್ರಗಡದಲ್ಲಿ ಮೊಳಗಿದ ಕನ್ನಡ ಕಹಳೆ

# ವಿವಿಧೆಡೆ ಕನ್ನಡ ರಾಜ್ಯೋತ್ಸವ



■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ತಾಲೂಕು ಪಂಚಾಯಿತಿ ಕಾರ್ಯಾಲಯ, ತಹಸೀಲ್ದಾರ್ ಕಚೇರಿ, ಪುರಸಭೆ ಹಾಗೂ ವಿವಿಧ ಕನ್ನಡಪರ ಸಂಘಟನೆಗಳಿಂದ ಬುಧವಾರ 68ನೇ ಕನ್ನಡ ರಾಜ್ಯೋತ್ಸವ ಅದ್ಧೂರಿಯಾಗಿ ನಡೆಯಿತು. ತಾ.ಪಂ ಕಾರ್ಯಾಲಯದ ಆವರಣದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ತಾಯಿ ಭುವನೇಶ್ವರಿ ದೇವಿಯ ಭಾವಚಿತ್ರಕ್ಕೆ ತಾ.ಪಂ ಇಒ ಡಾ. ಡಿ.ಮೋಹನ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ಬಸವರಾಜ ಬಡಿಗೇರ, ಸಿ.ಬಿ ಮಳಗಿ, ವಸಂತ ಅನ್ವರಿ, ರಾಜು ಗಾರಗಿ, ಸಿದ್ದು ಗುಡಮನಿ, ಮಲ್ಲಿಕಾರ್ಜುನ ಸರಗಣಾಚಾರಿಮಠ, ಚನ್ನಮೋಹನ ಪಮ್ಮಾರ, ಗೀತಾ ಬಳಗೇರಿ ಇದ್ದರು.

ಪುರಸಭೆ: ಪುರಸಭೆ ಕಾರ್ಯಾಲಯದ ಅವರಣದಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ ಪೂಜೆ ಸಲ್ಲಿಸಿದರು. ಕರವೇ ಮುಖಂಡ ಎಚ್.ಎಸ್ ಸೋಂಪುರ, ಹಂಗಾಮಿ ಅಧ್ಯಕ್ಷ ವೀರಪ್ಪ ಪಟ್ಟಣಶೆಟ್ಟಿ, ಪುರಸಭೆ ಪ್ರಭಾರಿ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ಸದಸ್ಯರಾದ ರೂಪ್ಲೇಶ ರಾಠೋಡ, ವೆಂಕಟೇಶ ಮುದಗಲ್, ಮುದಿಯಪ್ಪ ಮುಧೋಳ, ಲೀಲಾ ಸವಣೂರ, ಲಕ್ಷ್ಮೀ ಮುಧೋಳ, ವಿಜಯಾ ಮಳಗಿ, ರಾಜು ಸಾಂಗ್ಲೀಕರ, ಶಿವರಾಜ ಘೋರ್ಪಡೆ, ಮುರ್ತುಜಾ ಡಾಲಾಯತ್, ಸಿ.ಡಿ ದೊಡ್ಡಮನಿ, ಮಲ್ಲಿಕಾರ್ಜುನಯ್ಯ, ರಾಘವೇಂದ್ರ ಮಂತಾದವರಿದ್ದರು.

ಸಿಬಿಎಸ್‌ಸಿ ಕಾಲೇಜು: ಜ. ತೋಂಟದಾರ್ಯ ಮಹಾ ವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವ ಸಂಭ್ರಮದಿಂದ ನಡೆಯಿತು. ಕಾರ್ಯಕ್ರಮದಲ್ಲಿ ಪ್ರಾಚಾರ್ಯೆ ಕವಿತಾ ಪಾಟೀಲ, ಸಂಗಮೇಶ ಬಾಗೂರ, ಉಪನ್ಯಾಸಕರಾದ ವೀರೇಶ ಅಂಗಡಿ, ಕಲಾಶ್ರೀ ಎಚ್, ಅಶೋಕ ಅಂಗಡಿ, ಉತ್ತಪ್ಪ ಮಾರನಬಸರಿ, ಮಲ್ಲನಗೌಡ ಗೌಡರ ಇದ್ದರು.

ಬಿಜೆಪಿ ಕಾರ್ಯಾಲಯ: ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವದಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ರಾಜೇಂದ್ರ ಘೋರ್ಪಡೆ ಪುಷ್ಪಾರ್ಚನೆ ಸಲ್ಲಿಸಿದರು. ಪುರಸಭೆ ಹಂಗಾಮಿ ಅಧ್ಯಕ್ಷ ವೀರಪ್ಪ ಪಟ್ಟಣಶೆಟ್ಟಿ, ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ, ಸದಸ್ಯರಾದ ರೂಪೇಶ ರಾಠೋಡ, ಮುದಿಯಪ್ಪ ಮುಧೋಳ, ಉಮೇಶ ಚನ್ನುಪಾಟೀಲ, ಸಿದ್ದಣ್ಣ ಚೋಳಿನ ಮುಂತಾದವರಿದ್ದರು.

**ಬಸ್ ನಿಲ್ದಾಣದಲ್ಲಿ**

ಪಟ್ಟಣದ ಬಿಸ್ ನಿಲ್ದಾಣ ಮುಂಭಾಗದಲ್ಲಿ ಜಯ ಕರ್ನಾಟಕ ಸಂಘಟನೆಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಟಕ್ಕೇದ ದರ್ಗಾದ ಸೈಯದ್ ನಿಜಾಮುದ್ದೀನಶಾ ಮಕಾನದಾರ, ಡಾ.ಅಬ್ದುಲ್‌ಕಲಾಂ ಟ್ರಸ್ಟ್ ಅಧ್ಯಕ್ಷ ರಫೀಕ್ ತೋರಗಲ್, ರೋಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಶೆಟ್ಟರ, ಕಳಕಪ್ಪ ಪೋತಾ ಮುಂತಾದವರಿದ್ದರು.

ಕೆಕೆ ವೃತ್ತ: ಕೆಕೆ ವೃತ್ತದಲ್ಲಿ ಕರವೇ ವತಿಯಿಂದ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು. ಸಂಘಟನೆಯ ಎಚ್.ಎಸ್ ಸೋಂಪುರ, ಪುರಸಭೆ ಸದಸ್ಯ ರಾಜು ಸಾಂಗ್ಲೀಕರ, ಪ್ರಮುಖರಾದ ಮುರ್ತುಜಾ ಡಾಲಾಯತ, ವೆಂಕಟೇಶ ಮುದಗಲ್, ಎಂ.ಎಸ್ ಹಡಪದ, ಶಶಿಧರ ಹೂಗಾರ, ಉಮೇಶ ರಾಠೋಡ, ರವಿ ಗಡೇದವರ, ವೀರೇಶ ಸಂಗಮದ ಮುಂತಾದವರಿದ್ದರು.

---

### 'ಭ್ರಷ್ಟಾಚಾರದ ವಿರುದ್ಧ ಜಾಗೃತಿ ಅರಿವು ಸಪ್ತಾಹ'ದಲ್ಲಿ ಡಿವಿಎಸ್‌ಪಿ ವಿಜಯ ಬಿರಾದಾರ

# ಭ್ರಷ್ಟಾಚಾರದ ವಿರುದ್ಧ ಲಿಖಿತ ದೂರು ದಾಖಲಿಸಿ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಜಿಲ್ಲೆಯ ಸರಕಾರಿ ಕಚೇರಿಗಳಲ್ಲಿ ನಿಮ್ಮ ಯಾವುದೇ ಕಾನೂನುಬದ್ಧ ಕೆಲಸ ಮಾಡಿಕೊಡುವಲ್ಲಿ ವಿಳಂಬ ಮಾಡುತ್ತಿದ್ದಲ್ಲಿ, ಯಾವುದೇ ಬೇಡಿಕೆ ಇಟ್ಟಲ್ಲಿ ಹಾಗೂ ಯಾವುದೇ ಕಾಮಗಾರಿಗಳಲ್ಲಿ ಅಕ್ರಮ ವ್ಯವಹಾರ ನಡೆದಿದ್ದಲ್ಲಿ ಗದಗ ಲೋಕಾಯುಕ್ತ ಠಾಣೆಗೆ ತಕ್ಷಣವೇ ಲಿಖಿತ ದೂರು ದಾಖಲಿಸಬಹುದು ಎಂದು ಗದಗ ಲೋಕಾಯುಕ್ತ ಡಿಎಸ್‌ಪಿ ವಿಜಯ ಬಿರಾದಾರ ಹೇಳಿದರು.

ಅವರು ಗುರುವಾರ ಶಿರಹಟ್ಟಿಯ ಶ್ರೀ ಜ.ಫ. ಸರಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ 'ಭ್ರಷ್ಟಾಚಾರದ ವಿರುದ್ಧ ಜಾಗೃತಿ ಅರಿವು ಸಪ್ತಾಹ' ಕಾರ್ಯಕ್ರಮದಲ್ಲಿ ಮಾತನಾಡಿದರು.

ಪದವಿ ಹಂತದಲ್ಲಿಯ ವಿದ್ಯಾರ್ಥಿಗಳು ತಿಳುವಳಿಕೆ ಹೊಂದಿದ್ದರಿಂದ ಇಂತಹ ಅರಿವು ಕಾರ್ಯಕ್ರಮವನ್ನು ಕಾಲೇಜಿನಲ್ಲಿ ಮಾಡಲಾಗುತ್ತಿದೆ. ವಿದ್ಯಾರ್ಥಿಗಳು ಈ ಬಗ್ಗೆ ತಿಳಿದುಕೊಂಡು ತಮ್ಮ ನೆರೆಹೊರೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದರೆ ತಮಗೆ ತಕ್ಷಣವೇ ಮಾಹಿತಿ ನೀಡಬೇಕು. ಸದೃಢ ಸಮಾಜ ನಿರ್ಮಾಣವಾಗಬೇಕಾದರೆ ನಿಮ್ಮ ಪಾತ್ರ ಬಹಳ ದೊಡ್ಡದು. ಆದ್ದರಿಂದ ಈ ಹಂತದಿಂದಲೇ ತಾವು ಭ್ರಷ್ಟಾಚಾರದ ಬಗ್ಗೆ ಅರ್ಥೈಸಿಕೊಂಡು ಉತ್ತಮ ನಾಗರಿಕರ ಜವಾಬ್ದಾರಿಯನ್ನು ನಿಭಾಯಿಸಬೇಕೆಂದು ಹೇಳಿದರು.

ವಿದ್ಯಾರ್ಥಿಗಳಿಂದ ಭ್ರಷ್ಟಾಚಾರ ನಿರ್ಮೂಲನೆಗಾಗಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಭ್ರಷ್ಟಾಚಾರದ ಬಗ್ಗೆ ವಿದ್ಯಾರ್ಥಿಗಳೊಂದಿಗಿನ ಚರ್ಚೆಯಲ್ಲಿ ತಮಗೆ ಸಮರ್ಪಕ ಬಸ್ ವ್ಯವಸ್ಥೆ ಇಲ್ಲದೇ ಇರುವ ಬಗ್ಗೆ, ಪರಸಾಪೂರ ಗ್ರಾಮದಲ್ಲಿ ಸಾರಾಯಿ ನಿಷೇಧದ ಕುರಿತು, ಮಹಿಳಾ ವಸತಿ ನಿಲಯ ಪ್ರಾರಂಭವಾಗದೇ ಇರುವ ಬಗ್ಗೆ, ನೆಟ್ ಸೆಂಟರ್‌ಗಳಲ್ಲಿ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವುದನ್ನು ವಿಜಯ ಬಿರಾದಾರ ಅವರ ಗಮನಕ್ಕೆ ತಂದಾಗ, ಈ ಎಲ್ಲಾ ಸಮಸ್ಯೆಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ತಮ್ಮ ಕಚೇರಿಯಿಂದ ಪತ್ರ ಬರೆಯಲಾಗುವುದು ಎಂದು ಭರವಸೆ ನೀಡಿದರು.

ಲೋಕಾಯುಕ್ತ ಇನ್ಸ್‌ಪೆಕ್ಟರ್ ರವಿ ಪುರುಷೋತ್ತಮ, ಕಾಲೇಜಿನ ಪ್ರಾಚಾರ್ಯ ಉಮೇಶ ಅರಹುಣಸಿ, ಶಂಕರ ಬಾರಕೇರ, ಫಕ್ಕೀರೇಶ ಜಾಲಿಹಾಳ, ಜಯಪ್ರಕಾಶ ವನಹಳ್ಳಿ, ಶಂಕರ ಪೂಜಾರ, ಕವಿತಾ ಮುಗಳಿ, ಸಂತೋಷ ಮೂರಶಿಳ್ಳಿ, ಹನಮಂತ ತಳ್ಳಳ್ಳಿ, ರಾಜು ನಾಯಕ ಮುಂತಾದವರು ಉಪಸ್ಥಿತರಿದ್ದರು.

---

# ಇಂದಿನ ಸಾಂಸ್ಕೃತಿಕ ಕಾರ್ಯಕ್ರಮಗಳು



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆಯಿಂದ ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವದ ಕರ್ನಾಟಕ ಸಂಭ್ರಮ–50 ಸಮಾರಂಭವನ್ನು ನವೆಂಬರ್ 1, 2 ಮತ್ತು 3ರಂದು ನಗರದ ದಿ. ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಆಚರಿಸಲಾಗುತ್ತಿದೆ. ನವೆಂಬರ್ 3 ರಂದು ಸಂಜೆ 6 ಗಂಟೆಗೆ ಪದ್ಮಶ್ರೀ ವೆಂಕಟೇಶಕುಮಾರ್ ಅವರಿಂದ ಹಿಂದೂಸ್ಥಾನಿ ಸಂಗೀತ , ಬೀಟ್ ಗುರೂಸ್ ತಂಡದವರಿಂದ ವಾದ್ಯ ಸಂಗೀತ, ಪ್ರಭಾತ್ ಕಲಾ ತಂಡದವರಿಂದ ಕರ್ನಾಟಕ ವೈಭವ ರೂಪಕ, ಖ್ಯಾತ ಹಿನ್ನೆಲೆ ಗಾಯಕ ವಿಜಯ ಪ್ರಕಾಶ ಅವರಿಂದ ಸಂಗೀತ ಕಾರ್ಯಕ್ರಮಗಳು ಜರುಗಲಿವೆ.

# ಸಾರ್ವಜನಿಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ನವೆಂಬರ್ 3 ರಂದು ಕರ್ನಾಟಕ ಸಂಭ್ರಮ 50 ರ ಸಮಾರಂಭಕ್ಕೆ ಪ್ರಾಸಂಗಿಕ ಕರಾರಿನ ಮೇಲೆ 200 ವಾಹನಗಳನ್ನು ಗದಗ ಜಿಲ್ಲೆಯ ಸುತ್ತಮುತ್ತಲಿನ ತಾಲೂಕು ಹಾಗೂ ಗ್ರಾಮಗಳ ಸಾರ್ವಜನಿಕರಿಗೆ ಸದರಿ ಕಾರ್ಯಕ್ರಮದ ವೀಕ್ಷಣೆಗೆ ಅನುಕೂಲವಾಗುವಂತೆ ನೀಡಲಾಗುತ್ತಿದೆ, ನವೆಂಬರ್ 3 ರಂದು ವಾಹನಗಳ ಕಾರ್ಯಾಚರಣೆ ಕಡಿಮೆಯಾಗುವಂತಹ ಸಾಧ್ಯತೆಗಳು ಹೆಚ್ಚಾಗಿದ್ದು, ಸದರಿ ದಿನದಂದು ಬಸ್ ನಿಲ್ದಾಣಗಳಿಂದ ಸುತ್ತ–ಮುತ್ತಲಿನ ಗ್ರಾಮ ಹಾಗೂ ನಗರಗಳಿಗೆ ಪ್ರತಿ–ನಿತ್ಯ ಕಾರ್ಯಾಚರಣೆಯಾಗುವ ವಾಹನಗಳ ಸಂಖ್ಯೆ ಕಡಿಮೆಯಾಗುವ ಸಾಧ್ಯತೆಗಳು ಹೆಚ್ಚಾಗಿದ್ದು ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ ಕಾಲೇಜ್ ವಿದ್ಯಾರ್ಥಿಗಳು ಸಹಕರಿಸಬೇಕೆಂದು ವಾ.ಕ. ರ.ಸಾ.ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗದಗ ಬೆಟಗೇರಿ; ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ನವೆಂಬರ್ 3 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 30, 35 1ನೇ ಕ್ರಾಸ್ ಡಿಪೋ ಹಿಂದಿನ ಭಾಗ– ಮೇಲಿನ ಭಾಗ, ಆದರ್ಶ ನಗರ, ಈಶ್ವರ ಗುಡಿ, ಮಾರುತಿ ದೇವಸ್ಥಾನ, ಸಚ್ಚಿದಾನಂದ ಮಠ, ದೊಡ್ಡಮನಿ ಸರ್ ಲೈನ್, ಸಿದ್ದು ಪಾಟೀಲ್ ಲೈನ್, ಹೂಲಿ ಅವರ ಲೈನ್. ವಾರ್ಡ್ ನಂ. 22 ಗಂಗಿಮಡಿ ಮಸೂತಿ ಮೇಲಿನ ಭಾಗ–ಕೆಳಗಿನ ಭಾಗ, ಕನ್ನಡ ಶಾಲೆ, ಲೀಡ್ಕರ್ ಬಡಾವಣೆ, ಶುದ್ಧ ನೀರಿನ ಘಟಕ, ವಾರ್ಡ್ ನಂ. 27, 28 ಸ್ಟೇಡಿಯಂ ಕುರಡಗಿಯವರ ಲೈನ್, ನಂದೀಶ್ವರ ಮಠ ಹಿಂದಿನ ಭಾಗ, ಸಜ್ಜನ್ ಕುಲಕರ್ಣಿ ಲೈನ್, ರೊಟ್ಟಿ ಲೇಔಟ್, ಕೊಪ್ಪದರ ಲೈನ್ ಜಿಎಸ್ ಪಾಟೀಲ್ ಲೈನ್, ನಾಗರಕಟ್ಟಿ ಲೈನ್, ಹೊಸಮನಿ ಸರ್ ಲೈನ್, ವಾರ್ಡ್ ನಂ. 5, 6 ಸಿದ್ದಲಿಂಗನಗರ, ರೊಟ್ಟಿ ಅವರ ಲೈನ್, ನಾವಳ್ಳಿಯವರ ಲೈನ್, ಒಕ್ಕಲಗೇರಿ ಕಿಲ್ಲಾ ಓಣಿ, ಭಜಂತ್ರಿ ಓಣಿ, ಅಂಬೇಡ್ಕರ್ ನಗರ, ಹೂಲಿ ಅವರ ಲೈನ್, ಗಾರ್ಗಿಪೇಟೆ, ನದಾಫ್ ಗಲ್ಲಿ ಕೆಲವು ಉಳಿದ ಭಾಗಗಳು. ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

### ಕರ್ನಾಟಕ ಸಂಭ್ರಮ–50:

# ಕರ್ನಾಟಕ ಸುವರ್ಣ ಸ್ತಂಭಕ್ಕೆ ಪೂಜೆ ಸಲ್ಲಿಸಿದ ಸಚಿವ ಪಾಟೀಲ





■ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರು ರಾಜ್ಯ ನಾಮಕರಣಗೊಂಡು 50 ವರ್ಷ ಪೂರೈಸುತ್ತಿರುವ ಹಿನ್ನಲೆಯಲ್ಲಿ ಗದಗ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಐತಿಹಾಸಿಕ ಕಾರ್ಯಕ್ರಮವನ್ನು ಮರುಸೃಷ್ಟಿಸಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಕರ್ನಾಟಕ ನಾಮಕರಣಗೊಂಡು 50 ವರ್ಷಗಳ ಸವಿನೆನಪಿಗಾಗಿ ಗದಗ ನಗರದ ಭೂಮರಡ್ಡಿ ವೃತ್ತದಲ್ಲಿ ನಿರ್ಮಿಸಲಾದ 31 ಅಡಿ ಎತ್ತರದ ಕರ್ನಾಟಕ ಸುವರ್ಣ ಸ್ಥಂಭಕ್ಕೆ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ರೋಣ ಶಾಸಕರಾದ ಜಿ.ಎಸ್.ಪಾಟೀಲ, ಗದಗ–ಬೆಟಗೇರಿ ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡರ, ಯುವ ಜನಸೇವಾ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ, ಜನಪ್ರತಿನಿಧಿಗಳು, ಗಣ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು.

---

### ಆರ್.ಡಿ.ಪಿ.ಆರ್. ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಾಣಗೊಳ್ಳಲಿರುವ ಅಧ್ಯಯನ ಶಾಲೆ–2(ಹಂತ–1)

# ಇಂದು ಮುಖ್ಯಮಂತ್ರಿ ಸಿದ್ಧರಾಮಯ್ಯರಿಂದ ಶಂಕುಸ್ಥಾಪನೆ

ಅತಿಥಿಗಳಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್, ಪ್ರಧಾನ ಕಾರ್ಯದರ್ಶಿ ಅಂಜುಮ್ ಪರ್ವೆಜ್, ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತರಾದ ಸಿ. ಶಿಖಾ ಆಗಮಿಸುವರು. ವಿಶ್ವವಿದ್ಯಾಲಯದ ಕೆ.ಎಸ್.ಆರ್.ಡಿ.ಪಿ.ಆರ್. ಕುಲಪತಿ ಪ್ರೊ. ವಿಷ್ಣುಕಾಂತ ಚಟಪಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಲಿರುವ ಅಧ್ಯಯನ ಶಾಲೆ–2 (ಹಂತ–1) ಕಟ್ಟಡದ ಶಂಕುಸ್ಥಾಪನೆ ಸಮಾರಂಭವನ್ನು ನವೆಂಬರ್ 3ರಂದು ಮಧ್ಯಾಹ್ನ 2 ಗಂಟೆಗೆ ನಾಗಾವಿಯ ಆರ್.ಡಿ.ಪಿ.ಆರ್. ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಶಂಕುಸ್ಥಾಪನೆ ನೆರವೇರಿಸುವರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ, ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಐಟಿ ಮತ್ತು ಬಿಟಿ ಇಲಾಖೆ ಸಚಿವರು ಹಾಗೂ ಕ.ರಾ.ಗ್ರಾ. ಮತ್ತು ಪಂ.ರಾ. ವಿಶ್ವವಿದ್ಯಾಲಯದ ಸಹ ಕುಲಾಧಿಪತಿಗಳಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರಾದ ಶಿವಕುಮಾರ ಉದಾಸಿ, ಪಿ.ಸಿ. ಗದ್ದಿಗೌಡರ, ವಿಧಾನಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ನರಗುಂದ ಶಾಸಕ ಸಿ.ಸಿ. ಪಾಟೀಲ, ರೋಣ ಶಾಸಕ ಜಿ.ಎಸ್. ಪಾಟೀಲ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ಗದಗ–ಬೆಟಗೇರಿ ನಗರಸಭಾಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ಕಳಸಾಪುರ ಗ್ರಾ.ಪಂ ಅಧ್ಯಕ್ಷೆ ಅನುಸೂಯಾ ಬೆಟಗೇರಿ, ಅಸುಂಡಿ ಗ್ರಾ.ಪಂ ಅಧ್ಯಕ್ಷರಾದ ತಾಜುದ್ದೀನ ಓಲೇಕಾರ, ನಾಗಾವಿ ಗ್ರಾ.ಪಂ ಅಧ್ಯಕ್ಷ ಕುಬೇರಪ್ಪ ರಾಠೋಡ ಆಗಮಿಸುವರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ವಿಶೇಷ ಆಹ್ವಾನಿತರಾಗಿ ಆಗಮಿಸುವರು. ಕೆ.ಎಸ್. ಆರ್.ಡಿ.ಪಿ.ಆರ್ ವಿ.ವಿ. ಕುಲಸಚಿವ ಪ್ರೊ. ಬಸವರಾಜ.ಎಲ್. ಲಕ್ಕಣ್ಣವರ, ಹಣಕಾಸು ಅಧಿಕಾರಿ ಪ್ರಶಾಂತ ಜೆ.ಸಿ. ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ಶಿಕ್ಷಕರ ಹುದ್ದೆ ಅತ್ಯಂತ ಪವಿತ್ರವಾದದ್ದು



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಶಿಕ್ಷಕರ ಹುದ್ದೆ ಅತ್ಯಂತ ಪವಿತ್ರವಾದ ಹುದ್ದೆಯಾಗಿದೆ ಎಂದು ಶಿಕ್ಷಕಿ ರೇಣುಕಾ ದುರಗಾರ ಹೇಳಿದರು.

ಅವರು ಪಟ್ಟಣದ ಅಂಗನವಾಡಿ ಸಂಖ್ಯೆ 135ರಲ್ಲಿ ತಮ್ಮ ಸೇವಾ ನಿವೃತ್ತಿ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಸಮಾಜದಲ್ಲಿ ಉತ್ತಮ ಗೌರವ ದೊರೆಯಬೇಕಾದಲ್ಲಿ ನಮ್ಮ ಸೇವಾ ಅವಧಿಯಲ್ಲಿ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದರೆ ಮಾತ್ರ ಅದಕ್ಕೆ ಪಾವಿತ್ರ್ಯತೆ ಹೆಚ್ಚುತ್ತದೆ. ನನ್ನ ಸೇವಾ ಅವಧಿ ನನಗೆ ಸಂತಸ ನೀಡಿದೆ ಎಂದರು.

ಶಿಶು ಅಭಿವೃದ್ಧಿ ಮೇಲ್ವಿಚಾರಕಿ ಗೀತಾ ದ್ಯಾಮನಗೌಡರ, ಶಿಕ್ಷಕಿಯರಾದ ಶೋಭಾ ಆರಾಧ್ಯಮಠ, ಪುಷ್ಪಾ ಮಾದಮ್ಮನವರ, ಎಂ.ಎಂ ಅಬ್ಬುನವರ, ಎಂ.ಜಿ ತಡೆದಮಠ, ವನಿತಾ ಬಸಾಪೂರ, ಸವಿತಾ ಡುಮ್ಮಿ, ಐ.ಐ ಚಿಂಚಲಿ, ಶಿಲ್ಪಾ ಚಕ್ರಸಾಲಿ, ಶರಣವ್ವ ಕಾಳೆ, ವಿನೋದಾ ಕುರಂದವಾಡ, ನೀಲವ್ವ ಗಡಾದ, ಬಶೀರಾ ಕಮತಗಿ, ಶಕೀಲಾ ಮುಜಾವಾರ, ಸಾವಿತ್ರಿ ಅಳಗವಾಡಿ, ಸರಸ್ವತಿ ದೊಡ್ಡಮನಿ ಹಾಗೂ ಅಂಗನವಾಡಿ ಸಹಾಯಕಿಯರು ಇದ್ದರು.

## ಶಿಕ್ಷಕ ನಟನಾದಾಗ ಮಾತ್ರ ಮಕ್ಕಳ ಮನಸ್ಸು ಗೆಲ್ಲಲು ಸಾಧ್ಯ



■ವಿಜಯಸಾಕ್ಷಿ ಸುದ್ದಿ, ರೋಣ

ಶಿಕ್ಷಕರು ನಟನೆಯ ಮೂಲಕ ಅಕ್ಷರ ಜ್ಞಾನ ನೀಡಿದಾಗ ಮಾತ್ರ ಮಕ್ಕಳ ಮನಸ್ಸು ಗೆಲ್ಲಲು ಸಾಧ್ಯ ಎಂಬುದನ್ನು ಪ್ರಶಿಕ್ಷಣಾರ್ಥಿಗಳು ತಿಳಿದುಕೊಳ್ಳಬೇಕು ಎಂದು ನಿವೃತ್ತ ಪ್ರಾಧ್ಯಾಪಕ ಹಾಗೂ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾದ ಮಾಲತಿ ಪಟ್ಟಣಶೆಟ್ಟಿ ಹೇಳಿದರು.

ಅವರು ಮಂಗಳವಾರ ಪಟ್ಟಣದ ಆರ್‌ಜಿಎಸ್ ಶಿಕ್ಷಣ ಸಂಸ್ಥೆಯ ಬಿಇಡಿ ಮಹಾವಿದ್ಯಾಲಯದಲ್ಲಿ ಜರುಗಿದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ದೀಪದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು ಎಂಬುದನ್ನು ಸಮಾಜ ಅರಿತುಕೊಂಡಿರುವ ಹಿನ್ನೆಲೆಯಲ್ಲಿ ಗುರುವಿಗೆ ಸಮಾಜದಲ್ಲಿ ಗೌರವದ ಸ್ಥಾನ ಸಿಕ್ಕಿದೆ. ಶಿಕ್ಷಕ ವೃತ್ತಿಗೆ ಹೋಗಬೇಕಿರುವ ಪ್ರಶಿಕ್ಷಣಾರ್ಥಿಗಳಲ್ಲಿ ತಪಸ್ಸಿನ ಮನೋಬಲ ಇರಬೇಕು. ಅಂದಾಗ ಮಾತ್ರ ಗುರು-ಶಿಷ್ಯರ ಹೃದಯದಲ್ಲಿ ತಳವೂರಲು ಸಾಧ್ಯವಾಗುತ್ತದೆ ಎಂದ ಅವರು, ಬರಿಯ ಶಿಕ್ಷಕನಂತೆ ಕಾರ್ಯನಿರ್ವಹಿಸುವ ಬದಲು ಶಾಲೆಗೆ ಬರುವ ಮಕ್ಕಳಲ್ಲಿ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸುತ್ತೇನೆ ಎಂಬ ಇಚ್ಛೆ ಶಿಕ್ಷಕನದ್ದಾಗಬೇಕು ಎಂದರು.

ಧಾರವಾಡದ ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಮಾತನಾಡಿ, ಮಕ್ಕಳನ್ನು ಅಕ್ಷರ ಜ್ಞಾನದತ್ತ ಸೆಳೆಯಲು ಚುಟುಕು ಪದ್ಯಗಳ ಸಹಕರಿಸುತ್ತವೆ ಎಂಬುದನ್ನು ಪ್ರಶಿಕ್ಷಣಾರ್ಥಿಗಳು ಅರಿಯುವುದು ಅವಶ್ಯಕವಾಗಿದೆ ಎಂದರು. ಡಾ. ಕೆ.ಬಿ ಧನ್ನೂರ, ಬಿ.ಎಸ್ ಶಿರೋಳ, ಬಿ.ಎಫ್ ಚೇಗರೆಡ್ಡಿ, ವಾಯ್. ಎನ್ ಪಾಪಣ್ಣವರ ಸೇರಿದಂತೆ ಶಿಕ್ಷಕರು ಉಪಸ್ಥಿತರಿದ್ದರು.

### ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಶ್ರೀಗಳು

# ವಚನ ಸಾಹಿತ್ಯ ಕನ್ನಡದ ಘನತೆ ಹೆಚ್ಚಿಸಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ಬಸವಾದಿ ಶಿವಶರಣರು ತಮ್ಮ ಅಮೂಲ್ಯವಾಗಿರುವ ವಚನ ಸಾಹಿತ್ಯವನ್ನು ಕಲ್ಪಿಸಿರುವುದೇ ಕನ್ನಡ ಭಾಷೆಯಲ್ಲಿ. ವಚನ ಸಾಹಿತ್ಯ ಕನ್ನಡ ಸಾಹಿತ್ಯದ ವಿಶೇಷ ಪ್ರಕಾರವಾಗಿದ್ದು, ಕನ್ನಡ ಸಾಹಿತ್ಯಕ್ಕೆ ಘನತೆ-ಗೌರವವನ್ನು ತಂದುಕೊಟ್ಟ ಸಾಹಿತ್ಯವಾಗಿದೆ ಎಂದು ಪೂಜ್ಯ ಡಾ. ತೋಂಟದ ಸಿದ್ಧರಾಮ ಶ್ರೀಗಳು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2665ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಕನ್ನಡ ನಮ್ಮ ಮಾತೃ ಭಾಷೆ. ಕನ್ನಡ ಭಾಷೆಗೆ 2000 ವರ್ಷಗಳ ಇತಿಹಾಸ ಇದೆ. ಕರ್ನಾಟಕಕ್ಕೆ ಮೊದಲಿಗೆ ಮೈಸೂರು ರಾಜ್ಯ ಎಂದು ಹೆಸರಿತ್ತು. ಡಿ. ದೇವರಾಜ ಅರಸರು 1973ರಲ್ಲಿ ಮೈಸೂರು ಹೆಸರನ್ನು ಬದಲಿಸಿ ಕರ್ನಾಟಕ ರಾಜ್ಯ ಎಂದು ಪುನರ್‌ನಾಮಕರಣ ಮಾಡಿದರು. ನಮ್ಮದೇ ಆದ ಸಂಸ್ಕೃತಿ, ಭಾಷೆ ಇದ್ದು, ಆ ಸಂಸ್ಕೃತಿಯಲ್ಲಿ ಬದುಕಬೇಕಾದರೆ, ಉಳಿಯಬೇಕಾದರೆ, ಬೆಳೆಯಬೇಕಾದರೆ ನಮ್ಮ ಭಾಷೆ ಬಹಳ ಮುಖ್ಯ. ಕರ್ನಾಟಕ ರಾಜ್ಯ ನಾಮಕರಣವಾಗಿ 50 ವರ್ಷ ಪೂರೈಸಿ ಸುವರ್ಣ ಸಂಭ್ರಮವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ನಮ್ಮೆಲ್ಲರ ಉಸಿರು ಕನ್ನಡವಾಗಬೇಕು.



ಹೆಸರಾಂತ ಸಾಹಿತಿ ಅಲ್ಲಮಪ್ರಭು ಬೆಟದೂರ ಉಪನ್ಯಾಸ ನೀಡಿ, ಪರರ ವಿಚಾರಗಳನ್ನು, ಪರರ ಧರ್ಮಗಳನ್ನು ಸಹಿಸಿಕೊಳ್ಳಬೇಕು. ಕನ್ನಡ ನಾಡಿನ ಮೂಲಗುಣ ತಾಳ್ಮೆ ಮತ್ತು ಮಾನವೀಯತೆ. ಹುಟ್ಟಿನೊಂದಿಗೆ ಬರುವ ಕುಲವು ಕುಲವಲ್ಲ. ನಿಜವಾದ ಕುಲ ಛಲ, ಒಳ್ಳೆಯ ಗುಣವು ಕುಲ, ಪ್ರೀತಿಯು ಕುಲ, ಎಲ್ಲಕ್ಕಿಂತ ಮಿಗಿಲಾದದ್ದು ಸ್ವಾಭಿಮಾನ. ಪ್ರಸ್ತುತ ಕನ್ನಡಿಗರು ಸ್ವಾಭಿಮಾನವನ್ನು ಕಳೆದುಕೊಂಡಿದ್ದಾರೆ. ಯಾಕೆಂದರೆ ಕನ್ನಡ ಭಾಷೆಯ ಮೇಲೆ ಪ್ರೀತಿ, ಮಮಕಾರ ಕಡಿಮೆ ಆಗುತ್ತಿದೆ. ಜಾಗತೀಕರಣದಿಂದ ಇಂಗ್ಲೀಷ್ ಭಾಷೆಗೆ ಇನ್ನಿಲ್ಲದ ಪ್ರಾಧಾನ್ಯತೆ ದೊರಕಿದೆ. ಕನ್ನಡ ಶಾಲೆಗಳ ಸಂಖ್ಯೆ ಕಡಿಮೆಯಾಗಿ ಆಂಗ್ಲ ಮಾಧ್ಯಮ ಶಾಲೆಗಳ ಸಂಖ್ಯೆ ಅಧಿಕವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕನ್ನಡ ಭಾಷೆ ಐತಿಹಾಸಿಕ ಚರಿತ್ರೆಯನ್ನು ಹೊಂದಿದ್ದು, ಕನ್ನಡ ಭಾಷೆ ಸೋಗಸಾಗಿದೆ, ವೈವಿಧ್ಯಮಯವಾಗಿದೆ. ಶರಣರದು ಬಹಳ ದೊಡ್ಡ ವ್ಯಕ್ತಿತ್ವ. ಶರಣರು ಕನ್ನಡ ಭಾಷೆಯನ್ನು ದೇವಭಾಷೆಯನ್ನಾಗಿ ಮಾಡಿದರು. ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸ, ಕುವೆಂಪು ಅನೇಕ ಕವಿಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಐತಿಹಾಸಿಕ ಕೊಡುಗೆಗಳನ್ನು ಸವಿವರವಾಗಿ ತಿಳಿಸಿಕೊಟ್ಟರು.

> ಕನ್ನಡ ಭಾಷೆಯನ್ನು ನಿರ್ಲಕ್ಷಿಸಿದರೆ ತಾಯಿಯನ್ನು ನಿರ್ಲಕ್ಷಿಸಿದಂತೆ. ಮಾತೃಭಾಷೆಯ ಬಗ್ಗೆ ನಿರ್ಲಕ್ಷ್ಯ ಸಲ್ಲದು. ಕನ್ನಡಿಗರೆಲ್ಲರೂ ಪ್ರತಿ ಸಂದರ್ಭಗಳಲ್ಲಿಯೂ ಕನ್ನಡ ಭಾಷೆಯನ್ನು ಹೆಚ್ಚಾಗಿ ಬಳಕೆ ಮಾಡಬೇಕು. ನಮ್ಮ ಸಂಸ್ಕೃತಿ, ಭಾಷೆಯ ಜೊತೆಗೆ ಅನನ್ಯ ಸಂಬಂಧ ಬೆಳೆಸಿಕೊಳ್ಳಬೇಕು. 'ಪ್ರಭುಲಿಂಗಲೀಲೆ'ಯನ್ನು ಚಾಮರಸ, 'ಕರ್ನಾಟ ಭಾರತ ಕಥಾಮಂಜರಿ'ಯನ್ನು ರಚಿಸಿದ ಕುಮಾರವ್ಯಾಸ ಗದುಗಿನವರೇ ಆಗಿದ್ದು, ಕನ್ನಡ ಭಾಷೆಗೆ ಗದುಗಿನ ಕೊಡುಗೆ ಅಪಾರ.
> – ಡಾ. ತೋಂಟದ ಸಿದ್ಧರಾಮ ಶ್ರೀಗಳು.

ಶಿವಾನುಭವದಲ್ಲಿ ಡಾ. ಅರ್ಜುನ ಗೊಳಸಂಗಿ, ರಾಜ್ಯಾಧ್ಯಕ್ಷರು ದಲಿತ ಸಾಹಿತ್ಯ ಪರಿಷತ್ತು, ಕಲಾಚೇತನ ಸಾಂಸ್ಕೃತಿಕ ಅಕಾಡೆಮಿ ಸಂಸ್ಥಾಪಕ ಕಾವೆಂಶ್ರೀ, ಕನ್ನಡ ಭಾಷಾ ಉಪನ್ಯಾಸಕ ಬಾಹುಬಲಿ ಜೈನರ್ ಅವರು ಸಂಮಾನ ಸ್ವೀಕರಿಸಿ ಮಾತನಾಡಿದರು.

ಜೆ.ಟಿ. ಪ್ರೌಢಶಾಲೆ, ಡಂಬಳ ವಿದ್ಯಾರ್ಥಿಗಳಿಂದ ನಾಡು-ನುಡಿ ಗೀತಗಾಯನ ನಡೆಯಿತು. ಸಿದ್ಧಾರ್ಥ ಈರಣ್ಣ ಮುರ್ಲಾಪೂರ ಧರ್ಮಗ್ರಂಥ ಪಠಣಗೈದರು. ಅಪೂರ್ವ ಈರಣ್ಣ ಮುರ್ಲಾಪೂರ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ವಹಿಸಿದ ರವೀಂದ್ರ ಎಸ್.ಗದಗ ಮತ್ತು ಶರಣು ವಿ.ಗದಗ ಹಾಗೂ ಕುಟುಂಬವರ್ಗದವರನ್ನು ಶ್ರೀಗಳು ಸಂಮಾನಿಸಿದರು.

ಸರ್ವರನ್ನು ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ.ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್‌ರಾದ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

## ಸಾರ್ವಜನಿಕ ಕೆಲಸದಲ್ಲಿ ವಿಳಂಬ ಧೋರಣೆ ಸಲ್ಲದು



■ವಿಜಯಸಾಕ್ಷಿ ಸುದ್ದಿ, ರೋಣ

ಸರಕಾರಿ ಕೆಲಸ ಅರಸಿ ಬರುವ ಸಾರ್ವಜನಿಕರ ಕೆಲಸದಲ್ಲಿ ನೌಕರರು ವಿಳಂಬ ಧೋರಣೆಯನ್ನು ಅನುಸರಿಸಿದರೆ ಅದನ್ನು ಸಹಿಸಲು ಸಾಧ್ಯವಿಲ್ಲ ಎಂದು ಲೋಕಾಯುಕ್ತ ಅಧಿಕಾರಿ ರವಿ ಪುರುಷೋತ್ತಮ ಹೇಳಿದರು.

ಅವರು ಮಂಗಳವಾರ ತಹಸೀಲ್ದಾರ ಕಚೇರಿಯ ಸಭಾಂಗಣದಲ್ಲಿ ಜರಗಿದ ಭ್ರಷ್ಟಾಚಾರ ವಿರುದ್ಧ ಜಾಗೃತಿ ಅರಿವು ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸರಕಾರ ರೂಪಿಸಿರುವ ಯೋಜನೆಗಳನ್ನು ಅರಸಿ ಅಥವಾ ತಮ್ಮ ವಯಕ್ತಿಕ ಕೆಲಸಗಳನ್ನು ಬಯಸಿ ಸಾರ್ವಜನಿಕರು ಕಚೇರಿಗಳತ್ತ ಬರುತ್ತಾರೆ. ಇಂತಹ ಸಂದರ್ಭದಲ್ಲಿ ಕೆಲಸ ನಿರ್ವಹಿಸುವ ನೌಕರರು ಫಲಾನುಭವಿಗಳ ಹತ್ತಿರ ಹಣದ ಬೇಡಿಕೆಯಿಡುವುದು ಅಥವಾ ಸಕಾರಣ ಇಲ್ಲದೆ ಆತನನ್ನು ಕಚೇರಿಗೆ ಅಲೆದಾಡಿಸುವುದು ಸರಿಯಲ್ಲ. ಇದನ್ನು ಲೋಕಾಯುಕ್ತ ಸಂಸ್ಥೆ ಒಪ್ಪುವುದಿಲ್ಲ. ನೌಕರರು ಸಕಾಲಕ್ಕೆ ನಾಗರಿಕ ಸಮುದಾಯದ ಕೆಲಸ ನಿರ್ವಹಿಸಬೇಕು ಎಂದು ಸೂಚಿಸಿದರು. ಮುಖ್ಯವಾಗಿ ಸರಕಾರಿ ನೌಕರಿಗೆ ಒಳಪಟ್ಟಿರುವ ಎಲ್ಲರೂ ಸಹ ಭ್ರಷ್ಟಾಚಾರ ಮಾಡುವುದಿಲ್ಲ ಹಾಗೂ ಅದನ್ನು ಬೆಂಬಲಿಸುವುದಿಲ್ಲ ಎಂಬ ದಿಟ್ಟ ಮನೋಭಾವನೆಯನ್ನು ಹೊಂದಬೇಕು. ಇದರಿಂದ ನಾಡು ಸೇರಿದಂತೆ ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಈ ಕ್ಷಣದಿಂದ ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಲು ಮುಂದಾಗಬೇಕು ಮತ್ತು ತಮ್ಮ ಕೆಲಸದಲ್ಲಿ ದಕ್ಷತೆಯನ್ನು ತೋರಬೇಕು ಎಂದರು.

ತಹಸೀಲ್ದಾರ್ ನಾಗರಾಜ ಕೆ., ತಾ.ಪಂ ಇಒ ರವಿ ಎ.ಎನ್., ಉಪತಹಸೀಲ್ದಾರ್ ಜೆ.ಟಿ ಕೊಪ್ಪದ, ರವೀಂದ್ರ ಪಾಟೀಲ, ಜಗದೀಶ ಮಡಿವಾಳರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಲೋಕಾಯುಕ್ತ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಗದಗ :** ನವಂಬರ್ 1 ರಂದು ರಾಜ್ಯೋತ್ಸವದ ಅಂಗವಾಗಿ ಗದಗ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಿದ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಗರದ ಜಗದ್ಗುರು ತೋಂಟದಾರ್ಯ ಶಿಕ್ಷಣ ಸಂಸ್ಥೆಯ ಪ್ರಾಥಮಿಕ-ಪ್ರೌಢಶಾಲೆಯ 450ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭಿನಯಿಸಿದ ಕನ್ನಡದ ಭಾವಗೀತೆಯ ನೃತ್ಯಪ್ರದರ್ಶನ ಜನಮನಸೂರೆಗೊಂಡು ಪ್ರಥಮ ಸ್ಥಾನವನ್ನು ಪಡೆಯಿತು. ಈ ವಿದ್ಯಾರ್ಥಿಗಳಿಗೆ ಕಾನೂನು ಮತ್ತು ಸಂಸದೀಯ, ಪ್ರವಾಸೋದ್ಯಮ ಸಚಿವರಾದ ಎಚ್.ಕೆ ಪಾಟೀಲ ಪ್ರಶಸ್ತಿ ಫಲಕ ನೀಡಿದರು.

ವಿಧಾನ ಪರಿಷತ್ ಸದಸ್ಯರಾದ ಎಸ್.ವಿ ಸಂಕನೂರ, ಜಿಲ್ಲಾಧಿಕಾರಿಗಳಾದ ವೈಶಾಲಿ ಎಂ.ಎಲ್, ಶಾಲೆಯ ಮುಖ್ಯೋಪಾಧ್ಯಾಯರಾದ ಕೊಟ್ರೇಶ ಮೆಣಸಿನಕಾಯಿ, ನಾಗರಾಜ ಗಾಳಿ, ಶಿಕ್ಷಕರಾದ ಕೃಷ್ಣಾ ಗೌಡರ, ಮಹಾಂತೇಶ ಎಂ. ಉಪಸ್ಥಿತರಿದ್ದರು.

## ಮಾನವೀಯತೆ ಮೆರೆದ ಸಭಾಪತಿ ಬಸವರಾಜ ಹೊರಟ್ಟಿ ದಂಪತಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಶಹಪುರಪೇಟೆಯ ಬಸವೇಶ್ವರ ನಗರದ ವಿಶ್ವನಾಥ್ ಕಾಟವ ಕುಟುಂಬ ತಮ್ಮ ಮಗನನ್ನು ತುಮಕೂರಿನ ಪ್ರುಡೆನ್ಸಿ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಎಂಟನೇ ತರಗತಿಗೆ ಓದಿಸುತ್ತಿದ್ದು, ಪಾಲಕರ ಸಭೆಯಿರುವ ಪ್ರಯುಕ್ತ ಪ್ರಿಯಾಂಕಾ, ಗಾಯತ್ರಿ, ಇಬ್ಬರೂ ಸಹೋದರಿಯರು ತಮ್ಮ ತಮ್ಮನನ್ನು ಬಿಡಲು ತುಮಕೂರಿಗೆ ತೆರಳುತ್ತಿದ್ದರು. ಚಿತ್ರದುರ್ಗದ ಬಳಿ ಬೇರೊಂದು ಕಾರು ಇವರ ಕಾರಿಗೆ ಡಿಕ್ಕಿ ಹೊಡೆದು, ಗಾಯತ್ರಿ ಹಾಗೂ ಅವರ ತಮ್ಮ ದಿವಿತ್ವನಿಗೆ ಗಂಭೀರ ಗಾಯವಾಗಿತ್ತು.



ಇದೇ ಸಮಯಕ್ಕೆ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಬೆಂಗಳೂರಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಮುಗಿಸಿ ಹುಬ್ಬಳ್ಳಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಈ ಘಟನೆಯನ್ನು ಕಂಡು ತಕ್ಷಣ ಸ್ಪಂದಿಸಿ ಗಾಯಾಳುಗಳನ್ನ ಚಿತ್ರದುರ್ಗದ ಸರ್ಕಾರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಸೂಕ್ತ ಚಿಕಿತ್ಸೆಯನ್ನು ಕೊಡಿಸಲು ಏರ್ಪಾಟು ಮಾಡಿದರು. ನಂತರ ಚಿತ್ರದುರ್ಗ ಹಾಗೂ ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಮಾಹಿತಿಯನ್ನು ತಿಳಿಸಿ ಕಾಳಜಿ ವಹಿಸುವಂತೆ ಹಾಗೂ ಗದಗಿಗೆ ಅವರನ್ನು ಸುರಕ್ಷಿತವಾಗಿ ಕಳಿಸಲು ವ್ಯವಸ್ಥೆ ಮಾಡಿದರು.

ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾನವೀಯತೆಯನ್ನು ಕಂಡು ಅಲ್ಲಿ ಸೇರಿದ ಜನ ಮೆಚ್ಚುಗೆ ವ್ಯಕ್ತಪಡಿಸಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾನವೀಯತೆ, ಸಮಾಜಮುಖಿ ಕಾಳಜಿ ಎಲ್ಲರದಾಗಲಿ ಎಂದು ಆಶಯ ವ್ಯಕ್ತಪಡಿಸಿದರು ಎಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

## ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಲ್ಲಭಭಾಯಿ ಪಟೇಲ್ ಜಯಂತಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭಾರತದ ಏಕೀಕರಣದ ರೂವಾರಿ, ಅಭಿವೃದ್ಧಿಯ ಹರಿಕಾರ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಸ್ವಾತಂತ್ರ್ಯಾನಂತರ ಹಂಚಿ ಹೋಗಿದ್ದ ಸಂಸ್ಥಾನಗಳನ್ನು ವಿಲೀನಗೊಳಿಸಿ ಅಖಂಡ ಭಾರತದ ಪರಿಕಲ್ಪನೆಗೆ ಮುನ್ನುಡಿ ಬರೆದಿದ್ದಾರೆ ಎಂದು ಲಕ್ಷ್ಮೇಶ್ವರದ ಅಗಡಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಉದಯಕುಮಾರ ಹಂಪಣ್ಣವರ ಹೇಳಿದರು.

ಅವರು ಮಂಗಳವಾರ ಪಟ್ಟಣದ ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜಯಂತಿ ಅಂಗವಾಗಿ ರಾಷ್ಟ್ರೀಯ ಏಕತಾ ದಿನಾಚರಣೆ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧನೆ ವೇಳೆ ಮಾತನಾಡಿ, ಭಾರದ ಏಕತೆ, ಸಮಗ್ರತೆಯ ದೂರದೃಷ್ಟಿಯ ಮೇರು ವ್ಯಕ್ತಿತ್ವದ ಮಹಾನ್ ನಾಯಕರಾದ ಅವರ ಚಿಂತನೆ, ಕಲ್ಪನೆ, ಆದರ್ಶಗಳು ಇಂದಿನ ಯುವ ಪೀಳಿಗೆಗೆ ಮಾರ್ಗದರ್ಶನವಾಗಿವೆ ಎಂದರು.

ಈ ವೇಳೆ ವಿದ್ಯಾರ್ಥಿಗಳಿಗೆ ದೇಶದ ಏಕತೆ ಮತ್ತು ಸಮಗ್ರತೆ ಕೈಗೊಳ್ಳುವ ಕುರಿತು ಪ್ರತಿಜ್ಞಾವಿಧಿ ಬೋಧಿಸಲಾಯಿತು. ಉಪಪ್ರಾಚಾರ್ಯ ಡಾ. ಪರಶುರಾಮ ಬಾರ್ಕಿ, ಪ.ಪೂ ಕಾಲೇಜಿನ ಪ್ರಾಚಾರ್ಯ ಡಾ. ಎನ್. ಹಯವದನ, ಪ್ರೊ. ಸೋಮಶೇಖರ ಕೆರಿಮನಿ, ಪ್ರೊ. ಅರುಣ ತಂಡಿ ಸೇರಿ ಹಲವರಿದ್ದರು.

### ಏಕೀಕರಣದ ರೂವಾರಿಗೆ ಸರಕಾರದ ಸ್ಮಾರಕ ಕೊಡುಗೆ । ಸಾರ್ವಜನಿಕರಲ್ಲಿ ಸಂತಸ

# ಅಂದಾನಪ್ಪ ದೊಡ್ಡಮೇಟಿಯವರ ದೊಡ್ಡ ನಡೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಕರ್ನಾಟಕದಲ್ಲಿನ ಎಲ್ಲ ಭಾಗಗಳನ್ನು ಸೇರಿಸಿ ಒಂದು ಮಾದರಿ ರಾಜ್ಯ ಮಾಡಲು ಹೋರಾಟದ ಇತಿಹಾಸ ನಮ್ಮ ಕಣ್ಣ ಮುಂದಿದೆ. ಅದಕ್ಕೆ ಕರ್ನಾಟಕದ ಏಕೀಕರಣ ಹೋರಾಟ ಸಮಿತಿ ಎಂಬ ಸಂಸ್ಥೆಯೊಂದು ಜನ್ಮ ತಾಳಿ ತನ್ನ ಹೋರಾಟವನ್ನು ಮುಂದುವರೆಸಿತು.

ಸಮಿತಿ ನಿರ್ಮಾಣಕ್ಕೂ ಮುಂಚೆ ಮೈಸೂರು ರಾಜ್ಯ ಉದಯವಾದ ಒಂದೇ ವರ್ಷದಲ್ಲಿ ಅಂದರೆ 1957ರಲ್ಲಿಯೇ ಅಂದಾನಪ್ಪ ದೊಡ್ಡಮೇಟಿಯವರು ನಮಗೆ ಮೈಸೂರು ರಾಜ್ಯ ಎಂಬ ಹೆಸರು ಬೇಡ. ಕರ್ನಾಟಕ ಎಂಬ ಹೆಸರು ಬೇಕೆಂದು ಆಗಲೇ ಗುಡುಗಿದ್ದರು. ಈ ಆಶಯಕ್ಕೆ ರಾಜ್ಯ ವಿಧಾನಸಭೆಯಲ್ಲಿ ಯಾವ ಮಾನ್ಯತೆಯೂ ಸಿಗದಿದ್ದಾಗ, ಹೋರಾಟವೊಂದೇ ದಾರಿ ಎಂದು ರಚನೆಯಾದ ಈ ಸಮಿತಿಯಲ್ಲಿ ಸಮೀಪದ ಜಕ್ಕಲಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರ ಅಂದಾನಪ್ಪ ದೊಡ್ಡಮೇಟಿ ಮುಂಚೂಣಿಯಲ್ಲಿ ನಿಂತು ಕರ್ನಾಟಕದ ಏಕೀಕರಣದ ರೂವಾರಿ ಎನಿಸಿಕೊಂಡರು.

ಮೈಸೂರು ರಾಜ್ಯ ಉದಯಿಸಿದ ಕೆಲವೇ ವರ್ಷಗಳಲ್ಲಿ ಈ ಹೋರಾಟ ಪ್ರಾರಂಭವಾದರೂ ಅದಕ್ಕೆ ಜಯ ಸಿಕ್ಕಿದ್ದು ಮಾತ್ರ 1973ರಲ್ಲಿ, ಡಿ. ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ. ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು 1973ರ ನವಂಬರ್ 1ರಂದು ಮೈಸೂರು ರಾಜ್ಯವನ್ನು ಕರ್ನಾಟಕವೆಂದು ಘೋಷಿಸಿದರು. ಈ 2023ಕ್ಕೆ ಕರ್ನಾಟಕವೆಂದು ಹೆಸರಾಗಿ ಐವತ್ತು ವರ್ಷಗಳಾದ ಪ್ರಯುಕ್ತ ರಾಜ್ಯ ಸರಕಾರ ಸುವರ್ಣ ಸಂಭ್ರಮ ಆಚರಿಸುತ್ತಿದೆ.

ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಮಾಡುವಲ್ಲಿ ಅಹರ್ನಿಶಿ ಶ್ರಮಿಸಿದ ಅಂದಾನಪ್ಪನವರಿಗೆ ಆ ಯೋಗವನ್ನು ಕಾಣುವ ಭಾಗ್ಯವಿರಲಿಲ್ಲ. ಏಕೆಂದರೆ ಕರ್ನಾಟಕ ಎಂದು ಹೆಸರಾದದ್ದು 1973ರ ನವಂಬರ್ 1ರಂದು. ಅಂದಾನಪ್ಪ ದೊಡ್ಡಮೇಟಿಯವರು ಕೊನೆಯುಸಿರೆಳೆದದ್ದು 1972ರ ಫೆಬ್ರುವರಿ 21ರಂದು. ಇದರೊಂದಿಗೆ, ಅಂದಾನಪ್ಪನರು ಕರ್ನಾಟಕದ ಭುವನೇಶ್ವರಿ ಚಿತ್ರ ಹೇಗಿರಬೇಕೆಂಬ ಕಲ್ಪನೆಯನ್ನು ಎಲ್ಲರಿಗಿಂತ ಮೊದಲೇ ತಮ್ಮ ಮನದಲ್ಲಿ ಮಾಡಿಕೊಂಡಿದ್ದರು. ಗದಗನ ಕಲಾವಿದ ಸಿ.ಎನ್ ಪಾಟೀಲರಿಗೆ ಹೇಳಿ ತಮ್ಮ ಕನಸಿನ ಭುವನೇಶ್ವರಿಯ ಆಳೆತ್ತರದ ತೈಲ ಚಿತ್ರವನ್ನು ಬರೆಸಿದ್ದರು. ಇಂದಿಗೂ ಜಕ್ಕಲಿಯ ಅವರ ಮನೆಯಲ್ಲಿ ಆ ಚಿತ್ರ ನಿತ್ಯವೂ ಪೂಜೆಗೊಳ್ಳುತ್ತಿದೆ. ಅವರ ಮನೆಯಲ್ಲಿರುವ ಈ ಭಾವಚಿತ್ರವನ್ನೇ ಅಧಿಕೃತ ಚಿತ್ರವನ್ನಾಗಿಸಿ ಎಂದು ಹೋರಾಟ ಮಾಡಿದರು. ಈ ಮೂಲಕ ಕರ್ನಾಟಕದ ಏಕೀಕರಣದ ಹೋರಾಟ ಕೈಗೊಂಡ ಅಂದಾನಪ್ಪನವರ ಆತ್ಮಕ್ಕೆ ಚಿರಶಾಂತಿ ನೀಡಿದಂತಾಗುತ್ತದೆ ಎಂಬುದು ಎಲ್ಲರ ಕೂಗಾಗಿತ್ತು.



> 1972ರಲ್ಲಿ ನಿಧನರಾದ ಅಂದಾನಪ್ಪನವರ ಅಂತ್ಯಕ್ರಿಯೆ ನರೇಗಲ್ಲ ರಸ್ತೆಯಲ್ಲಿರುವ ಅವರ ಹೊಲದಲ್ಲಿ ನಡೆಯಿತು. ಒಬ್ಬ ಸ್ವಾತಂತ್ರ್ಯ ಸೇನಾನಿಯ, ಓರ್ವ ಕನ್ನಡಪರ ಹೋರಾಟಗಾರನ ಸಮಾಧಿ ಅನಾಥ ಸ್ಥಿತಿಯಲ್ಲಿದ್ದುದನ್ನು ಕಂಡು ಇಷ್ಟು ವರ್ಷಗಳವರೆಗೆ ಕನ್ನಡದ ಮನಸ್ಸುಗಳು ಮಮ್ಮಲ ಮರುಗಿದವು. ಆದರೆ ಈ ಸಾರೆ ನವಂಬರ್ 1ರ ರಾಜ್ಯೋತ್ಸವದ ಆಚರಣೆಯ ಹಿನ್ನೆಲೆಯಲ್ಲಿ, ದೊಡ್ಡಮೇಟಿಯವರು ಮೃತರಾಗಿ ಐವತ್ತು ವರ್ಷಗಳು ಕಳೆದ ನಂತರ ಅವರ ಸಮಾಧಿಗೆ ಕಾಯಕಲ್ಪ ಸಿಗುತ್ತಿರುವುದು ಉತ್ತರ ಕರ್ನಾಟಕದ ಮಂದಿಗೆ ಬಹಳಷ್ಟು ಸಂತಸವಾಗಿದೆ. ಈ ದಿಟ್ಟ ನಿರ್ಧಾರ ತೆಗೆದುಕೊಂಡು, ದಿಟ್ಟ ಹೆಜ್ಜೆಯನ್ನಿಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಮತ್ತು ರೋಣ ಶಾಸಕ ಜಿ.ಎಸ್ ಪಾಟೀಲರನ್ನು ಈ ಭಾಗದ ಮಂದಿ ಅಭಿನಂದಿಸಿದ್ದಾರೆ. ಸ್ಮಾರಕ ನಿರ್ಮಾಣದ ಕಾರ್ಯ ಅತಿ ಬೇಗನ ಪ್ರಾರಂಭವಾಗಲಿ ಎಂದೂ ಜನತೆ ಹಾರೈಸಿದ್ದಾರೆ.

## ಕನ್ನಡ ಹೃದಯದ ಭಾಷೆ ಆಗಬೇಕು: ಅರುಣ ಕುಲಕರ್ಣಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಕನ್ನಡವನ್ನು ಸರಿಯಾಗಿ ಓದುವ, ಶುದ್ಧವಾಗಿ ಬರೆಯುವ ಗುಣವನ್ನು ನಾವೆಲ್ಲರೂ ಬೆಳಸಿಕೊಂಡಾಗಲೇ ಕನ್ನಡ ಎಲ್ಲರ ಮನೆ ಮನಗಳಲ್ಲಿ ಅರಳಲು ಸಾಧ್ಯ. ಈ ನಿಟ್ಟಿನಲ್ಲಿ ಕನ್ನಡ ನಮ್ಮೆಲ್ಲರ ಹೃದಯದ ಭಾಷೆ ಆಗಬೇಕು ಎಂದು ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಹೇಳಿದರು.

ಪಟ್ಟಣದ ಶ್ರೀ ಅನ್ನದಾನೇಶ್ವರ ಪ್ರೌಢಶಾಲೆಯಲ್ಲಿ ಕಸಾಪ ಹೋಬಳಿ ಘಟಕವು ಏರ್ಪಡಿಸಿದ್ದ 'ಕರ್ನಾಟಕ ರಾಜ್ಯ ಸುವರ್ಣ ಸಂಭ್ರಮ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ನಾಡು ಕರ್ನಾಟಕವೆಂದು ಹೆಸರಾಗಲು ಅನೇಕ ಮಹನೀಯರು ಹೋರಾಟ ನಡೆಸಿದ್ದಾರೆ. ಅವರೆಲ್ಲರ ಶ್ರಮದಿಂದ ಮೈಸೂರು ರಾಜ್ಯವಿಂದು ಕರ್ನಾಟಕವೆಂದು ಹೆಸರಾಗಿದೆ. ಈ ಸಂದರ್ಭದಲ್ಲಿ ಆ ಎಲ್ಲ ಮಹನೀಯರಿಗೆ ನಾವು ಕೃತಜ್ಞತೆಗಳನ್ನು ಸಲ್ಲಿಸಬೇಕೆಂದು ಕುಲಕರ್ಣಿ ತಿಳಿಸಿದರು.



ನಿವೃತ್ತ ಶಿಕ್ಷಕ ಎಂ.ಎಸ್. ದಢೇಸೂರಮಠ ಮಾತನಾಡಿ, ಮಹಾರಾಷ್ಟ್ರದವರೆಗೂ ನಮ್ಮ ನಾಡಿನ ಗಡಿ ಇತ್ತೆಂಬುದು ಅಲ್ಲಿರುವ ಕನ್ನಡ ಎಂಬ ತಾಲೂಕು ನಮಗೆ ಸಾಕ್ಷಿ ಒದಗಸುತ್ತದೆ. ನಮ್ಮ ನಾಡಿನ ನೆಲ, ಜಲ, ಭಾಷೆಯ ಬಗ್ಗೆ ನಮಗೆಲ್ಲರಿಗೂ ಯಾವಾಗಲೂ ಅರಿವು ಇರಬೇಕೆಂದರು.

ಸಮಾರಂಭದ ಅಧ್ಯಕ್ಷತೆಯನ್ನು ಹೋಬಳಿ ಘಟಕದ ಅಧ್ಯಕ್ಷ ಎಂ.ವಿ.ವೀರಾಪೂರ ವಹಿಸಿದ್ದರು.

ಪ್ರಾಧ್ಯಾಪಕ ಡಾ. ಕಲ್ಲಯ್ಯ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಎಂ.ಕೆ. ಬೇವಿನಕಟ್ಟಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯ ಮೇಲೆ ಪತ್ರಕರ್ತರ ಸಂಘದ ಅಧ್ಯಕ್ಷ ಈಶ್ವರ ಬೆಟಗೇರಿ, ತಾಲೂಕಾ ಕಸಾಪ ಕಾರ್ಯದರ್ಶಿ ಬಿ.ಬಿ. ಕುರಿ ಉಪಸ್ಥಿತರಿದ್ದರು.

ಸುರೇಶ ಹಳ್ಳಿಕೇರಿ ಸ್ವಾಗತಿಸಿದರು. ವಿ.ಎ. ಕುಂಬಾರ ಕಾರ್ಯಕ್ರಮ ನಿರೂಪಿಸಿದರು. ಎಚ್.ವಿ. ಈಟಿ ವಂದಿಸಿದರು.

ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವ 'ಕರ್ನಾಟಕ ಸಂಭ್ರಮ-50'

# ಸಾರ್ವಜನಿಕ ಸಭೆ, ವೇದಿಕೆ ಕಾರ್ಯಕ್ರಮಗಳಿಗೆ ಸಜ್ಜಾದ ನಗರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆಯಿಂದ ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವದ ಕರ್ನಾಟಕ ಸಂಭ್ರಮ-50 ಸಮಾರಂಭವನ್ನು ನವೆಂಬರ್ 1, 2 ಮತ್ತು 3ರಂದು ನಗರದ ದಿ. ಕಾಟನ್ ಸೇಲ್ ಸೊಸೈಟಿ ಅವರಣದಲ್ಲಿ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ನವೆಂಬರ್ 3ರಂದು ಬೆಳಿಗ್ಗೆ 11.30 ಗಂಟೆಗೆ ಸಾರ್ವಜನಿಕ ಸಭೆ ಏರ್ಪಡಿಸಲಾಗಿದೆ.

ಕರ್ನಾಟಕ ಸಂಭ್ರಮ-50ರ ಕನ್ನಡ ಜ್ಯೋತಿ ಸ್ವೀಕಾರ: ನವೆಂಬರ್ 3 ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ಕರ್ನಾಟಕ ಸಂಭ್ರಮ-50ರ ಕನ್ನಡ ಜ್ಯೋತಿ ಸ್ವೀಕಾರ ಕಾರ್ಯಕ್ರಮ ಜರುಗಲಿದೆ.

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಕರ್ನಾಟಕ ಸಂಭ್ರಮ-50ರ ಕನ್ನಡ ಜ್ಯೋತಿ ಸ್ವೀಕಾರ ಮಾಡುವರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿ.ಪ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಫರೀದ್, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಕಾರ್ಯಕ್ರಮದಲ್ಲಿ ಘನ ಉಪಸ್ಥಿತಿ ವಹಿಸುವರು.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ.ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ನಗರದ ಶ್ರೀ ವೀರನಾರಾಯಣ ದೇವಸ್ಥಾನದಿಂದ ನಾಡದೇವತೆ ತಾಯಿ ಭುವನೇಶ್ವರಿಗೆ ಪುಷ್ಪಾರ್ಚನೆ ಮೂಲಕ ಕರ್ನಾಟಕ ಸಂಭ್ರಮ-50ರ ಮೆರವಣಿಗೆ ಪ್ರಾರಂಭಗೊಳ್ಳಲಿದ್ದು, ಅಲ್ಲಿಂದ ಜಾಮೀಯಾ ಮಸೀದಿ, ಬಸವೇಶ್ವರ ವೃತ್ತ, ಕೆ.ಎಚ್.ಪಾಟೀಲ ವೃತ್ತ, ಪಂ.ಪುಟ್ಟರಾಜ ಗವಾಯಿಗಳ ವೃತ್ತ(ಭೂಮರಡ್ಡಿ ವೃತ್ತ), ಜನರಲ್ ಕಾರಿಯಪ್ಪ ವೃತ್ತದ ಮೂಲಕ ದಿ. ಕಾಟನ್ ಸೇಲ್ ಸೊಸೈಟಿಗೆ ತಲುಪಲಿದೆ.

ವೇದಿಕೆ ಕಾರ್ಯಕ್ರಮ: ನವೆಂಬರ್ 3ರಂದು ಮಧ್ಯಾಹ್ನ 11.30 ಗಂಟೆಗೆ ನಗರದ ದಿ.ಕಾಟನ್ ಸೇಲ್ ಸೊಸೈಟಿಯಲ್ಲಿನ ಡಿ.ದೇವರಾಜ ಅರಸು ಮಂಟಪ ಶ್ರೀ ಕೆ.ಎಚ್.ಪಾಟೀಲ ವೇದಿಕೆಯಲ್ಲಿ ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವದ ಕರ್ನಾಟಕ ಸಂಭ್ರಮ-50ರ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಉದ್ಘಾಟಿಸಲಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಫರೀದ್, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ.ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್.ಮುನಿಯಪ್ಪ, ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ, ಇಂಧನ ಸಚಿವ ಕೆ.ಜೆ. ಜಾರ್ಜ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡೂರಾವ್, ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಜವಳಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ವಸತಿ ಹಾಗೂ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಝಡ್ ಜಮೀರ್ ಅಹ್ಮದ್ ಖಾನ್, ಸಣ್ಣ ಕೈಗಾರಿಕಾ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವ ಶರಣಬಸಪ್ಪ ದರ್ಶನಾಪೂರ, ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವ ಈಶ್ವರ್ ಖಂಡ್ರೆ, ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಗಣಿ ಮತ್ತು ಭೂ ವಿಜ್ಞಾನ ಹಾಗೂ ತೆ-ೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್, ಕಾರ್ಮಿಕ ಸಚಿವ ಸಂತೋಷ ಎಸ್ ಲಾಡ್, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ, ಅಬಕಾರಿ ಸಚಿವ ತಿಮ್ಮಾಪುರ ರಾಮಪ್ಪ ಬಾಳಪ್ಪ, ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಸಚಿವ ಡಿ.ಸುಧಾಕರ್, ಯುವಜನಸೇವೆ, ಕ್ರೀಡೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ, ಸಹಕಾರ ಸಚಿವ ಕ್ಯಾತ್ಸಂದ್ರ ಎನ್ ರಾಜಣ್ಣ, ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಂಕಾಳ ವೈದ್ಯ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು, ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ಕಾರ್ಯಕ್ರಮದಲ್ಲಿ ಕರ್ನಾಟಕ ನಾಮಕರಣ ಮಹೋತ್ಸವದ ಪುಸ್ತಕ ಬಿಡುಗಡೆ, ಕರ್ನಾಟಕ ನಾಮಕರಣ ಅಪರೂಪದ ಭಾವಚಿತ್ರಗಳ ಪ್ರದರ್ಶನ, ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯದ ಹತ್ತು ಜಿಲ್ಲೆಗಳ ಗ್ರಾಮ ಚರಿತ ಕೋಶ ಬಿಡುಗಡೆ, ಗದಗ ಜಿಲ್ಲೆಯ ಪ್ರವಾಸಿ ತಾಣಗಳ ಪ್ರದರ್ಶನಗಳು ಜರುಗಲಿವೆ.

ವಿಶೇಷ ಆಹ್ವಾನಿತರಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಡಾ.ಎನ್.ಮಂಜುಳಾ, ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ.ರಾಮಪ್ರಸಾತ್ ಮನೋಹರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಡಾ.ಕೆ.ಧರಣಿದೇವಿ ಆಗಮಿಸುವರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೈ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಡಾ.ಶರಣು ಗೋಗೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಮಡ್ಲೂರ ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಇಂದಿನ ಜಿಲ್ಲಾ ಪ್ರವಾಸ ಕಾರ್ಯಕ್ರಮ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನವೆಂಬರ್ 3 ರಂದು ಗದಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದು, ಅವರ ಪರಿಷ್ಕೃತ ಜಿಲ್ಲಾ ಪ್ರವಾಸ ಕಾರ್ಯಕ್ರಮದ ವಿವರ ಇಂತಿದೆ.

ನವೆಂಬರ್ 3 ರಂದು ಬೆಳಿಗ್ಗೆ 11 ಗಂಟೆಗೆ ಹಂಪಿ ಹೊಸಪೇಟೆಯ ಕಮಲಾಪುರದಿಂದ ರಸ್ತೆ ಮೂಲಕ ಗದುಗಿಗೆ ಆಗಮಿಸಿ ಗದುಗಿನ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ಕರ್ನಾಟಕ ಸಂಭ್ರಮ 50 ರ ಕನ್ನಡ ಜ್ಯೋತಿ ಸ್ವೀಕಾರ ಹಾಗೂ ಮೆರವಣಿಗೆಯಲ್ಲಿ ಪಾಲ್ಗೊಳ್ಳುವರು.

ಬೆಳಿಗ್ಗೆ 11.45 ಗಂಟೆಗೆ ನಗರದ ಭೂಮರಡ್ಡಿ ವೃತ್ತದಲ್ಲಿ ಕರ್ನಾಟಕ ಸಂಭ್ರಮ-50 ರ ಸ್ಮಾರಕ ಅನಾವರಣಗೊಳಸಲಿದ್ದಾರೆ. ಮಧ್ಯಾಹ್ನ 12.15 ಗಂಟೆಗೆ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಕರ್ನಾಟಕ ಸಂಭ್ರಮ-50 ರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 1.45 ಗಂಟೆಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ನಿರ್ಮಿಸಿರುವ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ 450 ಹಾಸಿಗೆಗಳ ಬೋಧಕ ಆಸ್ಪತ್ರೆಯ ಕಟ್ಟಡ ಉದ್ಘಾಟನೆ ಹಾಗೂ ಸೂಪರ್ ಸ್ಪೆಷಾಲಿಟಿ ಹೃದಯ ಆರೈಕೆ ಶಿಲಾನ್ಯಾಸ ಮತ್ತು ರಕ್ತ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 2 ಗಂಟೆಗೆ ನಾಗಾವಿಯ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿ ಸಬರಮತಿ ಆಶ್ರಮಕ್ಕೆ ಭೇಟಿ ನೀಡಿ ವಿಶ್ವವಿದ್ಯಾಲಯದ ಅಧ್ಯಯನ ಶಾಖೆ-2 ರ ಕಟ್ಟಡದ ಶಂಕುಸ್ಥಾಪನೆ ನೆರವೇರಿಸುವರು. ಸಂಜೆ 4 ಗಂಟೆಗೆ ಗದುಗಿನಿಂದ ರಸ್ತೆಯ ಮೂಲಕ ಹುಬ್ಬಳ್ಳಿಗೆ ತೆರಳಿ ಅಲ್ಲಿಂದ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣ ಮಾಡುವರು ಎಂದು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲಂಕಾ ವಿರುದ್ಧ 303 ರನ್‌ಗಳ ಜಯ: ವಿಶ್ವಕಪ್-2023 ಸೆಮಿಫೈನಲ್ಸ್ ಪ್ರವೇಶಿಸಿದ ಭಾರತ

■ವಿಜಯಸಾಕ್ಷಿ ಸುದ್ದಿ, ಮುಂಬೈ

ಮುಂಬೈ ನಲ್ಲಿ ನಡೆದ ಒಡಿಐ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಎದುರಾಳಿ ತಂಡ ಶ್ರೀಲಂಕಾ ವಿರುದ್ಧ ಬರೊಬ್ಬರಿ 303 ರನ್ ಗಳ ಜಯ ಗಳಿಸಿದೆ.

ಈ ಗೆಲುವಿನ ಮೂಲಕ ಟೂರ್ನಿಯಲ್ಲಿ ಭಾರತ ತಂಡ ಸೆಮಿಫೈನಲ್ಸ್ ಪ್ರವೇಶಿಸಿದೆ.

ಟಾಸ್ ನಂತರ ಶ್ರೀಲಂಕಾ, ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಿಗದಿತ 50 ಓವರ್ ಗಳಲ್ಲಿ ಭಾರತ ಕ್ರಿಕೆಟ್ ತಂಡ 7 ವಿಕೆಟ್ ನಷ್ಟಕ್ಕೆ 357 ರನ್ ಗಳಿಸಿತು.





